

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 9 ಶನಿವಾರ 2023

ಸಂಪುಟ: 44 | ಸಂಚಿಕೆ: 232 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..





ಹಿರಿಯ ನಟಿ ಲೀಲಾವತಿ ಇನ್ನಿಲ್ಲ

● ಕನ್ನಡವೂ ಸೇರಿದಂತೆ 600 ಚಿತ್ರಗಳಲ್ಲಿ ನಟಿಸಿದ್ದರು ● ಇಂದು ನೆಲಮಂಗಲದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಅಂತಿಮ ದರ್ಶನ ವ್ಯವಸ್ಥೆ; ನಂತರ ಅವರ ಸೋಲದೇವನಹಳ್ಳಿ ತೋಟದಲ್ಲಿ ಅಂತ್ಯಕ್ರಿಯೆ

ಬೆಂಗಳೂರು, ಡಿ.8–ಹಿರಿಯ ನಟಿ ಲೀಲಾವತಿಯವರು ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ರಾತ್ರಿ ನೆಲಮಂಗಲದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ 85 ವರ್ಷ ವಯಸ್ಸಾಗಿತ್ತು. ಕಳೆದ ಎರಡು ತಿಂಗಳಿಂದ ತೀವ್ರ ಅನಾರೋಗ್ಯ ಪೀಡಿತರಾಗಿದ್ದ ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ಬಳಿ ಇರುವ ಅವರ ಸೋಲದೇವನಹಳ್ಳಿ ತೋಟದ ಮನೆಯಲ್ಲೇ ಕುಟುಂಬ ವೈದ್ಯ ಡಾ.ವಿಕಾಸ್ ಅವರು ಚಿಕಿತ್ಸೆ ನೀಡುತ್ತಿದ್ದರು. ಇಂದು ಸಂಜೆ ಉಸಿರಾಟದ ತೊಂದರೆ ತೀವ್ರವಾದ ಹಿನ್ನೆಲೆಯಲ್ಲಿ ಲೀಲಾವತಿಯವರನ್ನು ನೆಲಮಂಗಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದರು. ತಾನು ಕಷ್ಟದಲ್ಲಿದ್ದರೂ ಕೂಡ ಇತರರಿಗೆ ಸಹಾಯ ಹಸ್ತ ಚಾಚುವ ಪರೋಪಕಾರಿಯಾದ ಲೀಲಾವತಿಯವರು, ನೆಲಮಂಗಲ ಸುತ್ತಮುತ್ತಲ ಗ್ರಾಮಸ್ಥರಿಗೆ ಪ್ರೀತಿಪಾತ್ರರಾಗಿದ್ದರು. ಸೋಲದೇವನಹಳ್ಳಿಯ ಪ್ರತಿ ಮನೆಯವರು ಲೀಲಾವತಿಯವರನ್ನು ತಮ್ಮ ಮನೆಯ ಹಿರಿಯರೆಂದೇ ಭಾವಿಸುತ್ತಿದ್ದರು. ಚಿತ್ರರಂಗದಲ್ಲೂ ಕೂಡ ಅಪಾರ ಹೆಸರು ಗಳಿಸಿರುವ ಅವರು, ಚಿತ್ರರಂಗದ ಗಣ್ಯರು ಹಾಗೂ ಉದಯೋನ್ಮುಖ ನಟ–ನಟಿಯರಿಗೆ ಅಚ್ಚುಮೆಚ್ಚು. ಈ ಹಿನ್ನೆಲೆಯಲ್ಲಿ ಅವರ ಅಂತಿಮ ದರ್ಶನಕ್ಕಾಗಿ ಸಾವಿರಾರು ಮಂದಿ ಆಗಮಿಸಬಹುದು ಎಂದು ಪೊಲೀಸರು ಅಂದಾಜಿಸಿದ್ದಾರೆ.

ಲೀಲಾವತಿಯವರ ಅಂತಿಮ ದರ್ಶನಕ್ಕಾಗಿ ನೆಲಮಂಗಲದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿ ತಿಳಿಸಿದ್ದಾರೆ. ಭದ್ರತೆಗಾಗಿ ಎಸ್ಪಿ ಹಾಗೂ ಅಡಿಷನಲ್ ಎಸ್ಪಿ ನೇತೃತ್ವದಲ್ಲಿ 6 ಡಿವೈಎಸ್‌ಪಿ, 15 ಪೊಲೀಸ್ ಇನ್ಸ್‌ಪೆಕ್ಟರ್ ಒಳಗೊಂಡಂತೆ 500 ಪೊಲೀಸರನ್ನು ಈಗಾಗಲೇ ನಿಯೋಜಿಸಲಾಗಿದೆ. ಲೀಲಾವತಿಯವರಿಗೆ ಅಂತಿಮ ನಮನ ಸಲ್ಲಿಸಲು ಬರುವವರಿಗೆ ಯಾವುದೇ ರೀತಿಯ ಅಡತಡೆಗಳಾಗದಂತೆ ವ್ಯವಸ್ಥೆ ಮಾಡಲಾಗಿದೆ. ವಿವಿಐಪಿಗಳು ಹಾಗೂ ಸಿನಿಮಾ ನಟ–ನಟಿಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ ಎಂದು ಎಸ್ಪಿ ತಿಳಿಸಿದರು. ನಾಳೆ ಮಧ್ಯಾಹ್ನದ ನಂತರ ನೆಲಮಂಗಲದಿಂದ ಸೋಲದೇವನಹಳ್ಳಿಗೆ ಲೀಲಾವತಿಯವರ ಅಂತಿಮ ಯಾತ್ರೆ ನಡೆಯಲಿದ್ದು, ಅವರ ತೋಟದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಲಿದೆ.

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಬಡ ಕುಟುಂಬದಲ್ಲಿ 1938ರಲ್ಲಿ ಜನಿಸಿದ ಲೀಲಾವತಿಯವರು ಚಿಕ್ಕ ವಯಸ್ಸಿನಿಂದಲೇ ರಂಗಭೂಮಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಕಡು ಬಡತನದ ಕುಟುಂಬ ಅವರದ್ದಾಗಿದ್ದ ಕಾರಣ ವೃತ್ತಿ ರಂಗಭೂಮಿಗೆ ಬರುವ ಮುನ್ನ ಮನೆ ಕೆಲಸ ಮಾಡುತ್ತಿದ್ದರು. ಮೈಸೂರಿನಲ್ಲಿ ಸುಬ್ಬಯ್ಯ ನಾಯ್ಡು ಅವರ ಸಂಸ್ಥೆಯಲ್ಲಿ ರಂಗಭೂಮಿ ಕಲಾವಿದೆಯಾಗಿ ವೃತ್ತಿ ಜೀವನ ಆರಂಭಿಸಿದ ಅವರು, ನಂತರ ಮಹಾಲಿಂಗ ಭಾಗವತರ ▶ 6ನೇ ಪುಟಕ್ಕೆ

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆ ನಿರ್ಮಿಸುವವರಿಗೆ ಸಾಲ ಸೌಲಭ್ಯಕ್ಕೆ ಸಹಕಾರಿಯಾಗಿ ಫಾರಂ ನಂ.3 ವಿತರಣೆ

ಎರಡು ತಿಂಗಳಲ್ಲಿ ಈ ಸಮಸ್ಯೆಗೆ ಪರಿಹಾರ; ಪೌರಾಡಳಿತ ಸಚಿವ ರಹೀಂ ಖಾನ್ ಭರವಸೆ



ಬೆಂಗಳೂರು, ಡಿ.8(ಕೆಎಂಶಿ)– ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆ ನಿರ್ಮಾಣಕ್ಕೆ ಸಾಲ ಪಡೆಯಲು ಎದುರಾಗಿರುವ ಅಡ್ಡಿಯನ್ನು ಎರಡು ತಿಂಗಳಲ್ಲಿ ಪರಿಹರಿಸುವುದಾಗಿ ಪೌರಾಡಳಿತ ಸಚಿವ ರಹೀಂ ಖಾನ್ ವಿಧಾನಸಭೆಯಲ್ಲಿ ಭರವಸೆ ನೀಡಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಸತೀಶ್ ಸೈಲ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆ ನಿರ್ಮಿಸುವವರಿಗೆ ಫಾರಂ–3 ನೀಡುವ ಕೆಲಸವಾಗಬೇಕು. ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಇದು ಸಮರ್ಪಕವಾಗಿ ಸಿಗುತ್ತಿಲ್ಲ ಎಂಬ ದೂರುಗಳಿದ್ದು, ಇದನ್ನು ಎರಡು ತಿಂಗಳಲ್ಲಿ ಬಗೆಹರಿಸುವುದಾಗಿ ತಿಳಿಸಿದರು. ಇದಕ್ಕೂ ಮುನ್ನ ಸತೀಶ್ ಸೈಲ್ ಮಾತನಾಡಿ, ಶಿರಸಿ ಸಿದ್ಧಾಪುರ ಕ್ಷೇತ್ರದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಫಾರಂ ನಂ–3 ನೀಡುತ್ತಿಲ್ಲ. ಇದರಿಂದ ಪಟ್ಟಣ ಪಂಚಾಯ್ತಿ, ನಗರಸಭೆ, ಪುರಸಭೆಗಳಲ್ಲಿರುವ ತಮ್ಮ ಮನೆಗಳ ನಿರ್ಮಾಣಕ್ಕೆ ಸಾಲ ಪಡೆಯಲು ಅವಕಾಶವಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಬೆಂಬಲವಾಗಿ ಮಾತನಾಡಿದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಗ್ರಾಮ ಪಂಚಾಯ್ತಿಗಳಿಂದ ಮೇಲ್ದರ್ಜೆಗೇರಿರುವ ನಗರ ಸಂಸ್ಥೆಗಳಲ್ಲಿ ಅರ್ಜಿ ನಮೂನೆ–11 'ಬಿ' ನೀಡುತ್ತಿಲ್ಲ. ಇದರಿಂದ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ವಿವರಿಸಿದರು. ಶಾಸಕರಾದ ಕೋನ ರೆಡ್ಡಿ, ಸತೀಶ್ ಸೈಲ್ ಸೇರಿದಂತೆ ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಿದ್ದರು. ಸಚಿವ ರಹೀಂಖಾನ್ ಮಾತನಾಡಿ, ಇದು ರಾಜ್ಯಾದ್ಯಂತ ಗಂಭೀರ ಸ್ವರೂಪದ ಸಮಸ್ಯೆಯಾಗಿದೆ. ಅದರ ನಿವಾರಣೆಗಾಗಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ.

ಈಗಾಗಲೇ ಎರಡು ಸಭೆಗಳಾಗಿದ್ದು, ಮುಂದಿನ ಏಳೆಂಟು ದಿನಗಳಲ್ಲಿ ಮೂರನೇ ಸಭೆ ನಡೆಯಲಿದೆ. ಅಲ್ಲಿ ಸೂಕ್ತ ತೀರ್ಮಾನ ತೆಗೆದುಕೊಂಡು ಬಿಬಿಎಂಪಿ ಮಾದರಿಯಲ್ಲಿ ಬಿ–ಖಾತಾಗಳನ್ನು ▶ 7ನೇ ಪುಟಕ್ಕೆ

ಮುಡಾ ವ್ಯಾಪ್ತಿಯ ಬಡಾವಣೆಗಳ ಅಭಿವೃದ್ಧಿಗೆ ಐದು ಸಾವಿರ ಕೋಟಿ ಅನುದಾನ ಕಲ್ಪಿಸುವಂತೆ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರ ಆಗ್ರಹ

● ಖಾಸಗಿ ಬಡಾವಣೆಗಳ ನಿವೇಶನ ಬಿಡುಗಡೆಗೆ ಅವಕಾಶವನ್ನೇನೋ ಮುಡಾ ನೀಡುತ್ತಿದೆ; ಆದರೆ ಕನಿಷ್ಟ ಮೂಲ ಸೌಕರ್ಯವೂ ಅಲ್ಲಿಲ್ಲ ● ಇಂತಹ ಬಡಾವಣೆಗಳು ಸ್ಲಂ ಮಾದರಿ ತಲೆ ಎತ್ತಿವೆ; ಇವುಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಿ ● ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಭರವಸೆ; ಈ ಸಂಬಂಧ ಶೀಘ್ರ ಸಭೆ



ಜಿ.ಟಿ.ದೇವೇಗೌಡ

ಬೆಳಗಾವಿ, ಡಿ.8– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವ್ಯಾಪ್ತಿಯ ಬಡಾವಣೆಗಳ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ. ಅನುದಾನ ನೀಡುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಸರ್ಕಾರವನ್ನು ಆಗ್ರಹಿಸಿದರು.

ಬೆಳಗಾವಿ ಅಧಿವೇಶನದ ಪ್ರಶ್ನೋತ್ತರ ಕಲಾಪದಲ್ಲಿ ಮಾತಾಡಿದ ಅವರು, ಬೆಂಗಳೂರು ಮಾದರಿಯಲ್ಲಿ ಮೈಸೂರು ನಗರವೂ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಮುಡಾದಿಂದ ನಕ್ಷೆ ಅನುಮೋದನೆಯೊಂದಿಗೆ ನಿರ್ಮಿಸಿರುವ ಖಾಸಗಿ ಬಡಾವಣೆಗಳಲ್ಲಿ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿದ್ದರೂ ಮೂಲ ಸೌಕರ್ಯಗಳನ್ನು ಕಲ್ಪಿಸಿಲ್ಲ ಎಂದು ತಿಳಿಸಿದರು.

ಬಹುತೇಕ ಬಡಾವಣೆಗಳಲ್ಲಿ ಸೆಪ್ಟಿಕ್ ಟ್ಯಾಂಕ್ ನಿರ್ಮಿಸಿಲ್ಲ. ರಸ್ತೆ, ಯುಜಿಡಿ, ವಿದ್ಯುತ್ ಸಂಪರ್ಕ, ಕುಡಿಯುವ ನೀರು ಇನ್ನಿತರ ಯಾವುದೇ ಮೂಲ ಸೌಕರ್ಯಗಳನ್ನು ಒದಗಿಸಿಲ್ಲ. ಇದರಿಂದ ಮಹಾರಾಜರು ಕಟ್ಟಿದ ಮೈಸೂರು ನಗರದ ಸುತ್ತ ಯಾವುದೇ ಸೌಕರ್ಯಗಳಿಲ್ಲದೆ ಸ್ಲಂ ಮಾದರಿ ಬಡಾವಣೆಗಳು ನಿರ್ಮಾಣವಾಗುತ್ತಿವೆ. ಆದ್ದರಿಂದ ಮುಡಾ ವ್ಯಾಪ್ತಿಯ ಬಡಾವಣೆಗಳ ಅಭಿವೃದ್ಧಿಗಾಗಿ ಸರ್ಕಾರ 5 ಸಾವಿರ ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.



ಭೈರತಿ ಸುರೇಶ್

1 ರೂ. ಅನುದಾನವಿಲ್ಲ: ಸರ್ಕಾರದಿಂದ ಪ್ರಾಧಿಕಾರಕ್ಕೆ ಒಂದು ರೂಪಾಯಿ ಅನುದಾನವೂ ಬರುವುದಿಲ್ಲ. ▶ 7ನೇ ಪುಟಕ್ಕೆ





ಗುಂಡ್ಲುಪೇಟೆ ಬಳಿ ಕೊಳೆತ ಸ್ಥಿತಿಯಲ್ಲಿ ಎರಡು ಹುಲಿ ಕಳೇಬರ ಪತ್ತೆ



ಚಾಮರಾಜನಗರ, ಡಿ.8–ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಬಳಿಯ ಮೇಲೂರಿನಲ್ಲಿ ಗುರುವಾರ ಸಂಜೆ ಎರಡು ಹುಲಿಗಳ ಕಳೇಬರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿವೆ.

ಗ್ರಾಮದ ಅಂಚಿನ ಸರ್ವೇ ನಂ: 107ರ ಕಂದಾಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಒಂದು ವಯಸ್ಕ ಹಾಗೂ ಮತ್ತೊಂದು ಮರಿ ಹುಲಿಯ ಕಳೇಬರ ಪತ್ತೆಯಾಗಿದ್ದು, ಈ ಹುಲಿಗಳು ಮೃತಪಟ್ಟು ಸುಮಾರು 15ರಿಂದ 20 ದಿನಗಳಾಗಿರಬಹುದು ಎಂದು ಅಂದಾಜಿಸಲಾಗಿದೆ. ಗ್ರಾಮದ ರೈತರೊಬ್ಬರು ಜಾನುವಾರುಗಳನ್ನು ಮೇಯಿಸಲು ಗ್ರಾಮದ ಹೊರವಲಯಕ್ಕೆ ತೆರಳಿದ ವೇಳೆ ಪೊದೆಯಿಂದ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿ, ಹೋಗಿ ನೋಡಿದಾಗ ಹುಲಿಗಳ ಕಳೇಬರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿವೆ. ಇವರು ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ನಂತರ ಸ್ಥಳಕ್ಕೆ ಚಾಮರಾಜನಗರ ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್, ಚಾಮರಾಜನಗರ ಪ್ರಾದೇಶಿಕ ವಲಯ ಸಂರಕ್ಷಣಾಧಿಕಾರಿ ಉಮೇಶ್, ಮಹದೇಶ್ವರಬೆಟ್ಟದ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್‌ಕುಮಾರ್, ▶ 7ನೇ ಪುಟಕ್ಕೆ



ಬೆಳೆ ಹಾನಿ ಪರಿಹಾರ: ಒಂದೆರಡು ದಿನದಲ್ಲಿ ಮಾರ್ಗಸೂಚಿ ಬಿಡುಗಡೆ



ಬೆಂಗಳೂರು, ಡಿ.8– ಮುಂಗಾರು ಹಂಗಾಮಿನ ಬೆಳೆ ಹಾನಿ ಪರಿಹಾರಕ್ಕೆ ಸಂಬಂಧಿಸಿದಂತೆ ಒಂದೆರಡು ದಿನಗಳಲ್ಲಿ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದ್ದಾರೆ. ವಿಧಾನಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿಂದು ಸದಸ್ಯ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರೈತರಿಗೆ ಅವರ ಜಮೀನಿಗೆ ಅನುಗುಣವಾಗಿ 2 ಸಾವಿರ ರೂಪಾಯಿವರೆಗೆ ಬೆಳೆ ಪರಿಹಾರ ಹಣವನ್ನು ಡಿಬಿಟಿ ಮೂಲಕ ನೇರವಾಗಿ ಜಮೆ ಮಾಡಲಾಗುವುದು. ಈ ಸಂಬಂಧ ಮಾರ್ಗಸೂಚಿ ಇನ್ನೆರಡು ದಿನಗಳಲ್ಲಿ ಬಿಡುಗಡೆ ಮಾಡುತ್ತೇವೆ ಎಂದರು.

2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೃಣಧಾನ್ಯಗಳು, ತೊಗರಿ, ಹೆಸರು, ಉದ್ದು ಹಾಳಾಗಿವೆ ಎಂದು ಅವರು ಸದನಕ್ಕೆ ತಿಳಿಸಿದರು.



ಸಖಿ ಫೌಂಡೇಶನ್, ಸೂರ್ಯ ಚಾರಿಟಬಲ್ ಟ್ರಸ್ಟ್‌ನಿಂದ 'ಅರಣ್ಯಕಾಯಕ ಯೋಗಿ' ಪ್ರಶಸ್ತಿ ಪ್ರದಾನ


ಕೆ.ರಾಮು


ಹೆಚ್.ರಾಮು


ವಿ.ಮಂಜುನಾಥ್


ದಿ.ಎನ್.ಸುಬ್ರಹ್ಮಣ್ಯ

ಮೈಸೂರು, ಡಿ. 8– ಮೈಸೂರಿನ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ಮಹನೀಯರಿಗಾಗಿ 'ಸೂರ್ಯಸಖಿ ವಾರ್ಷಿಕ ಪ್ರಶಸ್ತಿ'ಯನ್ನು ಪ್ರತಿಷ್ಠಾಪಿಸಿದ್ದು, ಸಂಸ್ಥೆಯ ಮೊದಲ ವರ್ಷದ ಅಂಗವಾಗಿ ಈ ಬಾರಿಯ ಪ್ರಶಸ್ತಿಯನ್ನು ನಿವೃತ್ತ ಅರಣ್ಯಾಧಿಕಾರಿ ದಿವಂಗತ ಎನ್.ಸುಬ್ರಹ್ಮಣ್ಯ ಸ್ಮರಣಾರ್ಥ 'ಅರಣ್ಯ ಕಾಯಕ ಯೋಗಿ' ಪ್ರಶಸ್ತಿ ಯೆಂದು ಘೋಷಿಸಿದೆ.

ದಿವಂಗತ ಸುಬ್ರಹ್ಮಣ್ಯರವರು 1958 ರಿಂದ 1995ರವರೆಗೆ ಅರಣ್ಯ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು ಶಾಗ್ಯ, ರಾಮಾಪುರ, ಹನೂರು, ಮಲೈ ಮಹದೇಶ್ವರಬೆಟ್ಟ ಮುಂತಾದ ಕಡೆ ತಮ್ಮ ವೃತ್ತಿ ಜೀವನದ ವಿವಿಧ ಮಜಲುಗಳನ್ನು ಕಳೆದವರು. ದಿವಂಗತ ಡಿಸಿಎಫ್ ಶ್ರೀನಿವಾಸ್ ಹಾಗೂ ಗಾರ್ಡ್ ರಾಮು ಅವರೊಂದಿಗೆ ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವರು. ಆರಕ್ಷಕ ಹಾಗೂ ಅರಣ್ಯ ಇಲಾಖೆ ಎರಡರೊಂದಿಗೂ ಸುಮಧುರ ಬಾಂಧವ್ಯದೊಂದಿಗೆ ತಮ್ಮ ಕಾಯಕದಲ್ಲಿ ಸರಳತೆ, ಪ್ರಾಮಾಣಿಕತೆ ಮೆರೆದ ಇವರ ಹೆಸರಿನಲ್ಲಿ ಈ ಪ್ರಶಸ್ತಿ ಕೊಡಮಾಡಲಾಗುತ್ತಿದೆ.

ಕೊಳ್ಳೇಗಾಲದ ಮಲೈ ಮಹದೇಶ್ವರ ಬೆಟ್ಟ ವನ್ಯಜೀವಿ ವಿಭಾಗದಲ್ಲಿ ಸುದೀರ್ಘ 32 ವರ್ಷಗಳಿಂದ ವಾಹನ ಚಾಲಕರಾಗಿ ಸೇವೆ ಸಲ್ಲಿಸುತ್ತಿರುವ ಮುಖ್ಯಮಂತ್ರಿ ಚಿನ್ನದ ಪದಕ ವಿಜೇತರೂ ಆದ ಕೆ.ರಾಮು, ರಾಮಾಪುರ ವನ್ಯಜೀವಿ ವಿಭಾಗ, ಹನೂರು ಕೌದಳ್ಳಿಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಹೆಚ್.ರಾಮು ಹಾಗೂ ಪೊನ್ನಾಚಿ, ಮಲೈ ಮಹದೇಶ್ವರ ಬೆಟ್ಟಗಳಲ್ಲಿ ಸುಮಾರು 35ಕ್ಕೂ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ವಿ.ಮಂಜುನಾಥ್ ಅವರು 'ಅರಣ್ಯ ಕಾಯಕ ಯೋಗಿ' ಪ್ರಶಸ್ತಿಗೆ ಭಾಜನರಾಗಿರುತ್ತಾರೆ. ಜನವರಿ 7, 2024ರ ಭಾನುವಾರ ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಪಾಂಚಜನ್ಯ ಪ್ರಶಸ್ತಿ ಪ್ರದಾನ

ಮೈಸೂರು, ಡಿ. 8– ಪಾಂಚಜನ್ಯ ಪ್ರತಿಷ್ಠಾನದ ಹನ್ನೊಂದನೇ ವಾರ್ಷಿಕೋತ್ಸವ ಮತ್ತು ಧಾರವಾಡದ ನಿವೃತ್ತ ಮುಖ್ಯೋಪಾಧ್ಯಾಯ ಸುರೇಶ್.ವಿ.ಕುಲಕರ್ಣಿ ಅವರಿಗೆ 2023ನೇ ಸಾಲಿನ ಪ್ರತಿಷ್ಠಿತ 'ಪಾಂಚಜನ್ಯ ಪುರಸ್ಕಾರ' ಪ್ರದಾನ ಸಮಾರಂಭವನ್ನು ಬೆಂಗಳೂರು ಜಯನಗರ 4ನೇ ಬ್ಲಾಕ್‌ನ ಯುವಪಥ , ವಿವೇಕ ಆಡಿಟೋರಿಯಂನಲ್ಲಿ ಇಂದು (ಡಿ.9) ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಲಾಗಿದೆ. ಆರ್.ವಿ.ಶಿಕ್ಷಣ ಸಮೂಹದ ನಿರ್ದೇಶಕರಾದ ಡಾ.ಟಿ.ವಿ.ರಾಜು ಪ್ರಶಸ್ತಿ ಪ್ರದಾನ ಮಾಡುವರು. ಬಿಹೆಚ್‌ಎಸ್ ಉನ್ನತ ಶಿಕ್ಷಣ ಸಂಸ್ಥೆ ಜಂಟಿ ಕಾರ್ಯದರ್ಶಿ ಡಾ.ಕೆ.ಎಸ್.ಸಮೀರ ಸಿಂಹ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸಂಸ್ಥಾಪಕ ಗೌ.ಕಾರ್ಯದರ್ಶಿ ಮುರಳಿ ಎಸ್.ಕಾಕೋಳು ತಿಳಿಸಿದ್ದಾರೆ.

ಬರ ಪರಿಹಾರ ಪಡೆದುಕೊಳ್ಳಲು ರೈತರಿಗೆ ಡಾ.ಯತೀಂದ್ರ ಸಿದ್ದರಾಮಯ್ಯ ಮನವಿ



ಸುತ್ತೂರು, ಡಿ.8–ಸರ್ಕಾರದಿಂದ ನೀಡುವ ಬರ ಪರಿಹಾರವನ್ನು ರೈತರು ಸಕಾಲದಲ್ಲಿ ಪಡೆದುಕೊಳ್ಳಬೇಕೆಂದು ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ॥ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ವರುಣ ಕ್ಷೇತ್ರಕ್ಕೆ ಸೇರುವ ತುಮ್ಮನೇರಳೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳಾದ ಮರಡಿಹುಂಡಿ, ನಂದಿಗುಂದ, ನಂದಿಗುಂದಪುರ ಮುಂತಾದ ಗ್ರಾಮಗಳಲ್ಲಿ ಜನಸಂಪರ್ಕ ಸಭೆ ಹಾಗೂ ಕುಂದು ಕೊರತೆ ಸಭೆಯಲ್ಲಿ ಮಾತನಾಡಿ, ಈ ಬಾರಿ ಸರಿಯಾಗಿ ಮಳೆಯಾಗದೇ ಇರುವ ಕಾರಣ ರಾಜ್ಯದ ಹಲವು ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಈ ತಾಲೂಕುಗಳಿಗೆ ಸೇರುವ ಗ್ರಾಮಗಳ ರೈತರು ತಮ್ಮ ವ್ಯಾಪ್ತಿಯ ಕೃಷಿ ಇಲಾಖೆ ಕಚೇರಿಗೆ ಸೂಕ್ತ ದಾಖಲೆಗಳೊಂದಿಗೆ ತೆರಳಿ ಫ್ರೂಟ್ಸ್ ಐಡಿ ಮಾಡಿಸಿಕೊಳ್ಳಬೇಕು. ನಂತರ ಬರ ಪರಿಹಾರಕ್ಕೆ ಅರ್ಜಿ ಸಲ್ಲಿಸಿ ಬರ ಪರಿಹಾರವನ್ನು ಸೂಕ್ತ ಸಮಯದಲ್ಲಿ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ವಿಶೇಷಾಧಿಕಾರಿ ವಿಜಯ್ ರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ತಾಪಂ ಇಓ ಜೆರಾಲ್ಡ್ ರಾಜೇಶ್, ಬಿಳಿಗೆರೆ ನಾಡ ಕಚೇರಿಯ ಉಪತಹಸೀಲ್ದಾರ್ ಶ್ರೀನಿವಾಸ್, ಶಿವಸ್ವಾಮಿ, ಪ್ರದೀಪ್, ಮರಡಿಹುಂಡಿ ಬುಲೆಟ್ ಮಹದೇವು, ಎಪಿಎಂಸಿ ಅಧ್ಯಕ್ಷ ಬಸವರಾಜು, ಗ್ರಾಪಂ ಅಧ್ಯಕ್ಷನಂದೀಶ್, ಸೋಮಶೇಖರ್, ಕುಮಾರ್, ರಾಮು, ನಂದೀಶ, ಜವರಪ್ಪ, ಯ॥ ಮಾದೇಗೌಡ, ಚಿನ್ನಸ್ವಾಮಿಗೌಡ, ರಾಜೇಶ್, ಪಿ. ನಾಗೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಟಿಟಿಎಲ್ ಕಾಲೇಜಿನಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ



ಮೈಸೂರು, ಡಿ. 8– ಮೈಸೂರಿನ ಸರಸ್ವತಿಪುರಂನಲ್ಲಿರುವ ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜಿನಲ್ಲಿ ಕಾಲೇಜು ಸಂಸ್ಥಾಪಕ ಡಾ.ಕೆ.ಎಲ್.ರಾಮದಾಸ್ ಅವರ ಸಂಸ್ಮರಣೆ ಅಂಗವಾಗಿ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ಐಕ್ಯೂಎಸಿ ಘಟಕ ಹಾಗೂ ಎಚ್‌ಡಿಎಫ್‌ಸಿ ಬ್ಯಾಂಕ್, ಮೈಸೂರ್ ಕ್ಲಸ್ಟರ್. ಜೀವಧಾರ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ಉಚಿತ ರಕ್ತ ಗುಂಪು ತಪಾಸಣೆ ಮತ್ತು ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ 50 ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಿ ಗಮನ ಸೆಳೆದರು. ಕಾಲೇಜಿನ 300 ವಿದ್ಯಾರ್ಥಿಗಳಲ್ಲಿ 160 ವಿದ್ಯಾರ್ಥಿಗಳು ತಪಾಸಣೆಗೆ ಒಳಪಟ್ಟರು. ಇದೇ ವೇಳೆ ಸಂಪನ್ಮೂಲ ವ್ಯಕ್ತಿ, ಜೀವಧಾರ ರಕ್ತ ನಿಧಿ ಕೇಂದ್ರದ ವೈದ್ಯಕೀಯ ಅಧಿಕಾರಿ ಡಾ.ಕೃತಿಕಾ ರಕ್ತದಾನದ ಮಹತ್ವವನ್ನು ಅದರ ಸಾಧಕ ಬಾಧಕಗಳನ್ನು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಹೆಚ್ ಡಿಎಫ್‌ಸಿ ಬ್ಯಾಂಕ್ ಉಪಾಧ್ಯಕ್ಷ ಪಿ.ಎಸ್. ಸುದೀರ್, ಸಹಾಯಕ ಉಪಾಧ್ಯಕ್ಷೆ ಶ್ರೀಮತಿ ಪೂರ್ಣಿಮಾ ಪೂಂಜಾ, ಲಯನ್ಸ್ ಜೀವಧಾರ ರಕ್ತ ನಿಧಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಗಿರೀಶ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಲಯನ್ಸ್ ಕ್ಲಬ್ ನಿಸರ್ಗದ ಜೈಕುಮಾರ್, ಲಯನ್ಸ್ ಕ್ಲಬ್ ಮಯೂರಿ ಹಾಗೂ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ವಿ.ಪ್ರಶಾಂತ್, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಭ್ರಮರಾಂಬ, ಹಿರಿಯ ಉಪನ್ಯಾಸಕರಾದ ಪ್ರೊಫೆಸರ್ ಎನ್.ಎಂ.ರಾಮಚಂದ್ರಯ್ಯ, ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ನಿಧನ



ಕೆ.ಸತೀಶ್

ಮೈಸೂರು, ಡಿ.8–ಮೈಸೂರಿನ ಶಾರದಾ ದೇವಿನಗರದ ನಿವಾಸಿ ಕೆ.ಸತೀಶ್ (48) ಗುರುವಾರ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ತಾಯಿ, ಪತ್ನಿ, ಪುತ್ರ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಣಕಾಸು ದುರುಪಯೋಗ ಆರೋಪ: ಮಾಹಿತಿ ನೀಡುವಂತೆ ಮುಕ್ತ ವಿವಿಗೆ ಇಡಿ ಸೂಚನೆ



ಮೈಸೂರು, ಡಿ. 8 (ಆರ್‌ಕೆ)– ಹಣಕಾಸು ದುರುಪಯೋಗ ಆರೋಪದ ಹಿನ್ನೆಲೆಯಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಮಾಹಿತಿ ಒದಗಿಸುವಂತೆ ಜಾರಿ ನಿರ್ದೇಶನಾಲಯ (ಇಡಿ)ವು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸೂಚನೆ ನೀಡಿದೆ.

ನವೆಂಬರ್ 9 ರಂದು ಪತ್ರ ಬರೆದಿರುವ ಇಡಿ ಅಧಿಕಾರಿಗಳು, 2008–09 ರಿಂದೀಚೆಗೆ ವರ್ಷವಾರು ಲೆಕ್ಕಪರಿಶೋಧನಾ ವರದಿ (ಆಡಿಟ್ ರಿಪೋರ್ಟ್) ಯೊಂದಿಗೆ ಲೆಕ್ಕ ಪರಿಶೋಧಕರ ಹೆಸರು, ವಿಳಾಸ, ವಿಶ್ವವಿದ್ಯಾನಿಲಯದ ಆಂತರಿಕ ತನಿಖೆ ಮಾಡಿದ್ದರೆ ಆ ಕುರಿತ ದಾಖಲೆಗಳನ್ನು ಸಲ್ಲಿಸುವಂತೆ ನಿರ್ದೇಶನ ನೀಡಿದೆ. ಇಡಿ ಮಾಹಿತಿ ಕೇಳಿರುವುದನ್ನು ದೃಢಪಡಿಸಿದ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಅವರು, ಅಧ್ಯಯನ ಕೇಂದ್ರಗಳೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಇತ್ಯಾದಿ ಮಾಹಿತಿ ಕೇಳಲಾಗಿದ್ದು, ನಿಯಮಾನುಸಾರ ನಾವು ಒದಗಿಸಬೇಕಾಗುತ್ತದೆ ಎಂದರು.

ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅವರು ವಿಶ್ವವಿದ್ಯಾನಿಲಯದ ಕಾರ್ಯ ಯೋಜನೆಗಳ ಕುರಿತಂತೆ ಉನ್ನತ ಶಿಕ್ಷಣ ಸಚಿವರು, ಇಲಾಖೆ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಲೆಂದು ವಿಧಾನಸಭೆ ಅಧಿವೇಶನ ನಡೆಯುತ್ತಿರುವ ಬೆಳಗಾವಿಗೆ ತೆರಳಿದ್ದಾರೆ. ಇಡಿ ಮಾಹಿತಿ ಕೇಳಿರುವ ಸಂಬಂಧ ಅವರು ಅಲ್ಲಿಗೆ ಹೋಗಿಲ್ಲ ಎಂದೂ ಪ್ರೊ.ಮೂರ್ತಿ 'ಮೈಸೂರು ಮಿತ್ರ'ನಿಗೆ ಸ್ಪಷ್ಟಪಡಿಸಿದರು.

2009–10ರಿಂದ 2015–16ನೇ ಸಾಲಿನ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕದ ಸುಮಾರು 250 ಕೋಟಿ ರೂ. ಹಣ ದುರುಪಯೋಗವಾಗಿದೆ ಎಂಬ ದೂರಿನನ್ವಯ ಸಿಬಿಐ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ತನಿಖೆ ನಡೆಸುತ್ತಿರುವ ಬೆನ್ನಲ್ಲೇ ಜಾರಿ ನಿರ್ದೇಶನಾಲಯವು ಮಾಹಿತಿ ಕೇಳಿರುವುದು ಆರೋಪದ ತನಿಖೆಗೆ ಹೊಸ ತಿರುವು ಸಿಕ್ಕಿದಂತಾಗಿದೆ.

ದೇಶಾದ್ಯಂತ ಮುಕ್ತ ವಿಶ್ವವಿದ್ಯಾನಿಲಯದ ಸಹಭಾಗಿ ಘಟಕಗಳ ಪಟ್ಟಿ, ನೋಂದಾಯಿಸಿಕೊಂಡಿದ್ದ ವಿದ್ಯಾರ್ಥಿಗಳ ಸಂಖ್ಯೆ ಸಂಗ್ರಹ ಮಾಡಿದ್ದ ಶುಲ್ಕದ ಮೊತ್ತ, ಸಹಭಾಗಿ ಸಂಸ್ಥೆಗಳಿಂದ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಜಮೆಯಾಗಿರುವ ಹಣ ಇತ್ಯಾದಿ ಮಾಹಿತಿ ಸಲ್ಲಿಸುವಂತೆಯೂ ಜಾರಿ ನಿರ್ದೇಶನಾಲಯ ಕೇಳಿದೆ.

ಕಳೆದ ಬಿಜೆಪಿ ಸರ್ಕಾರವು ಕೆಎಸ್‌ಒಯು ಹಣ ದುರುಪಯೋಗ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಿತ್ತು. ಈಗಾಗಲೇ ಸಿಬಿಐ ಅಧಿಕಾರಿಗಳು ಮುಕ್ತ ವಿವಿ ಹಣಕಾಸು ಅಧಿಕಾರಿ, ಲೆಕ್ಕ ಪರಿಶೋಧಕರು, ಬ್ಯಾಂಕ್ ಅಧಿಕಾರಿಗಳಿಂದ ಪ್ರಾಥಮಿಕ ಮಾಹಿತಿ ಸಂಗ್ರಹಿಸಿ, ತನಿಖೆ ಆರಂಭಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದಿಂದ ಪಾರ್ಶ್ವವಾಯು ಬಗ್ಗೆ ಜಾಗೃತಿ ಕಾರ್ಯಕ್ರಮ



ಮೈಸೂರು, ಡಿ. 8– ಮೈಸೂರಿನ ಮರುಳೇಶ್ವರ ಸೇವಾಭವನದಲ್ಲಿ ಪಾರ್ಶ್ವವಾಯು ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೈಸೂರಿನ ಖ್ಯಾತ ನರರೋಗಶಾಸ್ತ್ರಜ್ಞ ಡಾ. ಸುಶ್ರುತ್ ಗೌಡ ನೇತೃತ್ವದಲ್ಲಿ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ವೈದ್ಯಾಧಿಕಾರಿಗಳ ತಂಡ ವಿಶೇಷ ಶಿಬಿರ ಏರ್ಪಡಿಸುವ ಮೂಲಕ ಮಹಿಳೆಯರಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಡಾ.ಸುಶ್ರುತ್‌ಗೌಡ ಮಾತನಾಡಿ, ಪಾರ್ಶ್ವವಾಯು ಏಕೆ ಸಂಭವಿಸುತ್ತದೆ. ಅದರ ವಿಧಗಳು, ಲಕ್ಷಣಗಳು, ತಡೆಗಟ್ಟುವಿಕೆ ಬಗ್ಗೆ ವಿವರವಾಗಿ ತಿಳಿಸಿದರು. ಅದರಲ್ಲೂ ಮುಖ್ಯವಾಗಿ ಇಂದಿನ ನಮ್ಮ ಬದಲಾದ ಜೀವನ ಶೈಲಿಯಿಂದಾಗಿ ಏರುಪೇರಾಗುತ್ತಿರುವ ಬಿಪಿಯನ್ನು ಹತೋಟಿಯಲ್ಲಿಟ್ಟುಕೊಂಡು, ಆರೋಗ್ಯಕರ ಜೀವನಕ್ಕಾಗಿ ದಿನಂಪ್ರತಿ ವ್ಯಾಯಾಮ ಮಾಡುತ್ತಾ ಆಹಾರ ಶೈಲಿಯನ್ನು ದೇಹಕ್ಕೆ ಅನುಕೂಲವಾಗುವಂತೆ ಮಾರ್ಪಡಿಸಿಕೊಂಡು, ಆರೋಗ್ಯ ತಪಾಸಣೆ ಮಾಡಿಸಿಕೊಂಡು ಶಿಸ್ತುಬದ್ಧ ಜೀವನ ನಡೆಸುವುದರ ಮೂಲಕ ಉತ್ತಮ ಆರೋಗ್ಯ ಹೊಂದಿ ಪಾರ್ಶ್ವವಾಯು ಬರದಂತೆ ತಡೆಗಟ್ಟಬಹುದು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷೆ ಜೆ. ಶೋಭ ವಹಿಸಿದ್ದರು.

ಇಂದು ವೈಣಿಕ ವಿದ್ವಾನ್ ಟಿ.ಎಂ.ಶಂಕರ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಪುಸ್ತಕ ಲೋಕಾರ್ಪಣೆ

ಮೈಸೂರು, ಡಿ. 8–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವೈಣಿಕ ವಿದ್ವಾನ್ ಟಿ.ಎಂ.ಶಂಕರ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಪುಸ್ತಕ ಲೋಕಾರ್ಪಣೆ ಸಮಾರಂಭ ನಾಳೆ (ಡಿ. 9) ಬೆಳಗ್ಗೆ 10.30ಕ್ಕೆ ವಿಜಯನಗರ 1ನೇ ಹಂತದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಲಾಗಿದೆ.

ಮಹಾರಾಜ ಸಂಸ್ಕೃತ ಪಾಠಶಾಲೆ ವಿಶ್ರಾಂತ ಪ್ರಾಂಶುಪಾಲರು ಹಾಗೂ ನೀಲಕಂಠಸ್ವಾಮಿ ಮಠದ ಅಧ್ಯಕ್ಷರಾದ ವಿದ್ವಾನ್ ಶ್ರೀ ಸಿದ್ದಮಲ್ಲಸ್ವಾಮೀಜಿ ಪುಸ್ತಕ ಬಿಡುಗಡೆ ಮಾಡುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ನೇತ್ರ ತಜ್ಞರಾದ ಡಾ.ವಾಸಂತಿ ಪುಸ್ತಕ ಕುರಿತು ಮಾತನಾಡುವರು.

ಮುಖ್ಯ ಅತಿಥಿಗಳಾಗಿ ಕಸಾಪ ಮಾಜಿ ಅಧ್ಯಕ್ಷ ಸಿ.ಚಂದ್ರಶೇಖರ್, ಆರ್.ನಳಿನಿ ಭಾಗವಹಿಸುವರು. ಕರ್ನಾಟಕ ಕಲಾಶ್ರೀ ವೈಣಿಕ ವಿದ್ವಾನ್ ಟಿ.ಎಂ.ಶಂಕರ್, ಸಖಿ ಫೌಂಡೇಷನ್ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ, ವಿಜಯನಗರ ಸಾಹಿತ್ಯ ಕಲಾಕೂಟ ಸಂಚಾಲಕ ಸಿ.ಜೆ.ಮೂರ್ತಿರಾವ್, ಸೂ.ಸುಬ್ರಹ್ಮಣ್ಯ, ಗೋಪಾಲಸ್ವಾಮಿ ಉಪಸ್ಥಿತರಿರುವರು.

'ನಟನ'ದಲ್ಲಿ ಮಕ್ಕಳ ಹೊಸ ನಾಟಕ 'ಹೆಬ್ಬಾಲ'

ಮೈಸೂರು, ಡಿ. 8– ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನಾ ರಂಗಶಾಲೆಯಲ್ಲಿ ಡಿ. 9 ಮತ್ತು 10 ರಂದು ಸಂಜೆ 6.30ಕ್ಕೆ ವಾರಾಂತ್ಯ ರಂಗಶಾಲೆಯ ಮಕ್ಕಳಿಂದ 'ಹೆಬ್ಬಾಲ' ನಾಟಕ ಪ್ರದರ್ಶನಗೊಳ್ಳಲಿದೆ. ಕನ್ನಡದ ಪ್ರಖ್ಯಾತ ಚಲನಚಿತ್ರ ನಿರ್ದೇಶಕ ಜಯತೀರ್ಥ ಈ ನಾಟಕವನ್ನು ರಚಿಸಿದ್ದು, ಮಂಡ್ಯ ರಮೇಶ್ ನಾಟಕವನ್ನು ವಿನ್ಯಾಸಗೊಳಿಸಿ ನಿರ್ದೇಶಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 7259537777, 9480468327, 9845595505 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.12.2023 ಶನಿವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023 ರಿಂದ 15.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಡಾ. ಅನಿಲ್ ಕುಮಾರ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು – ರಾಜು ಅನಂತಸ್ವಾಮಿ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, ಭಾಗವಹಿಸುವವರು– ಮೈಸೂರಿನ ಬೆಳಕು ವಾತ್ಸಲ್ಯದ ಆರ್. ಪ್ರದೀಪ್, ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 10.00 ಎಸ್.ವಿ. ಸಹನಾ – ವೀಣಾವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.30 ಪ್ರಗತಿಪಥ, 1.20 ಭಾವಗೀತೆ –ಪುರುಷೋತ್ತಮ, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ, ನೃತ್ಯ ಹಾಗೂ ಹಾಡುವ ಪ್ರತಿಭೆ ಹರಿಣಿ ನಂದಕುಮಾರ್ ಪರಿಚಯ. ಪ್ರಸ್ತುತಿ– ಎಂ.ಎಸ್. ಭಾರತಿ, 4.30 ನೆನಪಿನಂಗಳ– ಖ್ಯಾತ ತಬಲಾ ಕಲಾವಿದರಾದ ಉಸ್ತಾದ್ ಅಲ್ಲಾ ರಖಾ ಅವರೊಂದಿಗೆ ಸಂವಾದ, 6.50 ಕೃಷಿರಂಗ–ತೋರಣ ಹೂರಣ, ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಸಂದೀಪನ್ ಸಮಾಜಪತಿ–ಗಾಯನ

■ **ಸದ್ವಿದ್ಯಾ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಕಾವೇರಿ ಚಾರಿಟಬಲ್ ಟ್ರಸ್ಟ್ :** ವಾರ್ಷಿಕ ಕ್ರೀಡಾಕೂಟ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಅತಿಥಿಗಳು : ಜೆಎಸ್‌ಎಸ್ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ಪ್ರಾಧ್ಯಾಪಕ ಡಾ. ಉಷಾ ಹೆಗ್ಡೆ, ಅಧ್ಯಕ್ಷತೆ : ಸದ್ವಿದ್ಯಾ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಕಾವೇರಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಪ್ರೊ. ವಿ.ಕೆ. ಗೋಪಾಲಚಾರ್, ಪ್ರತಿಜ್ಞಾವಿಧಿ ಬೋಧನೆ : ಪ್ರೊ. ಎಂ.ಎಸ್.ಕೆ. ನರಹರಿ ಬಾಬು, ಸ್ಥಳ: ಚಾಮುಂಡಿ ವಿಹಾರ್ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ :** ಅಂತರ ಕಾಲೇಜು ಕನ್ನಡ ಚರ್ಚಾ, ಭಾವಗೀತೆ ಸ್ಪರ್ಧೆ, ಥ್ರೋಬಾಲ್ ಪಂದ್ಯಾವಳಿ, ಖೋ ಖೋ ಪಂದ್ಯಾವಳಿ, ಅಧ್ಯಕ್ಷತೆ : ಜೆಎಸ್‌ಎಸ್ ವಿದ್ಯಾಸಂಸ್ಥೆ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಶ್ರೀಮತಿ ಎಸ್.ಎನ್. ನಿರ್ಮಲಾದೇವಿ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲರಾದ ಶ್ರೀಮತಿ ಎಂ.ಎಸ್. ವಿಜಯ, ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು : ಮಹಾಜನ ಪದವಿಪೂರ್ವ ಕಾಲೇಜು ದೈಹಿಕ ಶಿಕ್ಷಣ ಉಪನ್ಯಾಸಕ ಕೆ.ಎಂ. ಕಾಂತರಾಜ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ :** ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಮಹಾರಾಜ ಪದವಿಪೂರ್ವ ಕಾಲೇಜು ಮೈದಾನ, ಜೆಎಲ್‌ಬಿ ರಸ್ತೆ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಒಡಲು ಟ್ರಸ್ಟ್ :** ಉದ್ಘಾಟನೆ ಮತ್ತು ವಿಚಾರ ಮಂಥನ, ಉದ್ಘಾಟನೆ : ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ, ವಿಷಯ ಮಂಡನೆ : ಪ್ರಗತಿಪರ ಚಿಂತಕರಾದ ಡಾ. ಕವಿತಾ ರೈ, ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಕೆ.ಎನ್. ಲಿಂಗಪ್ಪ, ಅಧ್ಯಕ್ಷತೆ : ಒಡಲು ಟ್ರಸ್ಟ್ ಅಧ್ಯಕ್ಷ ಆರ್.ಎಸ್. ದೊಡ್ಡಣ್ಣ, ಸ್ಥಳ: ರಮಾಗೋವಿಂದ ರಂಗ ಮಂದಿರ, ಸುಯೋಗ್ ಆಸ್ಪತ್ರೆ ಹಿಂಭಾಗ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ನಿವೃತ್ತ ಪ್ರಾಧ್ಯಾಪಕ ಪ್ರೊ. ಅಶ್ವಥ್‌ನಾರಾಯಣ ಅವರಿಂದ ಭಾರತದ ಸಂವಿಧಾನ ಮತ್ತು ಇತಿಹಾಸ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಕೆ. ಸದಾಶಿವ, ಸ್ಥಳ: ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ವೈಣಿಕ ವಿದ್ವಾನ್ ಟಿ.ಎಂ. ಶಂಕರ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಪುಸ್ತಕ ಲೋಕಾರ್ಪಣೆ ಸಮಾರಂಭ, ಪುಸ್ತಕ ಬಿಡುಗಡೆ : ಮಹಾರಾಜ ಸಂಸ್ಕೃತ ಪಾಠಶಾಲೆ ವಿಶ್ರಾಂತ ಪ್ರಾಂಶುಪಾಲರು ಹಾಗೂ ನೀಲಕಂಠಸ್ವಾಮಿ ಮಠದ ಅಧ್ಯಕ್ಷರಾದ ವಿದ್ವಾನ್ ಶ್ರೀ ಸಿದ್ದಮಲ್ಲಸ್ವಾಮೀಜಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕ ಕುರಿತು ಮಾತನಾಡುವವರು : ನೇತ್ರ ತಜ್ಞರಾದ ಡಾ. ವಾಸಂತಿ, ಮುಖ್ಯ ಅತಿಥಿಗಳು : ಕಸಾಪ ಮಾಜಿ ಅಧ್ಯಕ್ಷ ಸಿ. ಚಂದ್ರಶೇಖರ್, ಶ್ರೀಮತಿ ಆರ್. ನಳಿನಿ, ಉಪಸ್ಥಿತರು : ಕರ್ನಾಟಕ ಕಲಾಶ್ರೀ ವೈಣಿಕ ವಿದ್ವಾನ್ ಟಿ.ಎಂ. ಶಂಕರ್, ಸಖಿ ಫೌಂಡೇಷನ್ ಸಂಸ್ಥಾಪನಾ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಸುಂದರೇಶನ್, ವಿಜಯನಗರ ಸಾಹಿತ್ಯ ಕಲಾಕೂಟ ಸಂಚಾಲಕ ಸಿ.ಜೆ. ಮೂರ್ತಿರಾವ್, ಸೂ. ಸುಬ್ರಹ್ಮಣ್ಯ, ಗೋಪಾಲಸ್ವಾಮಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಪದವಿಪೂರ್ವ ಕಾಲೇಜು :** ಕಲಾ ಶಾರದಾ–2023 ಅಂತರ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮದ ಬಹುಮಾನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ವಿಶೇಷ ಆಹ್ವಾನಿತರು : ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ. ಸುಬ್ರಾಯ, ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ ಕೃಷ್ಣಮೂರ್ತಿಪುರಂ, ಬೆಳಗ್ಗೆ 10:30ಕ್ಕೆ

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು, ಕನ್ನಡ ವಿಭಾಗ:** ಅಂತರ ಕಾಲೇಜು ಪ್ರಬಂಧ ಸ್ಪರ್ಧೆಯ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಣಾ ಸಮಾರಂಭ, ಉದ್ಘಾಟನೆ: ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಸಾಹಿತಿ ಬನ್ನೂರು ಕೆ.ರಾಜು ಅವರಿಂದ ವಚನ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಧ್ಯಾಪಕ ಪ್ರೊ. ಎಚ್.ಪಿ.ಗಂಗಾಧರಸ್ವಾಮಿ, ಬಹುಮಾನ ವಿತರಣೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಪೂರ್ಣಿಮಾ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ:ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ ಮತ್ತು ಕಲಾ ಪ್ರಾತ್ಯಕ್ಷಿಕೆ–87, ತಿಂಗಳ ಸಾಧಕರು ಯಲ್ಲಪ್ಪ ವೈ. ಕುಂಬಾರ್, ಮುಖ್ಯ ಅತಿಥಿಗಳು : ಪತ್ರಕರ್ತ ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಅರಸಿಕುಮಾರ್, ಎ. ಶಾಂತಪ್ಪ, ಮುರಳೀಧರ್, ಬ್ರಹ್ಮಸೂರಯ್ಯ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಕನ್ನಡ ಚಳವಳಿ ಕೇಂದ್ರ ಸಮಿತಿ:** ಸುವರ್ಣ ಕರ್ನಾಟಕ ರಾಜ್ಯೋತ್ಸವ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಪುಷ್ಪಾರ್ಚನೆ: ಪೊಲೀಸ್ ಆಯುಕ್ತ ರಮೇಶ್, ಅಧ್ಯಕ್ಷತೆ: ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಮುಖ್ಯ ಅತಿಥಿಗಳು: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಎ.ಪಿ. ನಾಗೇಶ್, ಟಿ.ಎಸ್.ರವಿಕುಮಾರ್, ಸಿದ್ದಲಿಂಗಪ್ಪ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಹೆಮ್ಮಿಗೆ ಶ್ರೀ ವೈಷ್ಣವ ಸಭಾ:** ಸಂಜೆ 4 ಗಂಟೆಗೆ ಸಾಧಕರಿಗೆ ಸನ್ಮಾನ ಹಾಗೂ ಸಂಗೀತ ಕಾರ್ಯಕ್ರಮ, ಅಧ್ಯಕ್ಷತೆ: ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮುಖ್ಯ ಅತಿಥಿಗಳು: ಸಂಶೋಧಕ ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ, ಆದಾಯ ಇಲಾಖೆ ಆಯುಕ್ತರಾದ ಸೌಮ್ಯ ಆಚಾರ್, ಸಂಜೆ 6ಕ್ಕೆ ಸಂಗೀತ ಕಾರ್ಯಕ್ರಮ, ಹೆಮ್ಮಿಗೆ ಎಸ್.ಪ್ರಶಾಂತ್ ಅವರಿಂದ ಗಾಯನ, ವೈಭವ್ ರಮಣಿ–ಪಿಟೀಲು, ಅನಿರುದ್ಧ ಭಟ್–ಮೃದಂಗ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ.

■ **ಪ್ರಜ್ಞಾ ಮಹಿಳಾ ಸಮಾಜ:** ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಮೈಸೂರು ವಿವಿ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್. ಗುರು, ಉದ್ಘಾಟನೆ: ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಮುಖ್ಯ ಅತಿಥಿಗಳು: ಹೆಚ್ಚುವರಿ ಪೊಲೀಸ್ ಅಧೀಕ್ಷಕ ಡಾ.ಬಿ.ಎನ್.ನಂದಿನಿ, ಸಮಾಜದ ಸ್ಥಾಪಕ ಅಧ್ಯಕ್ಷೆ ಶ್ರೀಮತಿ ವಸುಂಧರಾ ಎಸ್.ಕುಮಾರ್, ಸ್ಥಳ:ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣ, ಕುವೆಂಪುನಗರ, ಸಂಜೆ 4.30ಕ್ಕೆ

■ **ವ್ಯವಸ್ಥಾಪಕರು :** ಡಾ. ನಂಜುಂಡಸ್ವಾಮಿ ಹರದನಹಳ್ಳಿ ಅವರ 'ನೆಲೆ ನಿಲ್ಲದ ಮುಗಿಲು' ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕವನ ಸಂಕಲನ ಬಿಡುಗಡೆ: ಮೈಸೂರು–ಚಾ.ನಗರ ನಾಯಕರ ಸಂಘದ ಅಧ್ಯಕ್ಷ ರಾಮಚಂದ್ರ, ಪುಸ್ತಕ ಕುರಿತು ಮಾತನಾಡುವವರು: ಪ್ರಾಧ್ಯಾಪಕ ಡಾ. ಜಿ. ಪ್ರಶಾಂತನಾಯಕ, ಅಧ್ಯಕ್ಷತೆ : ಪ್ರಾಂಶುಪಾಲ ಪುಟ್ಟಶೆಟ್ಟಿ, ಉಪಸ್ಥಿತರು:ಸಿ.ಎಂ. ನರಸಿಂಹಮೂರ್ತಿ, ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ದಾಸವಾಣಿ ಕಾರ್ಯಕ್ರಮ, ಸ್ಥಳ: ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ, ಜಗನ್ಮೋಹನ ಅರಮನೆ ಹತ್ತಿರ, ಲಕ್ಷ್ಮೀ ವಿಲಾಸ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಎಸ್. ದಯಾನಿಧಿ ಅವರಿಂದ ಬಾಡಿ ಲಾಂಗ್ವೇಜ್ ಫಾರ್ ಪ್ರೊಫೆಷನಲ್ಸ್ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ :** ಶ್ರೀಮತಿ ಕೆ.ವನಜಾಕ್ಷಮ್ಮ ಸಂಸ್ಮರಣಾ ನೃತ್ಯ ಆರಾಧನಾ ಕಾರ್ಯಕ್ರಮ, ಸಂಜೆ 6.30ರಿಂದ 7.30ರವರೆಗೆ ತುಮಕೂರಿನ ವಿದುಷಿ ಶ್ರೀಮತಿ ಬಾಲಾ ವಿಶ್ವನಾಥ್ ತಂಡದವರಿಂದ ಭರತನಾಟ್ಯ, ಸಂಜೆ 7.30ರಿಂದ 8.30 ರವರೆಗೆ ಬೆಂಗಳೂರಿನ ಭರತನೃತ್ಯ ಸಂಗೀತ ಅಕಾಡೆಮಿ ನಿರ್ದೇಶಕಿ ಡಾ. ಶುಭರಾಣಿ ಬೋಳಾರ್ ತಂಡದವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಕಲಾಸುರುಚಿ, ಕುತೂಹಲಿ :** ಸೈನ್ಸ್ ಸಂಜೆ ಮನುಷ್ಯನ ಜೀವನದಲ್ಲಿ ಶಿಲೀಂದ್ರಗಳ ಪಾತ್ರ ಕುರಿತು ವಿಶಾಖಪಟ್ಟಣ ರಾಷ್ಟ್ರೀಯ ಸಾಗರವಿಜ್ಞಾನ ಸಂಶೋಧನಾಲಯ ಪ್ರಧಾನ ವಿಜ್ಞಾನಿ ಡಾ. ಬೆಳ್ಳೆ ದಾಮೋದರ ಶೆಣೈ ಅವರಿಂದ ಉಪನ್ಯಾಸ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30ಕ್ಕೆ.

■ **ಅಭಿಯಂತರರು:** 30ನೇ ವಾರ್ಷಿಕೋತ್ಸವ ರಂಗ ಸಂಭ್ರಮ, ಸಂಜೆ 7ಕ್ಕೆ ಮಲ್ಲಿಗೆ ತೋಟದಲ್ಲಿ ಮರ್ಡರ್ ನಾಟಕ ಪ್ರದರ್ಶನ, ರಚನೆ ನಿರ್ದೇಶನ: ರಾಜೇಂದ್ರ ಕಾರಂತ್, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ

ಹಳೇಬೀಡಿನಲ್ಲಿಂದು

■ **ಶ್ರೀ ಮಲೆ ಮಹದೇಶ್ವರಸ್ವಾಮಿ ಸೇವಾ ಸಮಿತಿ:** ಕಡೇ ಕಾರ್ತಿಕ ಸೋಮವಾರದ ಪೂಜಾ ಮಹೋತ್ಸವದ ಅಂಗವಾಗಿ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ವಾಲಿಬಾಲ್ ಪಂದ್ಯಾವಳಿ, ಉದ್ಘಾಟನೆ: ಶೃತಿಮಂಜುನಾಥ್, ವಿ. ಮಲ್ಲೇಶ್, ಉಪಸ್ಥಿತರು : ಹೆಚ್.ಆರ್. ಮಹೇಶ್, ಗೌರಮ್ಮಕೃಷ್ಣಶೆಟ್ಟಿ, ಸ್ಥಳ: ಶ್ರೀ ಮಲೆ ಮಹದೇಶ್ವರಸ್ವಾಮಿ ಸನ್ನಿಧಿ, ಹಳೇಬೀಡು, ಬೆಳಗ್ಗೆ 10ಕ್ಕೆ.

ಆಹಾರ ತಂತ್ರಜ್ಞಾನ ಅನಾವರಣ; ಪುಷ್ಠಿದಾಯಕ ಆಹಾರ ಸವಿಯುವ ಸದವಕಾಶ

ಸಿಎಫ್‌ಟಿಆರ್‌ಐ ಆವರಣದಲ್ಲಿ ಸಾರ್ವಜನಿಕರಿಗೆ ತೆರೆದಿದೆ ವಿವಿಧ ಖಾದ್ಯಗಳ ಲೋಕ



ಮೈಸೂರು, ಡಿ.8(ಎಂಕೆ)– ನೂರಾರು ಬಗೆಯ ಪೌಷ್ಠಿಕಾಂಶಯುಕ್ತ 'ರೆಡಿ–ಟು–ಈಟ್' ಖಾದ್ಯಗಳ ಸವಿಯುವ ಸವಾವ ಕಾಶದ ನಡುವೆ ತಂತ್ರಜ್ಞಾನದ ಅನಾವರಣ...!

ಮೈಸೂರಿನ ಸಿಎಫ್‌ಟಿಆರ್‌ಐ (ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ) ಆವರಣದಲ್ಲಿ ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ ಅಂಡ್ ಟೆಕ್ನಾಲಜಿಸ್ಟ್ (ಇಂಡಿಯಾ) ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿರುವ '9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನ (ಇಫ್‌ಕಾನ್–2023)ದಲ್ಲಿ ನವ–ನವೀನ, ಹೊಸ ರುಚಿಯ ಹಾಗೂ ಪೌಷ್ಠಿಕಾಂಶವುಳ್ಳ ಆಹಾರ ಪದಾರ್ಥಗಳು ಹಾಗೂ ಅವುಗಳನ್ನು ತಯಾರು ಮಾಡುವ ತಂತ್ರಜ್ಞಾನವನ್ನು ಅನಾವರಣಗೊಳಿಸಲಾಗಿದೆ.

ಅಂತರಾಷ್ಟ್ರೀಯ ಆಹಾರ ಸಮ್ಮೇಳದ ಮೊದಲ ದಿನವೇ ಜನಜಂಗುಳಿಯಿಂದ ತುಂಬಿದ್ದ ಸಿಎಫ್‌ಟಿಆರ್‌ಐ ಆವರಣದಲ್ಲಿ 'ರೆಡಿ–ಟು–ಈಟ್'(ನೇರವಾಗಿ ಬಳಸಬಹುದಾದ) ಖಾದ್ಯ ಹಾಗೂ ತಂತ್ರಜ್ಞಾನ ಲೋಕವನ್ನೇ ತೆರೆಯಲಾಗಿತ್ತು. ಉಪ್ಪಿನ ಕಾಯಿಯಿಂದ ಹಿಡಿದು ಮಿಲೆಟ್ ಹೆಲ್ತ್ ಮಿಕ್ಸ್‌ವರೆಗೆ ನೂರಾರು ಬಗೆಯ ಪ್ಯಾಕೆಜ್ ಆಹಾರ ಪದಾರ್ಥಗಳು ಮನ ಸೆಳೆದರೆ, ಅವುಗಳನ್ನು ತಯಾರು ಮಾಡಲು ಬಳಸುವ ಯಂತ್ರಗಳು ಮತ್ತಷ್ಟು ಆಕರ್ಷಣೀಯವಾಗಿವೆ.

'ಟ್ರಿಮ್ ಸೇಫ್' ವಿಷಯದಡಿ ನಡೆಯುತ್ತಿರುವ ಆಹಾರ ಸಮ್ಮೇಳನದಲ್ಲಿರುವ 70ಕ್ಕೂ ಹೆಚ್ಚು ಮಳಿಗೆಗಳಲ್ಲಿ ತಂತ್ರಜ್ಞಾನದಿಂದ ತಯಾರಿಸಲ್ಪಟ್ಟ ಆಹಾರ ಪದಾರ್ಥಗಳ ಜೊತೆಗೆ ಶಿಕ್ಷಣ ಸಂಸ್ಥೆಗಳ ಮಾಹಿತಿಯನ್ನು ಕೂಡ ನೀಡಲಾಗುತ್ತಿದೆ. ಸಿರಿಧಾನ್ಯಗಳ ಮಳಿಗೆಗಳು ಎಲ್ಲರ ಗಮನ ಸೆಳೆಯುತ್ತಿದ್ದು, ಸವಿದು ಖರೀದಿ ಮಾಡುವ ಅವಕಾಶ ಕಲ್ಪಿಸಲಾಗಿದೆ.

ಡ್ರಿಂಕ್ಸ್ ದರ್ಬಾರ್: ಸಿರಿಧಾನ್ಯಗಳು, ಡ್ರೈ ಫ್ರೂಟ್‌ಗಳ ಮಿಲೆಟ್ ಹೆಲ್ತ್ ಮಿಕ್ಸ್ ಡ್ರಿಂಕ್ಸ್‌ಗಳ ದರ್ಬಾರು ಜೋರಾಗಿದೆ. 'ಮಖಾನ ಆರೋಗ್ಯಕರ ಪಾನೀಯ ಮಿಶ್ರಣ', 'ಮಿಲೆಟ್ ಹೆಲ್ತ್ ಮಿಕ್ಸ್ ಡ್ರಿಂಕ್ಸ್', 'ನಂಬಿಕೆ ಸಿರಿಧಾನ್ಯ ಕೆಫೆ', 'ರಾಗಿ ಮಾಲ್ಟ್ ಅಂಡ್ ಶೇಕ್', 'ರಾಗಿ ಸರಿ (ಶಿಶು ಪೋಷಣ್)', ರಾಗಿ ಕುಕ್ಕಿಸ್(ಬಿಸ್ಕೇಟ್) ಸೇರಿದಂತೆ ವಿವಿಧ ಕಂಪನಿಗಳ ಹೆಲ್ತ್ ಡ್ರಿಂಕ್ಸ್‌ಗಳ ದರ್ಬಾರು ಜೋರಾಗಿದೆ.

ಕೊಕೊನೆಟ್ ಕಮಾಲ್: ತೆಂಗಿನಕಾಯಿ ಹಾಲಿನ ತಾಜಾ ಎಣ್ಣೆ, ಸುಗಂದ ಭರಿತ ಸೋಪ್ ಸೇರಿದಂತೆ ಕೊಕೊನೆಟ್‌ನಿಂದ ತಯಾರಿಸಿದ ಪದಾರ್ಥಗಳು ಕಮಾಲ್ ಮಾಡಿವೆ. ಜೊತೆಗೆ ತೆಂಗಿನ ಕಾಯಿ ಹಾಲಿನಿಂದ ಮಾಡಿದ ಐದಾರು ಬಗೆಯ 'ಐಸ್ ಕ್ರೀಂ'ಗಳು ಬಾಯಲ್ಲಿ ನೀರು ತರಿಸಿದರೆ, ಮಾವು, ನಿಂಬೆ, ನೆರಳೆ ಹಾಗೂ ಮಿಶ್ರಾ ತರಕಾರಿಗಳ 'ಉಪ್ಪಿನಕಾಯಿ' ಗಮಲು ಮೂಗಿಗೆ ಬಡಿಯುತ್ತಿದೆ. ಹಾಗೆಯೇ ಮನಸ್ಸನ್ನು ಆಹ್ಲಾದಕರಗೊಳಿಸುವ 'ತಂಪು ಪಾನಿಯ'ಗಳು, ತರಾವರಿ 'ಡ್ರೈ ಫ್ರೂಟ್ಸ್'ಗಳ ಜೊತೆಗೆ 'ಬ್ಲೂ ಬೆರಿ' ರುಚಿ ಸವಿಯಬಹುದಾಗಿದೆ.

ಸಿರಿಧಾನ್ಯ ಸಿರಿ: ಆಹಾರ ಸಮ್ಮೇಳನದಲ್ಲಿ ಸಿರಿಧಾನ್ಯಗಳ ವಿಶೇಷ ಮಳಿಗೆ ಕೇಂದ್ರ ಬಿಂದುವಾಗಿದೆ. 'ಬರಗು', 'ಹಾರಕ', 'ಸಜ್ಜೆ', 'ಊದಲು', 'ಕೊರಲೆ', 'ಕಪ್ಪು ನವಣೆ', 'ಹಾಲು ನವಣೆ', 'ಕನಕಮರ ಬಿಳಿ ನವಣೆ', 'ರಂಗಾನಿ ವಾಗ್ದಾರ ನವಣೆ', 'ಕೆಂಪು ನವಣೆ', 'ಕಪ್ಪು ಸಾಮೆ', 'ಅಂಬಕ ಕೊರಲೆ', 'ಕೊಪ್ಪಳ ಕೊರಲೆ', 'ಕಿಶೋರ ಕೊರಲೆ', 'ಡಂಬಳ ಕೊರಲೆ', 'ಶಿವಮೊಗ್ಗ ಬಿಳಿ ಹುರುಳಿ', 'ಸೂರ್ಯಕಾಂತಿ', 'ಪುಂಡಿ', 'ಹತ್ತಿ ಬೀಜ' ಸೇರಿದಂತೆ 'ಹತ್ತಾರು ಬಗೆಯ ರಾಗಿ' ಹಾಗೂ ಇನ್ನಷ್ಟು ಬಗೆಯ ಸಿರಿಧಾನ್ಯಗಳ ಪ್ರದರ್ಶನದ ಜೊತೆಗೆ ಮಾಹಿತಿ ಪಡೆಯಬಹುದಾಗಿದೆ.

ತಂತ್ರಜ್ಞಾನ ಅನಾವರಣ: ಆಹಾರ ಪದಾರ್ಥಗಳಿಗೆ ಉಪ್ಪು, ಹುಳಿ, ಖಾರ ಬೆರೆಸಿ ರೋಸ್ಟ್ ಮಾಡುವ ರೋಸ್ಟರ್ ಯಂತ್ರ ಆಕರ್ಷಕವಾಗಿದೆ. ಒಮ್ಮೆ 30 ಕೆ.ಜಿ ಆಹಾರ ಪದಾರ್ಥವನ್ನು ಈ ಯಂತ್ರದ ಮೂಲಕ ರೋಸ್ಟ್ ಮಾಡಬಹುದಾಗಿದೆ. ಅದರೊಂದಿಗೆ 30 ಲೀಟರ್ ನೀರನ್ನು ಏಕಕಾಲದಲ್ಲಿ ಬಿಸಿ ಮಾಡುವ ದೊಡ್ಡ 'ಟಾಪ್ ಇನ್‌ಡೆಕ್ಸ್ ಸ್ಟೌವ್', ಹಸಿ ಆಹಾರ ಪದಾರ್ಥಗಳನ್ನು ಕೆಲವೇ ನಿಮಿಷಗಳಲ್ಲಿ ಡ್ರೈ ಮಾಡುವ ಯಂತ್ರಗಳು ನೋಡುಗರ ಗಮನ ಸೆಳೆಯುತ್ತಿದೆ. ಹಾಗೆಯೇ ಮನೆಯೊಳಗಿನ ಕಾರ್ಬನ್ ಡೈ ಆಕ್ಸೆಡ್ ಅನ್ನು ಹೀರಿಕೊಂಡು ಆಮ್ಲಜನಕ ನೀಡುವ ಟ್ಯಾಂಕ್(ಫಿಸ್ ಟ್ಯಾಂಕ್ ಮಾದರಿಯಲ್ಲಿ) ಸೇರಿದಂತೆ ಇನ್ನಿತರೆ ಹಲವು ಬಗೆಯ ಯಂತ್ರಗಳು ಗಮನ ಸೆಳೆಯುತ್ತಿವೆ.

ಜನಜಂಗುಳಿ: '9ನೇ ಅಂತಾ ರಾಷ್ಟ್ರೀಯ ಆಹಾರ ಸಮ್ಮೇಳನ (ಇಫ್‌ಕಾನ್–2023) ಮೊದಲ ದಿನವೇ ಜನಜಂಗುಳಿಯಿಂದ ತುಂಬಿ ತುಳುಕುತ್ತಿತ್ತು. ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಬಡಾವಣೆಗಳಿಂದ ಆಗಮಿಸಿದ್ದ ಮೈಸೂರಿಗರು ಹಾಗೂ ದೇಶದೆಲ್ಲೆಡೆಯಿಂದ ಬಂದಿದ್ದ ಪ್ರವಾಸಿಗರು ಇಷ್ಟದ ಪದಾರ್ಥಗಳನ್ನು ಖರೀದಿಸಿದರಲ್ಲದೆ ಯಂತ್ರಗಳ ಬಗ್ಗೆ ಹಾಗೂ ಶಿಕ್ಷಣ ಸಂಸ್ಥೆಗಳ ಕುರಿತು ಮಾಹಿತಿ ಪಡೆದುಕೊಂಡರು.

ಪ್ಲಾಂಟ್ ವೇಸ್ಟ್‌ನಿಂದ ತಯಾರಾಯ್ತು ಲೆದರ್...!



ತಿರುವನಂತಪುರದ ಸಿಎಸ್‌ಐಆರ್ ಎನ್‌ಐಐಎಸ್‌ಟಿ ಸಂಸ್ಥೆಯಿಂದ ಪ್ಲಾಂಟ್ ವೇಸ್ಟ್ ಮೆಟಿರಿಯಲ್ಸ್‌ಗಳಿಂದ ತಯಾರಿಸಿರುವ ಜಾಕೆಟ್, ಶೂ, ಬ್ಯಾಗ್ ಲೆದರ್ ಜಾಕೆಟ್ ಮತ್ತು ಶೂಗಿಂತ ಕಡಿಮೆ ಇಲ್ಲ ಎಂಬಂತಿವೆ. ಹಾಗೆಯೇ ಪ್ಲೇಟ್, ಸ್ಪೂನ್, ಗ್ಲಾಸ್ ಇನ್ನಿತರೆ ವಸ್ತುಗಳು ವಿಶೇಷ ಆಕರ್ಷಣೆಯಾಗಿವೆ. ಪ್ಲಾಂಟ್ ವೇಸ್ಟ್ ಮೆಟಿರಿಯಲ್ಸ್‌ಗಳಿಂದ ಕಡಿಮೆ ಪ್ರಮಾಣದ ಕೆಮಿಕಲ್ ಬಳಸಿ ಉತ್ತಮ ಗುಣಮಟ್ಟದಲ್ಲಿ ಜಾಕೆಟ್, ಶೂ, ಬ್ಯಾಗ್ ಹಾಗೂ ಇನ್ನಿತರೆ ವಸ್ತುಗಳನ್ನು ತಯಾರಿಸಲಾಗಿದೆ. ಸದ್ಯದಲ್ಲಿಯೇ ಜಾಕೆಟ್, ಶೂ ಮತ್ತು ಬ್ಯಾಗ್ ಮಾರುಕಟ್ಟೆಗೆ ಬರಲಿವೆ ಎಂದು ತಿರುವನಂತಪುರದ ಸಿಎಸ್‌ಐಆರ್ ಎನ್‌ಐಐಎಸ್‌ಟಿ ಸಂಸ್ಥೆಯ ಡಾ.ವೆಂಕಟೇಶ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ರೋಸ್ಟರ್ ಮಷಿನ್, ಟಾಪ್ ಇನ್‌ಡೆಕ್ಸ್ ಸ್ಟೌವ್ ಮಳಿಗೆ

ಉತ್ತಮ ಪ್ರತಿಕ್ರಿಯೆ...

ಆಹಾರ ಸಮ್ಮೇಳನದ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ವಾರಾಂತ್ಯ ದಿನಗಳಲ್ಲಿ ಜನಸಂದಣಿ ಮತ್ತಷ್ಟು ಹೆಚ್ಚಾಗಲಿದೆ. ಸಿಎಫ್‌ಟಿಆರ್‌ಐ ಹಾಗೂ ಸರ್ಕಾರಿ ಮಳಿಗೆಗಳು ಸೇರಿದಂತೆ 70 ಕ್ಕೂ ಹೆಚ್ಚು ಮಳಿಗೆಗಳಿದ್ದು, ಎಲ್ಲಾ ಮಳಿಗೆಗಳಲ್ಲಿಯೂ ಗುಣಮಟ್ಟದ ಆಹಾರ ಪ್ರದಾರ್ಥಗಳು, ಯಂತ್ರಗಳನ್ನು ಅನಾವರಣಗೊಳಿಸಲಾಗಿದೆ.

– **ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್,** ನಿರ್ದೇಶಕರು, ಸಿಎಫ್‌ಟಿಆರ್‌ಐ



ಆಹಾರ ಸಮ್ಮೇಳನ ಚೆನ್ನಾಗಿದೆ. ಕಾಲೇಜು ವಿದ್ಯಾರ್ಥಿ ಆಗಿದ್ದಾಗಿನಿಂದಲೂ ಸಿಎಫ್‌ಟಿಆರ್‌ಐನಲ್ಲಿ ನಡೆಯುವ ಆಹಾರ ಮೇಳ ಹಾಗೂ ವಸ್ತು ಪ್ರದರ್ಶನಕ್ಕೆ ಭೇಟಿ ನೀಡುತ್ತಿದ್ದೇನೆ ಮೈಸೂರು ಮಹಾರಾಜರ ಕೊಡುಗೆ ಸಿಎಫ್‌ಟಿಆರ್‌ಐ ಆಗಿದ್ದು, ದೇಶದಲ್ಲಿ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿರುವ ಸಂಸ್ಥೆ ಇದಾಗಿದೆ.

– **ಕೆ.ಬಿ.ಲಿಂಗರಾಜು,** ಅಧ್ಯಕ್ಷರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ



ಸಿರಿಧಾನ್ಯಗಳ ಮಿಲೆಟ್ ಹೆಲ್ತ್ ಮಿಕ್ಸ್ ಡ್ರಿಂಕ್ಸ್, ರಾಗಿ ಬಿಸ್ಕೆಟ್ಸ್ ಹಾಗೂ ಇನ್ನಿತರೆ ಆಹಾರ ಪದಾರ್ಥಗಳನ್ನು ಖರೀದಿಸಿದ್ದೇನೆ. ಸಮ್ಮೇಳನ ಬಹಳ ಚೆನ್ನಾಗಿದ್ದು ಅಗತ್ಯ ವಸ್ತುಗಳ ಮಾರಾಟವಿದೆ. ಹಾಗೆಯೇ ನಮ್ಮದು (ಕೆಎಸ್‌ಓಯು) ಕೂಡ ಸ್ಟಾಲ್ ಇದೆ.

– **ಸುಮಾ,** ಬೋದಕೇತರ ಸಿಬ್ಬಂದಿ, ಮುಕ್ತ ವಿವಿ

ವಿಜ್ಞಾನ-ತಂತ್ರಜ್ಞಾನ ವಿದ್ಯಾರ್ಥಿಗಳ ನೃತ್ಯ ವೈಭವ



ಮೈಸೂರು, ಡಿ.8(ಎಂಕೆ)– ಮೈಸೂರಿನ ಸಿಎಫ್‌ಟಿಆರ್‌ಐ(ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ) ಆವರಣದಲ್ಲಿ ನೃತ್ಯ ವೈಭವ ಸೃಷ್ಟಿ.... ವಿಜ್ಞಾನ–ತಂತ್ರಜ್ಞಾನ ವಿದ್ಯಾರ್ಥಿಗಳ ಕಲಾ ಮೆರಗು...!

ಅಂತರಾಷ್ಟ್ರೀಯ ಆಹಾರ ಸಮ್ಮೇಳನದ ಅಂಗವಾಗಿ ಸಿಎಫ್‌ಟಿಆರ್‌ಐ ಕೇಂದ್ರ ಕಚೇರಿ ಎದುರು ರೂಪುಗೊಂಡಿರುವ ಸುಂದರ ಕಲಾ ವೇದಿಕೆಯಲ್ಲಿ ಭರತನಾಟ್ಯ, ಕೋಲಾಟ, ಯಕ್ಷಗಾನ, ಡೊಳ್ಳು ಕುಣಿತ ಹಾಗೂ ಸಾಂಸ್ಕೃತಿಕ ನೃತ್ಯ ವೈಭವ ಹೊಸ ಮೆರಗು ನೀಡಿತು. ಕೃಷ್ಣೆ ಡ್ಯಾನ್ಸ್ ಸ್ಕೂಲ್‌ನ ಕಲಾವಿದರ ಭರತನಾಟ್ಯ ಪ್ರದರ್ಶನದೊಂದಿಗೆ ಆರಂಭವಾದ ಸಾಂಸ್ಕೃತಿಕ ವೇದಿಕೆಯಲ್ಲಿ ಸ್ಯಾಕ್ಸೋಫೋನ್ ವಾದನ ಇಂಪು ನೀಡಿತು. ಬಳಿಕ ಸಿಎಫ್‌ಟಿಆರ್‌ಐನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಹಾಡು, ನೃತ್ಯದ ಮೂಲಕ ನೆರೆದಿದ್ದವರ ಮನಗೆದ್ದರಲ್ಲದೆ ಮನರಂಜನೆಯ ರಸದೌತಣ ನೀಡಿದರು.



ಎಲ್ಲಾ ಸ್ಟಾಲ್‌ಗಳಲ್ಲಿಯೂ ಒಂದೊಂದು ಬಗೆಯ ಆಹಾರ ಪದಾರ್ಥಗಳ ಹಾಗೂ ಯಂತ್ರಗಳ ಕುರಿತು ಮಾಹಿತಿ ನೀಡಲಾಗುತ್ತಿದ್ದು, ಎಲ್ಲವೂ ಆಕರ್ಷಣೀಯವಾಗಿದೆ. ಹೊಸ ಹೊಸ ಆಹಾರ ಪದಾರ್ಥಗಳ ಜೊತೆಗೆ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಆಹಾರ ಸಮ್ಮೇಳನ ಅನುಕೂಲವಾಗಿದೆ.


– **ಓಂ ಪ್ರಕಾಶ್,** ಮೈಸೂರಿನ ನಾಯ್ಡುನಗರ ನಿವಾಸಿ

ಎನಿ ಟೈಂ ಮುದ್ದೆ...!



ಡೆಬಿಟ್ ಕಾರ್ಡ್ ಬಳಸಿದಾಗ ಹಣ ಪಡೆಯುವ ಎಟಿಎಂನಂತೆ ಎನಿ ಟೈಂ ಮುದ್ದೆ...! ಅದೂ ಮುದ್ದೆ ಮಾಡಲು ಬಾರದಿದ್ದರೂ!

ಆಹಾರ ಸಮ್ಮೇಳನದಲ್ಲಿ ಥಟ್ ಅಂತ ರಾಗಿ ಮುದ್ದೆ ಮಾಡುವ ವಿಧಾನದ ಜೊತೆಗೆ ರಾಗಿ ಹಿಟ್ಟಿನ ಪ್ಯಾಕ್ ದೊರೆಯುತ್ತದೆ. ಕಡಿಮೆ ಸಮಯದಲ್ಲಿ ರುಚಿಯಾದ ರಾಗಿ ಮುದ್ದೆ ಮಾಡುವ ಹಿಟ್ಟನ್ನು ಸಿಎಫ್‌ಟಿಆರ್‌ಐ ಆವಿಷ್ಕರಿಸಿದ್ದು, ಸಮ್ಮೇಳನದಲ್ಲಿ ಎಲ್ಲರ ಆಕರ್ಷಣೆಯಾಗಿದೆ. ಮಧುಮೇಹ, ರಕ್ತದೊತ್ತಡ, ಬೊಜ್ಜು, ಅತಿಯಾದ ತೂಕ, ಕೊಲೆಸ್ಟಾಲ್ ಸಮಸ್ಯೆ ಸೇರಿದಂತೆ ಹಲವು ರೋಗಗಳ ನಿಯಂತ್ರಣಕ್ಕೆ ರಾಮಬಾಣವಾದ ರಾಗಿ ಮುದ್ದೆಯನ್ನು ಸರಳ ಹಾಗೂ ಕಡಿಮೆ ಸಮಯದಲ್ಲಿ ಮಾಡುವ ವಿಧಾನವನ್ನು ತಿಳಿದುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.



ವಿವಿಧ ಬಗೆಯ ಸಿರಿಧಾನ್ಯಗಳ ಅನಾವರಣ

ಮೈನವಿರೇಳಿಸಿದ ಜೋಡೆತ್ತುಗಳ ಓಟ

ಷಷ್ಠಿ ಪ್ರಯುಕ್ತ ಸಿದ್ದಲಿಂಗಪುರದಲ್ಲಿ ಸಾಹಸಿಗಳಿಂದ ಆಯೋಜನೆ





ಮೈಸೂರು, ಡಿ.8(ಎಂಕೆ)– ಮೈನವಿರೇಳಿಸಿದ ಹಳ್ಳಿ ಕಾರ್, ಗೂಳಿ ಜೋಡೆತ್ತುಗಳ ಬಿರುಸಿನ ಓಟ...! ಮೈಸೂರಿನ ಸಿದ್ದಲಿಂಗಪುರದಲ್ಲಿ ಷಷ್ಠಿ ಹಬ್ಬದ ಪ್ರಯುಕ್ತ ಯುವಶಕ್ತಿ ಪಡೆವತಿಯಿಂದ ಆಯೋಜಿಸಿದ್ದ ಹಳ್ಳಿ ಕಾರ್, ಗೂಳಿ ಜೋಡೆತ್ತುಗಳ ಓಟದ ಸ್ಪರ್ಧೆ ನೋಡುಗರನ್ನು ಹೌಹಾರುವಂತೆ ಮಾಡಿತು. ಹಳ್ಳಿ ಅಭಿಮಾನಿಗಳ ಕೂಗಾಟದ ನಡುವೆ ಹೊಲದಲ್ಲಿ ಧೂಳೆಬ್ಬಿಸಿದ ಎತ್ತುಗಳು ಗುರಿ ತಲುಪಿ ಗೆದ್ದು ಬೀಗಿದವು.

ಸಿದ್ದಲಿಂಗಪುರ ಗ್ರಾಪಂ ಸದಸ್ಯ ಮಂಜುನಾಥ್ ಚಾಲನೆ ನೀಡಿದ ಬಳಿಕ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ ಸುಮಾರು 65 ಜೋಡೆತ್ತುಗಳು ನೋಡುಗರ ಹೃನ್ಮನ ಗೆದ್ದವು. ಮಧ್ಯಾಹ್ನ 1.30ಕ್ಕೆ ಆರಂಭಗೊಂಡ ಎತ್ತಿನಗಾಡಿ ಓಟದ ಸ್ಪರ್ಧೆ ತಡರಾತ್ರಿಯವರೆಗೂ ನಡೆಯಿತು.

ಐದು ವರ್ಷಗಳಿಂದ ಆಯೋಜನೆ: ಷಷ್ಠಿ ಹಬ್ಬದ ಪ್ರಯುಕ್ತ ಕಳೆದ 5 ವರ್ಷಗಳಿಂದ ಯುವಶಕ್ತಿ ಪಡೆ ಎತ್ತಿನಗಾಡಿ ಓಟದ ಸ್ಪರ್ಧೆ ಆಯೋಜಿಸುತ್ತಿದೆ. ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಹಲವೆಡೆಯಿಂದ ಜೋಡೆತ್ತುಗಳು ಬಂದಿವೆ. ಈ ವರ್ಷ ಬಹುಮಾನದ ಮೊತ್ತ ಹೆಚ್ಚಿಸುವುದರ ಜೊತೆಗೆ ಆಕರ್ಷಕ ಟ್ರೋಫಿ ನೀಡುತ್ತಿದ್ದೇವೆ ಎಂದು ಯುವಪಡೆ ಅಧ್ಯಕ್ಷ ಕಾರ್ತಿಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯುವ ಪಡೆ ದರ್ಶನ್, ಅಭಿಷೇಕ್, ಕಿರಣ್, ಚೇತನ್, ಆನಂದ್, ಮಂಜುನಾಥ್, ಪ್ರವೀಣ, ಸೂರ್ಯಕುಮಾರ್, ರವಿಕುಮಾರ್, ಯೋಗೇಶ್, ಸುನೀಲ್ ಮತ್ತಿತರರು ಉಪಸ್ಥಿತರಿದ್ದರು.

ದಸರಾ ಆನೆ ಅರ್ಜುನ ಸಾವು ಪ್ರಕರಣ: ಒತ್ತಡಕ್ಕೆ ಮಣಿದ ಸರ್ಕಾರ

ತನಿಖೆಗೆ ತಜ್ಞರ ಸಮಿತಿ ರಚನೆಗೆ ನಿರ್ಧಾರ

ಬೆಂಗಳೂರು: ಕಾಡಾನೆ ಸೆರೆ ಮತ್ತು ರೇಡಿಯೋ ಕಾಲರ್ ಅಳವಡಿಸುವ ಕಾರ್ಯಾಚರಣೆ ವೇಳೆ ದಸರಾ ಆನೆ ಅರ್ಜುನ ಸಾವನ್ನಪ್ಪಿರುವ ಕುರಿತು ಎಲ್ಲೆಡೆಯಿಂದ ಬಂದ ಒತ್ತಡಕ್ಕೆ ಮಣಿದಿರುವ ರಾಜ್ಯ ಸರ್ಕಾರ, ಆನೆ ಸಾವಿಗೆ ಕಾರಣ ಪತ್ತೆಗೆ ತಜ್ಞರ ಸಮಿತಿ ರಚಿಸಲು ನಿರ್ಧಾರ ಕೈಗೊಂಡಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಮಿತಿಯ ಸದಸ್ಯರು ಇನ್ನು ಕೆಲವೇ ದಿನಗಳಲ್ಲಿ ಅಧಿಕೃತ ಆದೇಶ ತಲುಪಲಿದೆ ಎಂದು ಮೂಲಗಳು ತಿಳಿಸಿವೆ.

ಸಮಿತಿಯಲ್ಲಿ ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅಜಯ್ ಮಿಶ್ರಾ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಾಶ್ವತಿ ಮಿಶ್ರಾ ಮತ್ತು ಖ್ಯಾತ ಆನೆ ತಜ್ಞ ಆರ್.ಸುಕುಮಾರ್ ಹಾಗೂ ಪಶು ಸಂಗೋಪನಾ ಇಲಾಖೆಯ ಪಶುವೈದ್ಯರೂ ಇರಲಿದ್ದಾರೆಂದು ಸರ್ಕಾರದ ಮೂಲಗಳು ಮಾಹಿತಿ ನೀಡಿವೆ. ಕೆಲ ತಜ್ಞರು ಹಾಗೂ ಪಶುವೈದ್ಯರ ಲಭ್ಯತೆ ಇನ್ನೂ ಖಚಿತವಾಗಿಲ್ಲ. ಹೀಗಾಗಿ ಆದೇಶ ನೀಡುವಲ್ಲಿ ವಿಳಂಬವಾಗುತ್ತಿದೆ ಎಂದು ತಿಳಿದುಬಂದಿದೆ.

ಮಾವುತರ ವಿರೋಧ, ಗುಂಡೇಟು, ಮರಣೋತ್ತರ ಪರೀಕ್ಷೆ ಮಾದರಿ ವಿವರಗಳು, ಪ್ರತ್ಯಕ್ಷದರ್ಶಿಗಳು, ಅರಣ್ಯ ಇಲಾಖೆ ಸಿಬ್ಬಂದಿಗಳು, ಪಶುವೈದ್ಯರ ಹೇಳಿಕೆಗಳು, ಆನೆ ಸಾವಿಗೆ ನಿಖರವಾದ ಕಾರಣ ಮತ್ತು ಅದಕ್ಕೆ ಯಾರು ಹೊಣೆಗಾರರೆಂದು ವಿವರವಾದ ವರದಿಯನ್ನು ಸಿದ್ಧಪಡಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಎಂಜಿ ರೋಡ್ ತರಕಾರಿ ಮಾರುಕಟ್ಟೆ ಜಾಗ ಖಾಸಗಿ ವ್ಯಕ್ತಿ ವಶಕ್ಕೆ

ಹೈಕೋರ್ಟ್‌ಗೆ ಮೇಲ್ಮನವಿ: ರಾಜೇಶ್ ಜಿ.ಗೌಡ

ಮೈಸೂರು, ಡಿ. 8(ಆರ್‌ಕೆ)– ಮೈಸೂರಿನ ಎಂಜಿ ರಸ್ತೆ ತರಕಾರಿ ಮಾರುಕಟ್ಟೆ ಜಾಗ ಖಾಸಗಿ ವ್ಯಕ್ತಿ ಸ್ವತ್ತು ಎಂದು ಜಿಲ್ಲಾ ನ್ಯಾಯಾಲಯ ತೀರ್ಪು ನೀಡಿರುವುದರಿಂದ ರಾಜ್ಯ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ ಕಾನೂನು ಹೋರಾಟ ಮುಂದುವರೆಸಲಾಗುವುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ (ಕೆಇಎ)ದ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಜಿ. ಗೌಡ ತಿಳಿಸಿದ್ದಾರೆ.

ನ್ಯಾಯಾಲಯದ ಆದೇಶ ಪ್ರತಿ ಪಡೆದು, ಅಧ್ಯಯನ ಮಾಡಿ ಜಾಗ ನಮ್ಮದೆಂದು ಪ್ರತಿಪಾದಿಸಲು ಅಗತ್ಯ ದಾಖಲೆಗಳೊಂದಿಗೆ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ತಯಾರಿ ಮಾಡುತ್ತೇವೆಂದು ಪ್ರಾಧಿಕಾರದ ಪರ ವಕೀಲ ಶಂಕರ್ ಮಾಹಿತಿ ನೀಡಿದ್ದಾರೆ. ಮುಂದೆ ಈ ಕುರಿತು ಹೈಕೋರ್ಟ್‌ನಲ್ಲಿ ಕಾನೂನು ಹೋರಾಟ ಮುಂದುವರಿಸುತ್ತೇವೆ ಎಂದರು.

ಬೆಂಗಳೂರಿನ ದೊಮ್ಮಲೂರು ನಿವಾಸಿಯಾದ ಎನ್.ವಿಜಯಕುಮಾರ್, 1994ರಲ್ಲಿ 92,800 ರೂ.ಗಳಿಗೆ ಖರೀದಿಸಿದ್ದು, ಅವರಿಗೆ ಎಂಜಿ ರಸ್ತೆ ತರಕಾರಿ ಮಾರುಕಟ್ಟೆಯ ಜಾಗದ ಮಾಲೀಕತ್ವದ ಹಕ್ಕು ಬರುತ್ತದೆ ಎಂದು ಮೈಸೂರು ಜಿಲ್ಲಾ ನ್ಯಾಯಾಲಯ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ತಾವು ವಕೀಲರ ಮೂಲಕ ಪ್ರಾಧಿಕಾರದ ಆಸ್ತಿ ಎಂದು ಪ್ರತಿಪಾದಿಸಲು ತಯಾರಿ ನಡೆಸುತ್ತಿದ್ದೇವೆ ಎಂದು ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಅ. 27ರಂದು ಮೈಸೂರು ಜಿಲ್ಲಾ ನ್ಯಾಯಾಲಯ ಈ ಸಂಬಂಧ ತೀರ್ಪು ನೀಡಿದ್ದರೂ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಮೇಲ್ಮನವಿ ಸಲ್ಲಿಸುವ ಸಂಬಂಧ ಇನ್ನಷ್ಟೇ ಪ್ರಕ್ರಿಯೆ ಆರಂಭಿಸಿದೆ!

ಲೋಕಸಭೆಯಲ್ಲಿ ಪ್ರಶ್ನೆಗಾಗಿ ಲಂಚ; ಟಿಎಂಸಿ ಸಂಸದೆ ಮಹುವಾ ಮೋಯಿತ್ರಾ ಉಚ್ಚಾಟನೆ



ನವದೆಹಲಿ: ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ವಿರುದ್ಧದ 'ಪ್ರಶ್ನೆಗಾಗಿ ಲಂಚ' ಪಡೆದ ಪ್ರಕರಣದ ಕುರಿತು ಲೋಕಸಭೆಯಲ್ಲಿ ನೈತಿಕ ಸಮಿತಿ ವರದಿ ಮಂಡಿಸಿದ ಬೆನ್ನಲ್ಲೇ ಅವರನ್ನು ಉಚ್ಚಾಟನೆ ಮಾಡಲಾಗಿದೆ.

ಸಂಸದೆ ಮೊಯಿತ್ರಾ ಅವರನ್ನು ಉಚ್ಚಾಟಿಸುವಂತೆ ವರದಿ ಶಿಫಾರಸು ಮಾಡಿದ್ದು, ಇದೇ ವರದಿಯನ್ನು ಲೋಕಸಭೆಯಲ್ಲಿ ಇಂದು ಮಂಡಿಸಲಾಗಿತ್ತು. ಅಂತೆಯೇ ಕೇಂದ್ರ ಸರ್ಕಾರ ಕೂಡ ಮಹುವಾ ಕುರಿತು ನೈತಿಕ ಸಮಿತಿ ವರದಿ ಶಿಫಾರಸ್ಸನ್ನು ಬೆಂಬಲಿಸಿ ಇಂದು ಲೋಕಸಭೆಯಲ್ಲಿ ತನ್ನ ನಿರ್ಣಯ ಮಂಡಿಸಿತು. ಇದರ ಬೆನ್ನಲ್ಲೇ ಸ್ಪೀಕರ್ ಓಂ ಬಿರ್ಲಾ ಅವರು ನೈತಿಕ ಸಮಿತಿ ಶಿಫಾರಸ್ಸನ್ನು ಮತದಾನದ ಮೂಲಕ ಅಂಗೀಕರಿಸಿದ್ದು, ಟಿಎಂಸಿ ಸಂಸದೆ ಮಹುವಾ ಮೋಯಿತ್ರಾ ಅವರನ್ನು ಸಂಸತ್ತಿನಿಂದ ಉಚ್ಚಾಟಿಸಲಾಗಿದೆ. ಅಲ್ಲದೆ ಸದನವನ್ನು ಡಿಸೆಂಬರ್ 11ಕ್ಕೆ ಮುಂದೂಡಿದ್ದಾರೆ.

ಸಂಸದ ಮಹುವಾ ಮೊಯಿತ್ರಾ ಅವರ ನಡವಳಿಕೆಯು ಸಂಸದರಾಗಿ ಅನೈತಿಕ ಮತ್ತು ಅಸಭ್ಯವಾಗಿದೆ ಎಂಬ ಸಮಿತಿಯ ತೀರ್ಮಾನಗಳನ್ನು ಈ ಸದನ ಒಪ್ಪಿಕೊಳ್ಳುತ್ತದೆ. ಹಾಗಾಗಿ ಅವರು ಸಂಸದರಾಗಿ ಮುಂದುವರಿಯುವುದು ಸೂಕ್ತವಲ್ಲ ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

'ಹಿಂದೆ ಅನುಸರಿಸುತ್ತಿದ್ದ ಸಂಪ್ರದಾಯಗಳ ನಕಲು ನನ್ನ ಬಳಿ ಇದೆ. ಮಾಜಿ ಸಭಾಪತಿಗಳಾದ ಸೋಮನಾಥ ಚಟರ್ಜಿ ಮತ್ತು ಪ್ರಣಬ್ ಮುಖರ್ಜಿ ಅವರು ಈ ಹಿಂದೆ ಇಲ್ಲಿದ್ದರು... ಅವರು ನೀಡಿದ ನಿಯಮಗಳು ಮತ್ತು ಸಂಪ್ರದಾಯಗಳನ್ನು ನಮ್ಮ ನಿಯಮಗಳೆಂದು ಪರಿಗಣಿಸಲಾಗಿದೆ. ಸಮಿತಿಯ ಮುಂದೆ ಆರೋಪಗಳಿರುವ ಸದಸ್ಯರಿಗೆ ಮಾತನಾಡಲು ಸಾಕಷ್ಟು ಸಮಯ ನೀಡಲಾಗಿದೆ ಎಂದು ಸೋಮನಾಥ್ ಚಟರ್ಜಿ ಹೇಳಿದ್ದರು... ಹಿಂದಿನ ಸ್ಪೀಕರ್‌ಗಳು ಅನುಸರಿಸಿದ ಸಂಪ್ರದಾಯಗಳನ್ನು ಮುಂದಿನ ಸಭಾಪತಿಗಳು ಅನುಸರಿಸುವ ಸಂಪ್ರದಾಯವನ್ನು ಈ ಸದನ ಹೊಂದಿದೆ. ಸಂಸದೆ ಮಹುವಾ ಮೊಯಿತ್ರಾ ಅವರ ನಡವಳಿಕೆಯು ಸಂಸದರಾಗಿ ಅನೈತಿಕ ಮತ್ತು ಅಸಭ್ಯವಾಗಿದೆ ಎಂಬ ಸಮಿತಿಯ ತೀರ್ಮಾನಗಳನ್ನು ಈ ಸದನವು ಒಪ್ಪಿಕೊಳ್ಳುತ್ತದೆ. ಹಾಗಾಗಿ ಅವರು ಸಂಸದೆಯಾಗಿ ಮುಂದುವರಿಯುವುದು ಸೂಕ್ತವಲ್ಲ ಎಂದು ಓಂ ಬಿರ್ಲಾ ಹೇಳಿದರು.

ಎಥಿಕ್ಸ್ ಕಮಿಟಿಗೆ ಹೊರಹಾಕುವ ಅಧಿಕಾರವಿಲ್ಲ: ಇನ್ನು ಉಚ್ಚಾಟನೆ ನಿರ್ಧಾರವನ್ನು ವಿರೋಧಿಸಿರುವ ಟಿಎಂಸಿಯ ಉಚ್ಚಾಟಿತ ಸಂಸದೆ ಮಹುವಾ ಮೋಯಿತ್ರಾ, ಎಥಿಕ್ಸ್ ಕಮಿಟಿಗೆ ಹೊರಹಾಕುವ ಅಧಿಕಾರವಿಲ್ಲ. ಇದು ನಿಮ್ಮ(ಬಿಜೆಪಿ) ಅಂತ್ಯದ ಆರಂಭ ಎಂದು ಕಿಡಿಕಾರಿದ್ದಾರೆ.

ನನ್ನನ್ನು ಬಾಯಿ ಮುಚ್ಚಿಸುವ ಮೂಲಕ ಅದಾನಿ ಸಮಸ್ಯೆಯನ್ನು ಹೋಗಲಾಡಿಸಬಹುದು ಎಂದು ಈ ಮೋದಿ ಸರ್ಕಾರ ಭಾವಿಸಿದ್ದರೆ, ಅದು ತಪ್ಪು. ನೀವು ಬಳಸಿದ ತರಾತುರಿ ಮತ್ತು ಸರಿಯಾದ ಪ್ರಕ್ರಿಯೆಯ ದುರುಪಯೋಗವು ನಿಮಗೆ ಅದಾನಿ ಎಷ್ಟು ಮುಖ್ಯ ಎಂಬುದನ್ನು ತೋರಿಸುತ್ತದೆ. ನಿಮ್ಮ ತಪ್ಪುಗಳನ್ನು ಪ್ರಶ್ನಿಸುವ ಒಂಟಿ ಮಹಿಳಾ ಸಂಸದರ ಬಾಯಿ ಮುಚ್ಚಿಸಲು ನೀವು ಎಷ್ಟು ಕಾಲ ಕಿರುಕುಳ ನೀಡುತ್ತೀರಿ ಎಂದು ಕಿಡಿಕಾರಿದ್ದಾರೆ.

ಪುಣೆ ಬಳಿಯ ಕ್ಯಾಂಡಲ್ ಫ್ಯಾಕ್ಟರಿಯಲ್ಲಿ ಅಗ್ನಿ ಅವಘಡ; 6 ಮಂದಿ ಸಜೀವ ದಹನ

ಪುಣೆ: ಪುಣೆ ಜಿಲ್ಲೆಯ ಪಿಂಪ್ರಿ ಚಿಂಚ್‌ವಾಡ್ ಪ್ರದೇಶದಲ್ಲಿರುವ ಕ್ಯಾಂಡಲ್ ತಯಾರಿಕಾ ಘಟಕದಲ್ಲಿ ಶುಕ್ರವಾರ ಅಗ್ನಿ ಅವಘಡ ಸಂಭವಿಸಿದ್ದು, ಘಟನೆಯಲ್ಲಿ ಕನಿಷ್ಟ ಆರು ಜನರು ಸಾವನ್ನಪ್ಪಿದ್ದಾರೆ ಮತ್ತು ಎಂಟು ಮಂದಿ ಗಾಯಗೊಂಡಿದ್ದಾರೆ.

ಇಂದು ಮಧ್ಯಾಹ್ನ 2.45 ರ ಸುಮಾರಿಗೆ ತಲವಾಡೆಯಲ್ಲಿರುವ ಕಾರ್ಖಾನೆಯಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ಅಗ್ನಿಶಾಮಕ ದಳಕ್ಕೆ ಕರೆ ಬಂದಿತ್ತು ಎಂದು ಪಿಂಪ್ರಿ–ಚಿಂಚ್‌ವಾಡ್ ಪುರಸಭೆಯ ಆಯುಕ್ತ ಶೇಖರ್ ಸಿಂಗ್ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ : ನಾನು ಒಳಗೆ ಬರಬಹುದಾ ಸಾರ್?
ಆಫೀಸರ್ : ವೇಟ್ ಪ್ಲೀಸ್
ಗುಂಡ : 75 ಕೆಜಿ ಸರ್!

ಮೈಸೂರು ಮಿತ್ರ

ಶನಿವಾರ, 9 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಶ್ರೀಮಂತಿಕೆಯ ಸ್ವಾರ್ಥ ಎಂತಹದ್ದೆಂದರೆ ನಾವು ಹೆಚ್ಚು ಹೆಚ್ಚು ಸಂಪಾದಿಸುವುದಷ್ಟೇ ಅಲ್ಲ, ಇತರರು ಕಡಿಮೆ ಉಳ್ಳವರಾಗಿರುವಂತೆಯೂ ಯತ್ನಿಸುವುದು. –ಜಾನ್‌ರಸ್ಕಿನ್

ವೇದ ಸುಳ್ಳಾದರೂ { ಕಾಸಿದ್ದಾಗ
ಗಾದೆ ಸುಳ್ಳಾಗದು { ಹಬ್ಬ ಮಾಡು

ನಿಮ್ಮ ಪತ್ರಗಳು

ಸಾರಿಗೆ ಬಸ್‌ಗಳ ಸಮಸ್ಯೆಯಿಂದ ತೊಂದರೆ

ಮಾನ್ಯರೆ,

ನಾನು ಮೈಸೂರು ನಗರ ಸಾರಿಗೆ ಬಸ್ಸಿನ ನಿತ್ಯಪ್ರಯಾಣಿಕ. ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳ ಸಮಸ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಪ್ರಸ್ತುತ ಶಕ್ತಿಯೋಜನೆಯಿಂದಾಗಿ ಸಾರಿಗೆ ಬಸ್ಸುಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಅಧಿಕವಾಗುತ್ತಿದೆ. ಹೀಗಾಗಿ ಕಚೇರಿಗೆ ತೆರಳುವವರಿಗೆ, ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕ ರಿಗೆ ಪ್ರತಿದಿನವೂ ಬಹಳ ತೊಂದರೆಯಾಗುತ್ತಿದೆ. ಹಿಂದಿನಂತೆ ನಿಲ್ದಾಣಗಳಲ್ಲಿ ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ನೀಡುವ ಐ.ಟಿ.ಎಸ್ ಫಲಕ ಸಮರ್ಪಕವಾಗಿ ಚಾಲನೆ ಗೊಳ್ಳುತ್ತಿಲ್ಲ ಹಾಗೂ ನಿಲ್ದಾಣದ ಕೋಡನ್ನು ನಮೂದಿಸಿ, 161ಕ್ಕೆ ಎಸ್.ಎಂ.ಎಸ್ ಕಳುಹಿಸುವ ಮೂಲಕ ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆಯು ಸ್ಥಗಿತಗೊಂಡಿದೆ. ಮಾರ್ಗ ಸಂಖ್ಯೆ 10ಎ, 11ಆರ್, 11ಆರ್‌ಜಿ, 135, 72, 11ಸಿ, 15 ಬಸ್ಸುಗಳು ಕಳೆದ 4 ವರ್ಷಗಳಿಂದ ಸ್ಥಗಿತವಾಗಿದ್ದು, ಇದುವರೆಗೂ ಕಾರ್ಯಾಚರಣೆ ಆರಂಭಿಸಿಲ್ಲ. ಬೆಳಗಿನ 8.30 ರಿಂದ 9.30ವರೆಗಿನ ಸಮಯದಲ್ಲಿ ನಗರದ ಎಲ್ಲಾ ನಿಲ್ದಾಣಗಳಲ್ಲೂ ಬಹಳ ಜನದಟ್ಟಣೆ ಇರುತ್ತದೆ. ಒಂದು ದಿನ ಬಂದ ಬಸ್ಸು ಇನ್ನೊಂದು ದಿನ ಬರುವುದಿಲ್ಲ. ಬಂದರೂ ನಿಲ್ದಾಣದಿಂದ ಸ್ವಲ್ಪ ದೂರ ಹಿಂದೆ ಅಥವಾ ಮುಂದೆ ಬಸ್ಸು ನಿಲ್ಲಿಸುತ್ತಾರೆ. ವಿಧಿಯಿಲ್ಲದೆ ಪ್ರಯಾಣಿಕರು ಬಸ್ಸು ಹತ್ತಲು ಬಸ್ಸಿನ ಹಿಂದೆ ಓಡುವಂತಾಗಿದೆ. ಈ ಸಂದರ್ಭದಲ್ಲಿ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿವೆ. ಸಮಸ್ಯೆ ಇಷ್ಟು ಗಂಭೀರವಾಗಿದ್ದರೂ, ಈ ಬಗ್ಗೆ ಪತ್ರಿಕೆ ಗಳಲ್ಲಿ ಅನೇಕ ಬಾರಿ ಪ್ರಕಟಗೊಂಡರೂ, ಯಾವುದೇ ಪ್ರಯೋಜನವಾಗಿರುವುದಿಲ್ಲ. ಸಮಸ್ಯೆ ಯಥಾಸ್ಥಿತಿ ಮುಂದುವರೆದಿದೆ. ಆದಕಾರಣ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ, ಶಾಸಕರು ಇತ್ತ ಗಮನಹರಿಸಿ, ಆದಷ್ಟು ಶೀಘ್ರ ಸ್ಥಗಿತಗೊಂಡಿರುವ ಎಲ್ಲಾ ಬಸ್ಸುಗಳನ್ನು ತುರ್ತಾಗಿ ಮರುಸಂಚರಿಸಬೇಕು ಮತ್ತು ಬಸ್ಸುಗಳ ಆಗಮನದ ಕುರಿತು ಪ್ರಯಾಣಿಕರಿಗೆ ಮಾಹಿತಿ ನೀಡುವ ವ್ಯವಸ್ಥೆಯನ್ನು ಮರುಜಾರಿಗೊಳಿಸಬೇಕೆಂದು ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳಿಗೆ ಸೂಚಿಸಬೇಕೆಂದು ಮನವಿ. **–ಪರಶಿವಮೂರ್ತಿ, ಮೈಸೂರು.**

ದಕ್ಷ–ಪ್ರಾಮಾಣಿಕ ಅಧಿಕಾರಿ ವರ್ಗಾವಣೆ ಸರಿಯೇ?

ಮಾನ್ಯರೆ,

ಮೈಸೂರಿನ ವಿ.ವಿ. ಪುರಂ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದ ದಕ್ಷ, ಪ್ರಾಮಾಣಿಕ, ಕರ್ತವ್ಯ ನಿಷ್ಠೆಗೆ ಹೆಸರಾಗಿದ್ದ ಮೋಹನ್ ಕುಮಾರ್ ಅವರನ್ನು ದಿಢೀರ್ ವರ್ಗಾವಣೆ ಮಾಡಲಾಗಿದೆ. ಗುಪ್ತಚರ ವಿಭಾಗದ ಹಿರಿಯ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಹತ್ಯೆಯ ಪ್ರಕರಣದಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಅಪರಾಧಿಗಳನ್ನು ಹೆಡೆಮುರಿ ಕಟ್ಟಿದ್ದರು. ಯಾದವಗಿರಿ ಮಹಿಳೆಯ ಸರ ಕಳವು ಪ್ರಕರಣದಲ್ಲಿ ಸಹ ಅಪರಾಧಿಯ ಜಾಡು ಹಿಡಿದು ಕೆಲವೇ ಗಂಟೆಗಳಲ್ಲಿ ಬಂಧಿಸಿದ್ದರು. ಇಂತಹ ಜನಾನುರಾಗಿ, ಜನಸ್ನೇಹಿ ಅಧಿಕಾರಿಗಳ ಅಗತ್ಯ ಸಮಾಜಕ್ಕಿದೆ.

–ಜಿ.ಪಿ.ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.

ಪುಂಡರಿಗೆ ಕಾನೂನಿನ ಭಯವಿಲ್ಲ

ಮಾನ್ಯರೆ,

ಕಲಬುರಗಿಯಲ್ಲಿ ನ್ಯಾಯಾಲಯಕ್ಕೆ ತೆರಳುತ್ತಿದ್ದ ವಕೀಲ ಈರಣ್ಣಗೌಡ ಪಾಟೀಲ್ ಅವರನ್ನು ಹಂತಕರು ಅಟ್ಟಾಡಿಸಿಕೊಂಡು ಬರ್ಬರವಾಗಿ ಹತ್ಯೆ ಮಾಡಿರುವುದು ಖಂಡನೀಯ. ಈ ಹಿಂದೆಯೂ ಹಲವಾರು ಕೊಲೆಗಳು, ಕೊಲೆ ಪ್ರಯತ್ನಗಳು ಪೊಲೀಸರ ಮೇಲೆ ಮತ್ತು ಕೆಲ ಅಧಿಕಾರಿಗಳ ಮೇಲೆ ನಡೆದಿದೆ. ಕಾನೂನು ಕಾಯುವವರ ಮೇಲೆಯೇ ಈ ರೀತಿಯ ಘಟನೆಗಳು ನಡೆದರೆ ಜನಸಾಮಾನ್ಯರ ಗತಿ ಏನು? ಗೂಂಡಾಗಳದ್ದೆ ಸಾಮ್ರಾಜ್ಯವಾದರೆ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಇವೆಲ್ಲವೂ ಏಕೆ ಬೇಕು. ಅಕ್ರಮ ತಡೆಯಲು ಪೊಲೀಸರು ವಾಹನ ಅಡ್ಡಗಟ್ಟಿದರೆ ಅವರ ಮೇಲೆ ವಾಹನ ಹತ್ತಿಸುವುದು, ಜಮೀನು ಅಳತೆಗೆ ಹೋದರೆ ತಹಸೀಲ್ದಾರರ ಮೇಲೆ ಹಲ್ಲೆ ಮಾಡುವುದು, ಕಂದಾಯ ಕೇಳಿದರೆ ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ಮಾಡುವುದು, ಸರ್ಕಾರಿ ಕಚೇರಿಯಲ್ಲಿ ಸಿಗರೇಟ್ ಸೇದುವುದನ್ನು ಪ್ರಶ್ನಿಸಿದರೆ ಹಲ್ಲೆ ನಡೆಸುವುದು... ಈ ರೀತಿ ದಿನೇ ದಿನೆ ಹಲ್ಲೆ, ಕೊಲೆಗಳು ಎಗ್ಗಿಲ್ಲದೆ ನಡೆಯುತ್ತಿವೆ. ಇದನ್ನು ತಪ್ಪಿಸುವ ಜವಾಬ್ದಾರಿ ಯಾರದ್ದು? ಇಂತಹ ಪ್ರಕರಣಗಳಿಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಾಹಿತಿಗಳು, ಹಿರಿಯ ಅಧಿಕಾರಿಗಳು, ನ್ಯಾಯಾಧೀಶರು ಇವರ ರಕ್ಷಣೆ ಯಾರ ಜವಾಬ್ದಾರಿ. ದಯಾಮಾಡಿ ಸರ್ಕಾರ ದಿಟ್ಟ ಕ್ರಮ ಕೈಗೊಂಡು ಕಾನೂನಿನ ಕುಣಿಕೆ ಬಿಗಿಗೊಳಿಸಬೇಕಿದೆ. ಈ ಹಿಂದೆ, ಮಾಜಿ ರಾಜ್ಯಪಾಲರಾಗಿದ್ದ ದಿವಂಗತ ಬಿ.ರಾಚಯ್ಯನವರು ಗೃಹ ಮಂತ್ರಿಯಾಗಿ ಗೂಂಡಾಗಿರಿ ಅಡಗಿಸಿದ ಮಾದರಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿ.**–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ**

ಅರಮನೆ ಆವರಣದಲ್ಲಿ ಅರ್ಜುನನ ಸ್ಮಾರಕ ನಿರ್ಮಿಸಲಿ

ಮಾನ್ಯರೆ,



ವಿಶ್ವ ವಿಖ್ಯಾತ ಮೈಸೂರು ದಸರಾ ಜಂಬೂ ಸವಾರಿಯಲ್ಲಿ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾಗಿ ಗಮನ ಸೆಳೆದು ಎಂಟು ಬಾರಿ 750 ಕೆಜಿ ಚಿನ್ನದ ಅಂಬಾರಿಯನ್ನು ಹೊತ್ತು ಮೈಸೂರಿನ ಅರಮನೆಯಿಂದ ಬನ್ನಿಮಂಟಪಕ್ಕೆ ರಾಜಗಾಂಭೀರ್ಯದಿಂದ ಹೆಜ್ಜೆ ಹಾಕಿ, ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದ ಅರ್ಜುನ ಮೂರು ದಿನಗಳ ಹಿಂದೆ ಕಾಡಾನೆ ದಾಳಿಗೆ ಮೃತಪಟ್ಟಿದ್ದಾನೆ. ಅರ್ಜುನನ ಧೈರ್ಯ–ಸ್ಥೈರ್ಯ, ಆಕರ್ಷಣೆ ಪ್ರತಿನಿತ್ಯ ಅರಮನೆಗೆ ಬರುವ ಪ್ರವಾಸಿಗರಿಗೂ ತಿಳಿಯಬೇಕು. ಈ ನಿಟ್ಟಿನಲ್ಲಿ ಅರಮನೆಯ ಆವರಣದಲ್ಲಿ ಒಂದೆಡೆ ಅರ್ಜುನನ ಸ್ಮಾರಕ ನಿರ್ಮಿಸಲಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಬಲ್ಲಾಳ್ ವೃತ್ತದ ಬಸ್ ನಿಲ್ದಾಣದ ಬಳಿ ಅಂತೂ ಚರಂಡಿ ದುರಸ್ತಿಗೆ ಮುಂದಾದ ಪಾಲಿಕೆ



ಮಾನ್ಯರೆ,

ಮೈಸೂರಿನ ಅಶೋಕ (ಬಲ್ಲಾಳ್) ವೃತ್ತದ ಬಸ್ ನಿಲ್ದಾಣದ ಬಳಿ ಚರಂಡಿ ದುರಸ್ತಿ ಕಾಮಗಾರಿ ಸುಮಾರು 6 ತಿಂಗಳಿನಿಂದ ಕುಂಟುತ್ತಾ ಸಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ಹಾಗೂ ಬಸ್‌ಗಾಗಿ ಕಾಯುವ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಈ ಕುರಿತು 'ಮೈಸೂರು ಮಿತ್ರ'ನ ನ.26ರ ಸಂಚಿಕೆಯ ನಿಮ್ಮ ಪತ್ರಗಳು ವಿಭಾಗದಲ್ಲಿ ಪತ್ರ ಪ್ರಕಟವಾಗಿತ್ತು. ಇದಕ್ಕೆ ಸ್ಪಂದಿಸಿರುವ ನಗರ ಪಾಲಿಕೆ ಅಧಿಕಾರಿಗಳು ಹೊಸದಾಗಿ ಮೋರಿ ನಿರ್ಮಿಸುವ ಕಾರ್ಯವನ್ನು ಮತ್ತೆ ಕೈಗೆತ್ತಿಕೊಂಡಿದ್ದಾರೆ. ಬೇಗ ಪೂರ್ಣಗೊಳಿಸಿದರೆ ಒಳ್ಳೆಯದು.**–ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲರು**



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp.
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಸದ್ಯ ಉತ್ತರದ ಮೂರು ರಾಜ್ಯಗಳಲ್ಲಿ ಕಮಲ ಕಮಾಲ್; ಅರಿತು ಮುನ್ನಡೆದರೆ ಕಾಂಗ್ರೆಸ್‌ಗಿಹುದು ಹೊಸತು ಭವಿಷ್ಯ

ಸನಾತನ ಹಿಂದೂ ಧರ್ಮ ವಿರೋಧಿಸುವವರ ಬಗ್ಗೆ ಸಹಾನುಭೂತಿ, ಮೋದಿ ವರ್ಚಸ್ಸಿನ ಎದುರು ಕಳೆಗುಂದಿದ ಕಾಂಗ್ರೆಸ್ ನಾಯಕತ್ವ, ಮೋದಿಯವರ ವಿರುದ್ಧ ಕೀಳುಮಟ್ಟದ ಪ್ರಚಾರ, ಪ್ರಮುಖವಾಗಿ ರಾಹುಲ್ ಗಾಂಧಿಯವರು ಮೋದಿ ವಿರುದ್ಧ ಬಳಸಿದ ಅಪಶಕುನ ಎಂಬ ಅಪಶಬ್ದ ಅದೇ ರೀತಿ ಪ್ರಿಯಾಂಕಾ ವಾದ್ರಾ ಅವರು ಮೋದಿಯವರು, ತೇರಾನಾಮ ಎಂಬ ಸಿನಿಮಾದಲ್ಲಿ ಸಲ್ಮಾನ್ ಖಾನ್ ಅರಚಿದಂತೆ ಅರಚುತ್ತಾರೆ ಎಂದು ಗೇಲಿ ಮಾಡಿದ್ದು ಕಾಂಗ್ರೆಸ್‌ಗೆ ದುಬಾರಿಯಾಯಿತು. ಚುನಾವಣಾ ರ್‍ಯಾಲಿಗಳಲ್ಲಿ ಅಪ್ರಸ್ತುತ ಎನ್ನಬಹುದಾದ ಅದಾನಿ–ಅಂಬಾನಿ ವಿರುದ್ಧ ಟೀಕೆಗಳು. ಮಧ್ಯ ಪ್ರದೇಶದಲ್ಲಿ ಕಮಲ್‌ನಾಥ್–ದಿಗ್ವಿಜಯ್ ಸಿಂಗ್, ರಾಜಸ್ಥಾನದಲ್ಲಿ ಗೆಹ್ಲೋಟ್–ಪೈಲಟ್ ಹಾಗೂ ಛತ್ತೀಸ್‌ಘಡದಲ್ಲಿ ಬಘೇಲ್–ಸಿಂಗ್‌ದಿವೊ ನಡುವಿನ ಭಿನ್ನಮತವು ಕಾಂಗ್ರೆಸ್‌ಗೆ ಸೋಲನ್ನು ಖಚಿತಗೊಳಿಸಿತು.

2024ರ ಲೋಕಸಭಾ ಚುನಾವಣಾ ಪೂರ್ವದ ಸೆಮಿಫೈನಲ್ ಫೈಟ್ ಎಂದು ಬಿಂಬಿತವಾಗಿದ್ದ ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾಗಿದೆ. ಉತ್ತರದ ಮೂರು ರಾಜ್ಯಗಳಾದ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಘಡಗಳಲ್ಲಿ ಬಿಜೆಪಿಯು ಅದ್ಭುತ, ಪ್ರಚಂಡ ಜಯ ಸಾಧಿಸಿದರೆ, ಕಾಂಗ್ರೆಸ್ ಅಘಾತಕಾರಿ ಸೋಲನನುಭವಿಸಿದೆ. ದಕ್ಷಿಣದ ತೆಲಂಗಾಣದಲ್ಲಿ ಸಾಧಿಸಿದ ವಿಜಯ ತೀವ್ರ ನಿರಾಶೆಯಲ್ಲೂ ಕಾಂಗ್ರೆಸ್‌ಗೆ ಸ್ವಲ್ಪ ಸಮಾಧಾನ ನೀಡಿದೆ. ಉತ್ತರದ ರಾಜ್ಯಗಳ ಜನರು ಕಾಂಗ್ರೆಸ್‌ನ ಗ್ಯಾರಂಟಿ ತಿರಸ್ಕರಿಸಿ ಮೋದಿ ಗ್ಯಾರಂಟಿಗೆ ಮತ ನೀಡಿದರು. ಪ್ರಧಾನಿ ಮೋದಿಯವರ ವರ್ಚಸ್ಸು, ಕೇಂದ್ರ, ರಾಜ್ಯ ನಾಯಕರ ನಿರಂತರ ರ್‍ಯಾಲಿ, ರೋಡ್ ಶೋಗಳು, ಸ್ಥಳೀಯ ನಾಯಕರೊಳಗೆ ಒಗ್ಗಟ್ಟಿನ ಮಂತ್ರ, ಸಮರ್ಥ ಅಭ್ಯರ್ಥಿಗಳ ಆಯ್ಕೆ, ರಾಜ್ಯಗಳ ಅಭಿವೃದ್ಧಿಗೆ ಸಂಬಂಧಿಸಿದ ಸ್ಪಷ್ಟ ರೋಡ್ ಮ್ಯಾಪ್, ಕಾರ್ಯಕರ್ತರ ಅಹರ್ನಿಶಿ ಪರಿಶ್ರಮ, ಸ್ಪಷ್ಟ ಕಾರ್ಯತಂತ್ರ, ಸಕಾರಾತ್ಮಕ ವಿಷಯಗಳ ಪ್ರತಿಪಾದನೆ, ಕಾಂಗ್ರೆಸ್ಸಿನ ಸನಾತನ ಹಿಂದೂ ಧರ್ಮ ವಿರೋಧಿ ಧೋರಣೆ, ಮತಾಂತರಗಳ ಕುರಿತು ಜಾಣ ಮೌನ ಇವೆಲ್ಲ ವಿಚಾರಗಳನ್ನು ಚಾಣಾಕ್ಷತನದಿಂದ ಪ್ರಚಾರ ಕಾರ್ಯದಲ್ಲಿ ಅನುಷ್ಠಾನಿಸಿ ಸಮಾಜದ ಎಲ್ಲಾ ವರ್ಗಗಳ ಹಾಗೂ ಮಹಿಳಾ ಮತದಾರರ ವಿಶ್ವಾಸ ಗಳಿಸುವ ಮೂಲಕ ಬಿಜೆಪಿ ಪ್ರಚಂಡ ಜಯ ಸಾಧಿಸಿತು.

ಇದಕ್ಕೆ ಸಂಪೂರ್ಣ ವಿರುದ್ಧವಾಗಿ ಕಾಂಗ್ರೆಸ್ ಪಕ್ಷವು ನಕಾರಾತ್ಮಕ ಚುನಾವಣಾ ಪ್ರಚಾರ ನಡೆಸಿತು. ಸನಾತನ ಹಿಂದೂ ಧರ್ಮ ವಿರೋಧಿಸುವವರ ಬಗ್ಗೆ ಸಹಾನುಭೂತಿ, ಮೋದಿ ವರ್ಚಸ್ಸಿನ ಎದುರು ಕಳೆಗುಂದಿದ ಕಾಂಗ್ರೆಸ್ ನಾಯಕತ್ವ, ಮೋದಿಯವರ ವಿರುದ್ಧ ಕೀಳುಮಟ್ಟದ ಪ್ರಚಾರ, ಪ್ರಮುಖವಾಗಿ ರಾಹುಲ್ ಗಾಂಧಿಯವರು ಮೋದಿ ವಿರುದ್ಧ ಬಳಸಿದ ಅಪಶಕುನ ಎಂಬ ಅಪಶಬ್ದ ಅದೇ ರೀತಿ ಪ್ರಿಯಾಂಕಾ ವಾದ್ರಾ ಅವರು ಮೋದಿಯವರು, ತೇರಾನಾಮ ಎಂಬ ಸಿನಿಮಾದಲ್ಲಿ ಸಲ್ಮಾನ್ ಖಾನ್ ಅರಚಿದಂತೆ ಅರಚುತ್ತಾರೆ ಎಂದು ಗೇಲಿ ಮಾಡಿದ್ದು ಕಾಂಗ್ರೆಸ್‌ಗೆ ದುಬಾರಿಯಾಯಿತು. ಚುನಾವಣಾ ರ್‍ಯಾಲಿಗಳಲ್ಲಿ ಅಪ್ರಸ್ತುತ ಎನ್ನಬಹುದಾದ ಅದಾನಿ–ಅಂಬಾನಿ ವಿರುದ್ಧ ಟೀಕೆಗಳು. ಮಧ್ಯ ಪ್ರದೇಶದಲ್ಲಿ ಕಮಲ್‌ನಾಥ್–ದಿಗ್ವಿಜಯ್ ಸಿಂಗ್, ರಾಜಸ್ಥಾನದಲ್ಲಿ ಗೆಹ್ಲೋಟ್–ಪೈಲಟ್ ಹಾಗೂ ಛತ್ತೀಸ್‌ಘಡದಲ್ಲಿ ಬಘೇಲ್–ಸಿಂಗ್‌ದಿವೊ ನಡುವಿನ ಭಿನ್ನಮತವು ಕಾಂಗ್ರೆಸ್‌ಗೆ ಸೋಲನ್ನು ಖಚಿತಗೊಳಿಸಿತು. ಈ ನಾಯಕರ ನಡುವಿನ ಭಿನ್ನಮತ ಪರಿಹರಿಸಲು ವಿಫಲವಾದ ಕೇಂದ್ರದ ದುರ್ಬಲವಾದ ನಾಯಕತ್ವ, ತಾವು ಗೆದ್ದೆ ಗೆಲ್ಲುತ್ತೇವೆಂಬ ಕಾಂಗ್ರೆಸ್ ನಾಯಕರ ಅತಿಯಾದ ಆತ್ಮ ವಿಶ್ವಾಸವು ಸೋಲಿಗೆ ಕಾರಣವಾಯಿತು.

ಮಧ್ಯ ಪ್ರದೇಶದಲ್ಲಿ ಮಹತ್ಸಾಧನೆ



ಮಧ್ಯ ಪ್ರದೇಶದಲ್ಲಿ 2022ರಲ್ಲಿ ಸಂಘಟನಾತ್ಮಕವಾಗಿ ಬಿಜೆಪಿಯಲ್ಲಿ ಶಿಥಿಲತೆ ಕಂಡು ಬಂದಿತ್ತು. ಕಾರ್ಯಕರ್ತರಲ್ಲಿ ನಿರುತ್ಸಾಹ ಎದ್ದು ಕಾಣುತ್ತಿತ್ತು. ಆಡಳಿತ ವಿರೋಧಿ ಅಲೆ ಸಣ್ಣ ಪ್ರಮಾಣದಲ್ಲಿ ವ್ಯಾಪಿಸಲು ಆರಂಭವಾಗಿತ್ತು. ಇವುಗಳನ್ನು ಆಗ ಗುರುತಿಸಿದ ಕೇಂದ್ರೀಯ ನಾಯಕತ್ವ ಕ್ರಿಯಾಶೀಲವಾಯಿತು. ಪ್ರಧಾನಿ ಮೋದಿ, ಅಮಿತ್ ಶಾ, ಜೆ.ಪಿ. ನಡ್ಡಾ ಹಾಗೂ ಇತರ ಕೇಂದ್ರ ನಾಯಕರು ನಿರಂತರವಾಗಿ ಮಧ್ಯಪ್ರದೇಶದ ವಿವಿಧ ಭಾಗಗಳಿಗೆ ಭೇಟಿ ನೀಡಿದರು. ಅಮಿತ್ ಶಾ ಅವರು ತಳಮಟ್ಟದ ಕಾರ್ಯಕರ್ತರ ಮನೆ ಮನೆಗೆ ತೆರಳಿ ಭೇಟಿಯಾಗಿ ಅವರಲ್ಲಿ ಉತ್ಸಾಹ, ವಿಶ್ವಾಸ ತುಂಬಿ ಸಂಘಟನೆಯನ್ನು ಚುರುಕುಗೊಳಿಸಿದರು. ಆನಂತರ ಕಾರ್ಯಕರ್ತರು, ಮತದಾರರನ್ನು ಸಂಪರ್ಕಿಸಿ ರಾಜ್ಯದಲ್ಲಿ ಆರಂಭವಾಗಿದ್ದ ಆಡಳಿತ ವಿರೋಧಿ ಅಲೆಯನ್ನು ಪರವಾಗಿ ಪರಿವರ್ತಿಸಿ ಪ್ರಚಂಡ ವಿಜಯಕ್ಕೆ ಅತ್ಯಾವಶ್ಯಕವಾದ ವೇದಿಕೆಯನ್ನು ನಿರ್ಮಿಸಿದರು.

ವಾಸ್ತವದಲ್ಲಿ ಮಧ್ಯ ಪ್ರದೇಶದಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್‌ರ ವ್ಯಕ್ತಿತ್ವ ಮತ್ತು ಮಹಿಳಾ ಅಭಿವೃದ್ಧಿ ಕೇಂದ್ರಿತ ಸುಮಾರು 21 ಯೋಜನೆಗಳಿಂದಾಗಿ ಬಿಜೆಪಿಯು ಅಭೂತಪೂರ್ವ ಗೆಲುವು ಸಾಧಿಸಿತು. ಸುದೀರ್ಘ ಕಾಲದಿಂದ ಮುಖ್ಯಮಂತ್ರಿಯಾಗಿರುವ ಶಿವರಾಜ್ ಬಗ್ಗೆ ಮಧ್ಯಪ್ರದೇಶದ ಜನತೆ ಬೇಸತ್ತಿರಬಹುದು ಎಂಬ ಕಾರಣದಿಂದ ಕೇಂದ್ರ ನಾಯಕತ್ವ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲಿಲ್ಲ. ಪ್ರಥಮ ಅಭ್ಯರ್ಥಿ ಪಟ್ಟಿಯಲ್ಲಿ ಅವರ ಹೆಸರೂ ಇರಲಿಲ್ಲ. ಈ ಬಗ್ಗೆ ಎಲ್ಲಿಯೂ ಅಸಮಾಧಾನ ತೋರದೇ ತಮ್ಮ ಅಭಿವೃದ್ಧಿ ಕಾರ್ಯ ಹಾಗೂ ಯೋಜನೆಗಳೇ ತಮಗೆ ಶ್ರೀರಕ್ಷೆ ಎಂಬ ವಿಶ್ವಾಸದಿಂದ ಜನರ ಮುಂದೆ ಹೋದರು.



ಶಿವರಾಜ್‌ರ ಮೃದು ಸ್ವಭಾವ, ಮುಗ್ಧತೆ, ಮಧ್ಯ ಪ್ರದೇಶ ಜನರ ಮೇಲೆ ಅವರಿಗಿದ್ದ ಅಪಾರ ಪ್ರೀತಿ, ವಿಶ್ವಾಸ, ಆತ್ಮೀಯತೆ, ಮಹಿಳೆಯರ ಮೇಲೆ ಅವರಿಗಿದ್ದ ಗೌರವ, ಸಮಸ್ಯೆಗಳ ಬಗ್ಗೆ ಇದ್ದ ಕಳಕಳಿಯಿಂದಾಗಿ ಅಲ್ಲಿನ ಜನರ ವಿಶ್ವಾಸ ಪಡೆದರು. ಮಹಿಳೆಯರಿಗೆ ಶಿವರಾಜ್‌ರು ಆತ್ಮೀಯ ಮಾಮಾ ಆಗಿದ್ದರು. ಶಿವರಾಜ್‌ರು ದಿನಕ್ಕೆ 10–12ರಂತೆ ಒಟ್ಟು 150ಕ್ಕೂ ಅಧಿಕ ರ್‍ಯಾಲಿಗಳನ್ನು ನಡೆಸಿದರು. 14 ರ್‍ಯಾಲಿಗಳಲ್ಲಿ ಭಾಗವಹಿಸಿದ್ದ ಮೋದಿ ಸಹಿತ ಅನೇಕ ಕೇಂದ್ರ ನಾಯಕರು ಅಬ್ಬರದ ಪ್ರಚಾರ ನಡೆಸಿದರೆ ಶಿವರಾಜ್‌ರು ಮೌನವಾಗಿಯೇ ಜನರ ಹೃದಯ ತಟ್ಟಿದರು. 'ಲಾಡ್ಲಿ ಲಕ್ಷ್ಮಿ', 'ಲಾಡ್ಲಿ ಬೆಹ್ನಾ' ಮೊದಲಾದ ಮಹಿಳಾ ಕೇಂದ್ರಿತ ಯೋಜನೆಗಳು ತಮಗೆ ಗೆಲುವು ನೀಡಲಿದೆ ಎಂಬ ಅಪಾರ ವಿಶ್ವಾಸ ಶಿವರಾಜ್‌ರಲ್ಲಿತ್ತು. ಚುನಾವಣೆ ಘೋಷಣೆಯ ಐದು ತಿಂಗಳ ಹಿಂದೆ ಜಾರಿಗೊಳಿಸಿದ 'ಲಾಡ್ಲಿ ಬೆಹ್ನಾ' ಯೋಜನೆಯಲ್ಲಿ ಸುಮಾರು 1.31 ಕೋಟಿ ಮಹಿಳೆಯರ ಖಾತೆಗೆ ಪ್ರತಿ ತಿಂಗಳು 1250 ರೂ. ಜಮೆಯಾಗಿದ್ದು, ಬಿಜೆಪಿ ಪರ ಗೇಮ್ ಚೇಂಜರ್ ಆಯಿತು. ಹಿಂದಿನ ಚುನಾವಣೆಗಳಲ್ಲಿ ಪುರುಷ ಮತದಾರರು ನಿರ್ಣಾಯಕರಾಗಿದ್ದರೆ, ಈ ಬಾರಿ ಮಹಿಳೆಯರ ಮತ ನಿರ್ಣಾಯಕವಾಗಿತ್ತು. ಇದನ್ನು ತಿಳಿದಿದ್ದ ಶಿವರಾಜ್‌ರು ಮತದಾನದ ಹಿಂದಿನ ದಿನ ಎಎನ್‌ಐಗೆ ನೀಡಿದ ಸಂದರ್ಶನದಲ್ಲಿ 'ಕಾಂಟೇ ಶೀ ಠಕ್ಕರ್, ಕಾಂಟೇ ಶೀ ಠಕ್ಕರ್, ಲಾಡ್ಲಿ ಬೆಹ್ನಾನೇ ಸಾರಾ ಕಾಂಟೇ ನಿಕಾಲ್ ದಿಯೇ (ತೀವ್ರ ಹಣಾಹಣಿ ಎಂದರೆ ಏನು? ಮಧ್ಯಪ್ರದೇಶದ ನನ್ನ ಸೋದರಿಯರು ವಿಜಯದ ಪಥವನ್ನು ಪ್ರಶಸ್ತಗೊಳಿಸಿದ್ದಾರೆ) ಎಂದು ಆತ್ಮವಿಶ್ವಾಸದಿಂದ ಹೇಳಿದರು. ಪ್ರಚಾರದ ಒಂದು ಹಂತದಲ್ಲಿ "ನಾನು ನಿಮ್ಮಿಂದ ದೂರವಾದ ಬಳಿಕ ಖಂಡಿತಾ ನೀವೆಲ್ಲಾ ನನ್ನನ್ನು ಕಳೆದುಕೊಳ್ಳುತ್ತೀರಿ" ಎಂದು ಭಾವುಕರಾಗಿ ಕಣ್ಣೀರಿಟ್ಟಾಗ ಅಲ್ಲಿ ಸೇರಿದ್ದ ಜನರ ಕಣ್ಣಂಚಿನಲ್ಲಿ ನೀರು ಜಿನುಗಿತ್ತು. ಈ ಹೇಳಿಕೆ ಮಧ್ಯಪ್ರದೇಶ ಮತದಾರರನ್ನು ಭಾವುಕಗೊಳಿಸಿತು. ಬಿಜೆಪಿಯ ಪ್ರಚಂಡ ವಿಜಯವನ್ನು ಖಚಿತಗೊಳಿಸಿತು. ಇದರೊಂದಿಗೆ ಮೂವರು ಕೇಂದ್ರ ಸಚಿವರನ್ನು ಕಣಕ್ಕೆ ಇಳಿಸಲಾಯಿತು. ಗ್ವಾಲಿಯರ್–ಚಂಬಲ್ ಪ್ರದೇಶದಲ್ಲಿ ಪ್ರಭಾವ ಹೊಂದಿದ್ದ ಜ್ಯೋತಿರಾದಿತ್ಯ ಸಿಂಧ್ಯಾರು ವ್ಯಾಪಕ ಪ್ರಚಾರ ನಡೆಸಿದರು. ಈ ರೀತಿ ಸಂಘಟಿತ, ಶಿಸ್ತುಬದ್ಧ ಚುನಾವಣಾ ಪ್ರಚಾರದಿಂದ, ತಂತ್ರಗಾರಿಕೆಯಿಂದ ಬಿಜೆಪಿ ಅಭೂತಪೂರ್ವ ಜಯ ಗಳಿಸಿತು. ಈ ಚುನಾವಣೆಯಲ್ಲಿ ಬಿಜೆಪಿಯು ಶೇ.49.09 ರಷ್ಟು ಮತ ಪಡೆದು 163 ಸ್ಥಾನ ಗಳಿಸಿದರೆ, ಕಾಂಗ್ರೆಸ್ ಶೇ. 40.04 ಮತ ಗಳಿಸಿ 66ಕ್ಕೆ ಕುಸಿಯಿತು. ಕಾಂಗ್ರೆಸ್‌ಗಿಂತ ಬಿಜೆಪಿಗೆ ಶೇ.10ರಷ್ಟು ಹೆಚ್ಚು ಮಹಿಳೆಯರು ಮತ ನೀಡಿದ್ದು ನಿರ್ಣಾಯಕವಾಯಿತು. ಬುಡಕಟ್ಟು ಸಮುದಾಯದ ಪ್ರಾಬಲ್ಯವಿರುವ 47ರಲ್ಲಿ ಬಿಜೆಪಿ 27 ಸ್ಥಾನ ಗಳಿಸಿದರೆ ಕಾಂಗ್ರೆಸ್ 19 ಸ್ಥಾನ ಗಳಿಸಿತು. 2018ರಲ್ಲಿ ಕಾಂಗ್ರೆಸ್ 31 ಸ್ಥಾನ ಗಳಿಸಿತ್ತು. ಜಾತಿವಾರು, ವರ್ಗವಾರು ಮತ ಗಳಿಕೆಯಲ್ಲೂ ಬಿಜೆಪಿ ಮೇಲುಗೈ ಸಾಧಿಸಿತು. ಬ್ರಾಹ್ಮಣರು ಬಿಜೆಪಿಗೆ ಶೇ. 54 ಮತ ನೀಡಿದರೆ ಕಾಂಗ್ರೆಸ್‌ಗೆ ಶೇ.28, ರಜಪೂತರು, ಬಿಜೆಪಿಗೆ ಶೇ.47, ಕಾಂಗ್ರೆಸ್‌ಗೆ ಶೇ.38 ಮತ ನೀಡಿದರು. ಶೇ.45ರಷ್ಟು ಪರಿಶಿಷ್ಟ ಜಾತಿಯವರು ಬಿಜೆಪಿಗೆ ಮತ ನೀಡಿದರೆ, ಕಾಂಗ್ರೆಸ್‌ಗೆ ಶೇ.41 ಪರಿಶಿಷ್ಟ ವರ್ಗದವರಲ್ಲಿ ಬಿಜೆಪಿ ಶೇ.46 ಮತ ಗಳಿಸಿದರೆ ಕಾಂಗ್ರೆಸ್‌ಗೆ ಶೇ. 39, ಓಬಿಸಿಯ ಶೇ.47, ಬಿಜೆಪಿಗೆ, ಶೇ.31 ಕಾಂಗ್ರೆಸ್‌ಗೆ ಮತ ನೀಡಿದರು. ಕೇವಲ ಮುಸಲ್ಮಾನ ಸಮಾಜ ಕಾಂಗ್ರೆಸ್‌ಗೆ ಭಾರೀ ಪ್ರಮಾಣದಲ್ಲಿ ಶೇ.84 ಮತ ನೀಡಿದರೆ, ಬಿಜೆಪಿ ಸುಮಾರು ಶೇ.8 ರಷ್ಟು ಈ ಸಮುದಾದಯದ ಮತ ಗಳಿಸಿತು. ಈ ಚುನಾವಣೆಯು ಆಡಳಿತ ವಿರೋಧಿ ಅಲೆಯನ್ನು ಮೀರಿ ಗೆಲುವು ಸಾಧಿಸಬಹುದು ಎಂಬುದನ್ನು ಬಿಜೆಪಿ ಸಾಬೀತುಪಡಿಸಿದೆ.

ಇದಕ್ಕೆ ವಿರುದ್ಧವಾಗಿ ಮಧ್ಯಪ್ರದೇಶ ಕಾಂಗ್ರೆಸ್ ವಿಜಯದ ಬಗ್ಗೆ ಅತಿಯಾದ ಆತ್ಮವಿಶ್ವಾಸ ಹೊಂದಿದ್ದರೂ, ಗೊಂದಲದ ಗೂಡಾಗಿತ್ತು. ದಿಗ್ವಿಜಯ್–ಕಮಲ್‌ನಾಥ್ ನಡುವಿನ ಕಲಹ, ಗ್ಯಾರಂಟಿಗಳಿಂದಲೇ ಅಭಿವೃದ್ಧಿ ಸಾಧ್ಯ ಎಂಬ ಭ್ರಮಾತ್ಮಕ ಆರ್ಥಿಕ ನೀತಿ, ಚುನಾವಣಾ ರ್‍ಯಾಲಿಗಳಲ್ಲಿನ ಭಾಷಣದಲ್ಲಿ ರಾಹುಲ್, ಪ್ರಿಯಾಂಕಾ ಹೊರ ಹಾಕುತ್ತಿದ್ದ ಮೋದಿ ದ್ವೇಷ, ಸನಾತನ ಧರ್ಮದ ಬಗ್ಗೆ ಕಾಂಗ್ರೆಸ್ ಹೊಂದಿದ್ದ ದ್ವೇಷವು ಮಧ್ಯಪ್ರದೇಶದ ಮತದಾರರನ್ನು ಕೆರಳಿಸಿತ್ತು. ಕೊನೆಯದಾಗಿ ಸ್ಪಷ್ಟವಾದ ಚುನಾವಣಾ ರಣನೀತಿ ರೂಪಿಸುವಲ್ಲಾದ ವೈಫಲ್ಯವು ಕಾಂಗ್ರೆಸ್‌ನ ಹೀನಾಯ ಸೋಲಿಗೆ ಕಾರಣವಾಯಿತು.

ಛತ್ತೀಸ್‌ಘಡದಲ್ಲಾದ ಚಮತ್ಕಾರ



2018ರಲ್ಲಿ ಕೇವಲ 15 ಸ್ಥಾನ ಗಳಿಸಿ ಹೀನಾಯ ಸೋಲನನುಭವಿಸಿದ ನಂತರ ಛತ್ತೀಸ್‌ಘಡದಲ್ಲಿ ಬಿಜೆಪಿ ದುರ್ಬಲಗೊಂಡಿತ್ತು. ಸಂಘಟನೆ ಶಿಥಿಲಗೊಂಡಿತ್ತು. ಕಾರ್ಯಕರ್ತರಲ್ಲಿ ನಿರಾಶೆ ಮಡುಗಟ್ಟಿತ್ತು. ಮಾಜಿ ಮುಖ್ಯಮಂತ್ರಿ ಡಾ. ರಮಣ್ ಸಿಂಗ್ ಮಂಕಾಗಿ ರಾಜಕೀಯ ಏಕಾಂತದಲ್ಲಿದ್ದರು. ರಾಜ್ಯದಲ್ಲಿ ವರ್ಚಸ್ವಿ ನಾಯಕರ ಕೊರತೆ ಎದ್ದು ಕಾಣುತ್ತಿತ್ತು. ಇದಕ್ಕೆ ಪ್ರತಿಯಾಗಿ ಹಾಲಿ ಕಾಂಗ್ರೆಸ್ ಮುಖ್ಯಮಂತ್ರಿ ಭೂಪೇಶ್ ಬಘೇಲ ಜನಪ್ರಿಯತೆಯ ಉತ್ತುಂಗದಲ್ಲಿದ್ದರು. ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆಂಬ ಅತಿಯಾದ ಆತ್ಮವಿಶ್ವಾಸ ಬಘೇಲ್, ಕಾಂಗ್ರೆಸ್ ನಾಯಕತ್ವ ಹೊಂದಿತ್ತು. ಎಲ್ಲಾ ಚುನಾವಣಾ ಸಮೀಕ್ಷೆ ಕಾಂಗ್ರೆಸ್ ಪ್ರಚಂಡ ವಿಜಯ ಗಳಿಸುತ್ತದೆಂದು ತಿಳಿಸಿದ್ದವು. ಆದರೆ ಬಘೇಲ್‌ರ ಅತಿಯಾದ ಆತ್ಮವಿಶ್ವಾಸ ಹಾಗೂ ಬಿಜೆಪಿಯ ನಿಖರ ಕಾರ್ಯತಂತ್ರದಿಂದ ಕಾಂಗ್ರೆಸ್ ಊಹಿಸಲಾಗದ, ಅಚ್ಚರಿಯ ಆಘಾತಕಾರಿ ಸೋಲನನುಭವಿಸಿತು. ಬಿಜೆಪಿಯ ಕೇಂದ್ರ ನಾಯಕತ್ವ ಛತ್ತೀಸ್‌ಘಡ ಚುನಾವಣಾ ಕಣಕ್ಕಿಳಿದಾಗ ಪರಿಸ್ಥಿತಿ ಪ್ರತಿಕೂಲವಾಗಿತ್ತು. ಆದರೆ ಕೇಂದ್ರ ನಾಯಕರು ಸಂಕ್ಷಿಪ್ತ ಕಾಲಾವಧಿಯಲ್ಲಿ ಕಾರ್ಯಕರ್ತರಲ್ಲಿ ವಿಶ್ವಾಸ ತುಂಬಿ ಕಾರ್ಯಕರ್ತರನ್ನು ಚುರುಕುಗೊಳಿಸಿದರು. ಡಾ. ರಮಣ್ ಸಿಂಗ್‌ರನ್ನು ಮುನ್ನೆಲೆಗೆ ತರಲಾಯಿತು. ಛತ್ತೀಸ್‌ಘಡದಲ್ಲಿ ಭಾರೀ ಸಂಖ್ಯೆಯಲ್ಲಿರುವ ಬುಡಕಟ್ಟು ಸಮುದಾಯದವರಿಗೆ ಅವರದೇ ಸಮುದಾಯದ ದ್ರೌಪದಿ ಮುರ್ಮುರನ್ನು ದೇಶದ ರಾಷ್ಟ್ರಪತಿ ಮಾಡಲಾಗಿದೆ ಎಂಬ ವಿಚಾರವನ್ನು ತಿಳಿಸಲಾಯಿತು. ಚುನಾವಣಾ ಪ್ರಚಾರದ ನಡುವೆ ಬಿಡುವು ಮಾಡಿಕೊಂಡು ಪ್ರಧಾನಿ ಮೋದಿಯವರು ಬುಡಕಟ್ಟು ಜನರು ದೇವರೆಂದು ಗೌರವಿಸುವ ಭಗವಾನ್ ಬಿರ್ಸಾ ಮುಂಡಾದ ಜಾರ್ಖಂಡ್‌ನಲ್ಲಿರುವ ಉಲಿಹಾತು ಗ್ರಾಮಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದರು. ಬಿರ್ಸಾ ಮುಂಡಾರ ಜನ್ಮ ದಿನವಾದ ನವೆಂಬರ್ 15 ಅನ್ನು ರಾಷ್ಟ್ರೀಯ ಜನಜಾತೀಯ ಗೌರವ ದಿವಸ ಎಂದು ಆಚರಿಸಲಾಗುವುದೆಂದು ಘೋಷಿಸಿದರು. ಚುನಾವಣಾ ಪ್ರಣಾಳಿಕೆಯಲ್ಲಿ ಮೋದಿ ಕೀ ಗ್ಯಾರಂಟಿ–2023 ಶೀರ್ಷಿಕೆಯಡಿ ಬಡ ಪರಿವಾರಗಳಿಗೆ ರೂ. 500ರಲ್ಲಿ ಗ್ಯಾಸ್ ಸಿಲಿಂಡರ್, ಒಂದು ಲಕ್ಷ ಸರ್ಕಾರಿ ಉದ್ಯೋಗ, ವಿವಾಹಿತ ಮಹಿಳೆಯರಿಗೆ ವಾರ್ಷಿಕ ರೂ. 12000 ಧನಸಹಾಯ, ಭತ್ತವನ್ನು ಕ್ವಿಂಟಾಲ್‌ಗೆ ರೂ. 3100 ದರದಲ್ಲಿ ಖರೀದಿಸುವ ಆಶ್ವಾಸನೆ. ಕೃಷಿ ಕಾರ್ಮಿಕರಿಗೆ ವಾರ್ಷಿಕ ರೂ. 10000 ಧನ ಸಹಾಯದ ಭರವಸೆಗಳನ್ನು ನೀಡಿತು. ಇದೇ ರೀತಿ 2025–26ರ ವೇಳೆಗೆ ಬುಡಕಟ್ಟು ಸಮುದಾಯದ ಜನಬಾಹುಳ್ಯವಿರುವ ಜಿಲ್ಲೆಗಳಲ್ಲಿ 740ರಷ್ಟು ಏಕಲವ್ಯ ಮಾದರಿ ವಸತಿ ಶಾಲೆಗಳ ಸ್ಥಾಪನೆ. ಪ್ರಧಾನಮಂತ್ರಿ ಆದಿ ಆದರ್ಶ ಗ್ರಾಮ ಯೋಜನೆಯಡಿ 36428 ಗ್ರಾಮಗಳನ್ನು ಸಮಗ್ರ ಪರಿವರ್ತನೆಯಿಂದ ಮಾದರಿ ಬುಡಕಟ್ಟು ಗ್ರಾಮಗಳನ್ನಾಗಿ ಮಾಡುವ ಆಶ್ವಾಸನೆ. ಈ ಎಲ್ಲಾ ಯೋಜನೆಗಳು, ಭರವಸೆಗಳು, ಛತ್ತೀಸ್‌ಘಡದಲ್ಲಿ ಬಿಜೆಪಿಗೆ ಪ್ರಚಂಡ ವಿಜಯ ಸಾಧಿಸಲು ನೆರವಾದವು. ಇದಲ್ಲದೇ ಬಘೇಲ್–ಸಿಂಗ್ ದಿಯೋ ನಡುವಿನ ಸಂಘರ್ಷ, ಬುಡಕಟ್ಟು ಜನರ ಬಲವಂತದ, ಮೋಸದ ಮತಾಂತರಕ್ಕೆ ಕಾಂಗ್ರೆಸ್ ಬೆಂಬಲಿಸುತ್ತಿದೆ ಎಂಬ ಸುದ್ದಿ ಬುಡಕಟ್ಟು ಸಮುದಾಯದವರ ಮೇಲೆ ಹೆಚ್ಚಿದ ದೌರ್ಜನ್ಯಗಳು, ಕೊನೆ ಹಂತದಲ್ಲಿ ಬಯಲಾದ ಬಘೇಲ್‌ರ ಮಹಾದೇವ ಆ್ಯಪ್ ಹಗರಣ ಕಾಂಗ್ರೆಸ್‌ನ ಸೋಲಿಗೆ ಕಾರಣೀಭೂತವಾದವು. ಅಂತಿಮವಾಗಿ ಛತ್ತೀಸ್‌ಘಡದಲ್ಲಿ ಬಿಜೆಪಿ ಶೇ.46.27 ಮತ ಗಳಿಸಿ 54 ಸ್ಥಾನ ಪಡೆದು ಪೂರ್ಣ ಬಹುಮತ ಗಳಿಸಿದರೆ, ಕಾಂಗ್ರೆಸ್ (ಶೇ.42.17) ಸ್ಥಾನ ಗಳಿಸಿ ಹೀನಾಯ ಸೋಲನನುಭವಿಸಿತು.

ರಾಜಸ್ಥಾನದಲ್ಲಿ ಕಮಲ ಕಮಾಲ್



ರಾಜಸ್ಥಾನದಲ್ಲಿ ಕಳೆದ ಮೂವತ್ತು ವರ್ಷದಿಂದ ನಡೆದು ಬಂದಿರುವ ಸಂಪ್ರದಾಯದಂತೆ ಈ ಬಾರಿ ಬಿಜೆಪಿ ವಿಜಯ ಸಾಧಿಸಿದೆ. ಆದರೆ ಬಿಜೆಪಿ ಈ ಪದ್ಧತಿಯಂತೆ ಫಲಿತಾಂಶ ಬರುವುದೆಂದು ಭಾವಿಸದೇ ಹುಮ್ಮಸ್ಸಿನಿಂದ ಸಂಘಟಿತವಾಗಿ ಚುನಾವಣೆ ಎದುರಿಸಿತು. ಪಕ್ಷವನ್ನು ಸದೃಢಗೊಳಿಸುವುದಕ್ಕಿಂತ ಗೆಹ್ಲೋಟ್ ಸರ್ಕಾರ ಉಳಿಸುವತ್ತ ಹೆಚ್ಚು ಗಮನ ನೀಡಿದ್ದ ರಾಜಸ್ಥಾನದ ವರ್ಚಸ್ವಿ ನಾಯಕಿ ವಸುಂಧರಾ ರಾಜೇ ಅವರನ್ನು ಸಿಎಂ ಅಭ್ಯರ್ಥಿಯೆಂದು ಬಿಂಬಿಸಲಿಲ್ಲ. ರಾಜಸ್ಥಾನದ ಚುನಾವಣಾ ಉಸ್ತುವಾರಿ ಹೊಣೆ ಹೊತ್ತ ಕರ್ನಾಟಕದ ಪ್ರಹ್ಲಾದ್ ಜೋಷಿಯವರು ರಾಜಸ್ಥಾನದಲ್ಲಿ ಪಕ್ಷದ ಎಲ್ಲಾ ಸ್ತರದ ನಾಯಕರನ್ನು ಒಂದಾಗಿಸುವಲ್ಲಿ ಯಶಸ್ವಿಯಾಗಿ ಪಕ್ಷದ ಗೆಲುವಿಗೆ ಭಾರೀ ಕೊಡುಗೆ ನೀಡಿದರು. ರಾಜಸ್ಥಾನದಲ್ಲಿ ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಕರ್ನಾಟಕದಂತೆ ಹಲವು ಗ್ಯಾರಂಟಿಗಳನ್ನು ಘೋಷಿಸಿತು. ಆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಗ್ಯಾರಂಟಿಗಳು ಇನ್ನೂ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ಹಾಗೂ ಲೋಕಸಭಾ ಚುನಾವಣೆ ನಂತರ ಹಿಂದೆಗೆಯಬಹುದು ಎಂಬುದನ್ನು ಜನತೆಗೆ ಮನವರಿಕೆ ಮಾಡುವಲ್ಲಿ ಬಿಜೆಪಿ ಯಶಸ್ವಿಯಾಯಿತು. ಇದರೊಂದಿಗೆ ಗೆಹ್ಲೋಟ್–ಪೈಲಟ್ ನಡುವಿನ ಬಿಕ್ಕಟ್ಟು ಕಾಂಗ್ರೆಸ್ ಸರ್ಕಾರಗಳು ಮಹಿಳೆಯರಿಗೆ ಸುರಕ್ಷಿತವಲ್ಲ ಎಂದು ಬಿಂಬಿಸುವಲ್ಲಿ ಬಿಜೆಪಿ ಯಶಸ್ಸು ಗಳಿಸಿತು. ರಾಜಸ್ಥಾನದಲ್ಲಿ ಬಿಜೆಪಿ 115 ರಲ್ಲಿ (ಶೇ.41.69) ವಿಜಯ ಸಾಧಿಸಿದರೆ ಕಾಂಗ್ರೆಸ್ ಕೇವಲ 69 ಸ್ಥಾನ (ಶೇ. 39.53) ಗಳಿಸಿ ಸೋಲನನುಭವಿಸಿತು.

ಮೋದಿಯವರ ವರ್ಚಸ್ಸು ಹಾಗೂ ನಿರಂತರ ಪ್ರಚಾರ, ಬಲಿಷ್ಠ ಆರ್ಥಿಕತೆ, ಯೋಜನೆಗಳ ಸಮರ್ಪಕ ಅನುಷ್ಠಾನ, ಯೋಜನೆಗಳ ಲಾಭ ವರ್ಗಾಯಿಸುವಲ್ಲಿ ಪಾರದರ್ಶಕತೆ, ತಳಮಟ್ಟದ ಕಾರ್ಯಕರ್ತರೊಂದಿಗೆ ಉತ್ತಮ ಸಂಪರ್ಕ, ಸಂವಹನ, ಮಹಿಳಾ ಮತದಾರರು ನೀಡಿದ ಅಭೂತಪೂರ್ವ ಬೆಂಬಲ, ಕಾಂಗ್ರೆಸ್ ದುರ್ಬಲಗೊಂಡ ಕೇಂದ್ರ ನಾಯಕತ್ವ, ಹಿಂದುತ್ವದ ಮೇಲಿನ ನಿಷ್ಠೆ ಹಾಗೂ ಉತ್ತಮ ಆಡಳಿತದ ಭರವಸೆಗಳು ಬಿಜೆಪಿಗೆ ಪ್ರಚಂಡ ವಿಜಯ ನೀಡುವಲ್ಲಿ ಸಹಕಾರಿಯಾದವು. ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ಕಾಂಗ್ರೆಸ್ ಈ ಮೂರು ರಾಜ್ಯಗಳಲ್ಲಿ ಸಂಪೂರ್ಣ ನೆಲಕಚ್ಚಿಲ್ಲ. ಮತ ಗಳಿಕೆ ಪ್ರಮಾಣದಲ್ಲೂ ಭಾರೀ ಕುಸಿತವಾಗಿಲ್ಲ. ಕೇಂದ್ರ ನಾಯಕತ್ವವು ದುರಹಂಕಾರ, ಮೋದಿ ದ್ವೇಷ ತ್ಯಜಿಸಿದಲ್ಲಿ, ರಾಜ್ಯಗಳಲ್ಲಿ ತಾಂಡವವಾಡುತ್ತಿರುವ ಆಂತರಿಕ ಕಚ್ಚಾಟಗಳನ್ನು ಪರಿಹರಿಸಿದಲ್ಲಿ ಅಲ್ಪಸಂಖ್ಯಾತರ ಅತಿಯಾದ ತುಷ್ಟೀಕರಣ, ಸನಾತನ ಹಿಂದು ಧರ್ಮದ ಮೇಲಿನ ದ್ವೇಷವನ್ನು ಪ್ರಾಮಾಣಿಕ ನೆಲೆಯಲ್ಲಿ ತ್ಯಜಿಸಿದಲ್ಲಿ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷವು ಪುನಃಶ್ಚೇತನಗೊಂಡು ಪುಟಿದೇಳುವ ಸಾಧ್ಯತೆ ಇದೆ.

ಮೈಸೂರಲ್ಲಿ ಬರವಿದ್ದರೂ ಹಾಲಿಗೆ ಬರವಿಲ್ಲ

ದಿನ ಕಳೆದಂತೆ ಹಾಲು ಉತ್ಪಾದನೆಯಲ್ಲಿ ಏರಿಕೆ



ಮೈಸೂರು, ಡಿ.8(ಬಿಎಲ್‌ಯು)– ಬರಗಾಲದ ಕಾರಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಹಾಲಿನ ಉತ್ಪಾದನೆ ಕಡಿಮೆಯಾದರೆ, ಮೈಸೂರಿನಲ್ಲಿ ಮಾತ್ರ ಹಾಲಿನ ಉತ್ಪಾದನೆ ಹೆಚ್ಚಾಗಿದೆ ಎಂದು ಮೈಮುಲ್ ಅಧ್ಯಕ್ಷ ಪ್ರಸನ್ನ ತಿಳಿಸಿದ್ದಾರೆ.

ಮೈಸೂರಿನಲ್ಲಿ ಪ್ರತಿ ದಿನ 8 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಆದರೆ ಈಗ ಇನ್ನು ಅಧಿಕ ಹಾಲು ಉತ್ಪಾದನೆಯಾಗುತ್ತಿದೆ. ಬರಗಾಲದಲ್ಲಿ ಮೇವು ಇಲ್ಲದೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಹಾಲಿನ ಉತ್ಪಾದನೆ ಕುಸಿದಿದೆ. ಆದರೆ ಮೈಸೂರು ಜಿಲ್ಲೆಯಲ್ಲಿ ಮೇವಿಗೆ ಬರವಿಲ್ಲದ ಹಿನ್ನೆಲೆಯಲ್ಲಿ ಹಾಲಿನ ಉತ್ಪಾದನೆ ದಿನ ಕಳೆದಂತೆ ಹೆಚ್ಚಾಗುತ್ತಿದೆ ಎಂದರು. 8 ಲಕ್ಷ ಲೀಟರ್ ಹಾಲಿನಲ್ಲಿ 3 ಲಕ್ಷ ಲೀಟರ್ ಹಾಲು ಸ್ಥಳೀಯವಾಗಿ ಮಾರಾಟವಾಗುತ್ತಿದೆ. ಸ್ವಲ್ಪ ಹಾಲನ್ನು ಕೇರಳ ಹಾಗೂ ತಮಿಳುನಾಡಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಉಳಿದ ಹಾಲನ್ನು ಪೌಡರ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಹಾಲು ಒಕ್ಕೂಟಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಕಾರಣ ಹಾಲಿನ ದರ ಹೆಚ್ಚಳ ಮಾಡುವಂತೆ ಹಾಲು ಒಕ್ಕೂಟಗಳು ಸರ್ಕಾರಕ್ಕೆ ಮನವಿ ಮಾಡಿದ್ದವು. ಆದರೆ ರಾಜ್ಯ ಸರ್ಕಾರ ಲೀಟರ್ ಹಾಲಿನ ದರವನ್ನು 3 ರೂಪಾಯಿ ಹೆಚ್ಚಳ ಮಾಡಿತು. ಆದರೆ ಈ ಹಣವನ್ನು ರೈತರಿಗೆ ವರ್ಗಾಯಿಸಿತು ಎಂದು ಪ್ರಸನ್ನ ಹೇಳಿದರು. ಹೆಚ್ಚಳವಾದ 3 ರೂಪಾಯಿಯಲ್ಲಿ ಒಂದು ರೂಪಾಯಿಯನ್ನಾದರೂ ಸರ್ಕಾರ ಒಕ್ಕೂಟಗಳಿಗೆ ನೀಡಿದ್ದರೆ, ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಳ್ಳಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. ಈಗ ಹಾಲಿನ ಪೌಡರ್ ಬೆಲೆ 280 ರೂಪಾಯಿಯಿಂದ 230 ರೂಪಾಯಿಗೆ ಇಳಿಕೆಯಾಗಿದೆ. ಇದು ಕೂಡ ಒಕ್ಕೂಟಗಳಿಗೆ ದೊಡ್ಡ ಹೊಡೆತವಾಗಿದೆ. ಈ ಎಲ್ಲಾ ಕಾರಣದಿಂದ ಮೈಸೂರು ಹಾಲು ಒಕ್ಕೂಟಕ್ಕೆ 20 ಕೋಟಿ ರೂ.ನಷ್ಟವಾಗಿದೆ ಎಂದು ತಿಳಿಸಿದರು. ಕಳೆದ ನಾಲ್ಕು ತಿಂಗಳಿನಿಂದ ಮೈಸೂರು ಹಾಲು ಒಕ್ಕೂಟ ನಷ್ಟದಲ್ಲೇ ಇದೆ. ಈಗ ಕೆಲವು ಸುಧಾರಣಾ ಕ್ರಮ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇನ್ನು 6 ತಿಂಗಳಲ್ಲಿ ಸುಧಾರಿಸಬಹುದು ಎಂದು ಪ್ರಸನ್ನ ವಿಶ್ವಾಸ ವ್ಯಕ್ತಪಡಿಸಿದರು.

ಅರ್ಜಿ ಆಹ್ವಾನ

ಮೈಸೂರು,ಡಿ.8– 2023–24ನೇ ಸಾಲಿನಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ವಿಕಲಚೇತನರಿಗೆ ವಿವಾಹ ಪ್ರೋತ್ಸಾಹ ಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೈಸೂರು ಜಿಲ್ಲೆಯ ಅರ್ಹ ವಿಕಲಚೇತನ ವ್ಯಕ್ತಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಚೇರಿ ಅಥವಾ ವಿಕಲಚೇತನರ ಸಹಾಯವಾಣಿ ಕೇಂದ್ರದ ದೂ.ಸಂ:0821–2490333 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶನಿವಾರ 9 ಡಿಸೆಂಬರ್ 2023

ಲೋಕಸಭಾ ಚುನಾವಣೆಯಲ್ಲಿ ಫ್ಲೆಕ್ಸ್, ಬ್ಯಾನರ್ ಹಾಕಿದರೆ ಕ್ರಮ

● ಮೈಸೂರು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಎಚ್ಚರಿಕೆ
● ಅರ್ಹರು ಮತದಾರರ ಪಟ್ಟಿಗೆ ಕಡ್ಡಾಯವಾಗಿ ಸೇರಿಸಬೇಕು

ಮೈಸೂರು, ಡಿ.8(ಬಿಎಲ್‌ಯು)– ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್, ಬ್ಯಾನರ್ ಅಳವಡಿಸಿದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಎಚ್ಚರಿಸಿದ್ದಾರೆ.



ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ಚುನಾವಣಾ ದರ ಪಟ್ಟಿ ಸಂಬಂಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚುನಾವಣೆ ವೇಳೆ ಗೋಡೆಗಳ ಮೇಲೆ ಸ್ಟಿಕ್ಕರ್ ಅಂಟಿಸುವಂತಿಲ್ಲ, ಮುದ್ರಣ ಮಾಡುವಂತಿಲ್ಲ ಎಂದು ಸೂಚಿಸಿದ್ದಾರೆ.

ಲೋಕಸಭಾ ಚುನಾವಣೆ ಸಂದರ್ಭದ ಖರ್ಚು–ವೆಚ್ಚಗಳ ಕುರಿತು ದರಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ ನೀಡಲಾಗಿದೆ. ಅವುಗಳಲ್ಲಿ ಯಾವುದಾದರೂ ಸಾಮಗ್ರಿಗಳ ದರ ವ್ಯತ್ಯಾಸ ಕಂಡು ಬಂದರೆ ಆಕ್ಷೇಪಣೆಯನ್ನು ಲಿಖಿತವಾಗಿ ಸಲ್ಲಿಸಬೇಕು ಎಂದು ತಿಳಿಸಿದರು.

ಮತದಾರರ ಪಟ್ಟಿಗೆ ಹೆಸರು ಸೇರಿಸಲು ವಿಶೇಷ ಅಭಿಯಾನ ನಡೆಸಲಾಗುತ್ತಿದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಎಂದು ಡಾ.ರಾಜೇಂದ್ರ ಸಲಹೆ ನೀಡಿದರು.

ಮೈಸೂರು ಜಿಲ್ಲೆಯಲ್ಲಿ ಹಾಡಿಗಳು ಹೆಚ್ಚಾಗಿವೆ. ಜೇನು ಕುರುಬ, ಕಾಡು ಕುರುಬ, ಬೆಟ್ಟ ಕುರುಬ ಸೇರಿದಂತೆ ಹಲವು ಬುಡಕಟ್ಟು ಜನಾಂಗ ಗಳು, ಪರಿಶಿಷ್ಟ ಪಂಗಡಗಳ ಜನರು ಮತದಾರರ ಪಟ್ಟಿ ಯಿಂದ ಹೊರಗುಳಿಯದಂತೆ ನೋಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಹೇಳಿದರು.

ಮೈಸೂರು ಜಿಲ್ಲೆಯ ಎಲ್ಲಾ ಕಾಲೇಜುಗಳಿಗೆ ಭೇಟಿ ನೀಡಿ 18 ವರ್ಷ ತುಂಬಿದ ಎಲ್ಲಾ ತೃತೀಯ ಲಿಂಗಿಗಳಿಗೆ ಎಪಿಕ್ ಕಾರ್ಡ್ ನೀಡಬೇಕು. ಲೈಂಗಿಕ ಕಾರ್ಯಕರ್ತೆಯರಿಗೆ ಶೇಕಡ 100ರಷ್ಟು ಎಪಿಕ್ ಕಾರ್ಡ್ ನೀಡಬೇಕು. ಅವರ ಬಗ್ಗೆ ಎನ್ ಜಿಒಗಳ ಬಳಿ ಮಾಹಿತಿ ಪಡೆದುಕೊಳ್ಳಿ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ಡಾ.ರಾಜೇಂದ್ರ ಸೂಚಿಸಿದರು.

ಈ ವೇಳೆ ಮಾತನಾಡಿದ ಅಪರ ಮುಖ್ಯ ಚುನಾವಣಾಧಿಕಾರಿ ಕೂರ್ಮಾರಾವ್, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ವಿಶೇಷ ಅಭಿಯಾನ ಹಮ್ಮಿಕೊಂಡಿದ್ದರೂ ಶೇಕಡ 100ರಷ್ಟು ನೋಂದಣಿ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕ ಸೇರಿದಂತೆ ಹಲವು ಕಾರ್ಯಕ್ರಮ ರೂಪಿಸಿ ಎಂದು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಮೈಸೂರು–ಚಾಮರಾಜನಗರ ಈಡಿಗರ ಕಡೆಗಣನೆ ; ಆರೋಪ



ಮೈಸೂರು, ಡಿ.8(ಜಿಎ)–ಬೆಂಗಳೂರಿನಲ್ಲಿ ಡಿ.10ರಂದು ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ವತಿಯಿಂದ ಆಯೋಜಿಸಿರುವ ಅಮೃತ ಮಹೋತ್ಸವಕ್ಕೆ ಮೈಸೂರು–ಚಾಮರಾಜನಗರದ ಈಡಿಗರನ್ನು ಮತ್ತು ಸಮುದಾಯದ ಸ್ವಾಮೀಜಿ ಪ್ರಣಾವನಂದ ಅವರನ್ನು ಆಹ್ವಾನಿಸದೇ ಕಡೆಗಣಿಸಿದ್ದಾರೆ ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳಿಯ ರಾಜ್ಯ ಜಂಟಿ ಕಾರ್ಯದರ್ಶಿ ಆರ್.ಗುರುರಾಜ್ ಈಡಿಗರ್ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸ್ಥಾನದ ಆರ್ಯ ಈಡಿಗ ಸಂಘಟನೆಯು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಷಡ್ಯಂತರ ಮಾಡುತ್ತಿದ್ದು, ಮೈಸೂರು ಮತ್ತು ಚಾಮರಾಜನಗರ ಭಾಗದ ಮುಖಂಡರು, ಯುವಕರನ್ನು ಕಡೆಗಣನೆ ಮಾಡುತ್ತಿದ್ದು, ಈ ಸಮಾವೇಶದ ಮುಖ್ಯ ಉದ್ದೇಶ ಸ್ವಾರ್ಥ ಉದ್ಯಮಿಗಳ ರಾಜಕೀಯ ಪ್ರೇರಿತ ಸಮಾವೇಶವಾಗಿದೆ. ಆದ್ದರಿಂದ ನಮ್ಮ ಸಂಘಟನೆಯಿಂದ ಅಂದು ಬೆಂಗಳೂರು ಅರಮನೆ ಮುಂಭಾಗ ಕಪ್ಪು ಪಟ್ಟಿ ಪ್ರದರ್ಶನ ಮಾಡುವುದರ ಮೂಲಕ ಮೌನ ಪ್ರತಿಭಟನೆ ಮಾಡಲಿದ್ದೇವೆ ಎಂದರು.

ಈಡಿಗ ನಿಗಮ ಮಂಡಳಿ ಸ್ಥಾಪನೆಗಾಗಿ ಪ್ರಣಾವನಂದ ಸ್ವಾಮೀಜಿ ಅವರು ಸಾವಿರಾರು ಕಿಮೀ ಪಾದಯಾತ್ರೆ ಮಾಡಿ ಶ್ರಮ ವಹಿಸಿದ್ದಾರೆ. ಆದರೆ, ರಾಜ್ಯ ಸಂಘವು ಅವರನ್ನು ನಮ್ಮ ಸಮುದಾಯದ ಸ್ವಾಮೀಜಿ ಅಲ್ಲ ಎಂದು ಹೇಳುತ್ತಾರೆ. ಜೊತೆಗೆ ಅವರ ಹೆಸರನ್ನು ಕಾರ್ಯಕ್ರಮದಲ್ಲಿ ಕೈಬಿಟ್ಟಿದ್ದಾರೆ. ಹಾಗೆಯೇ ಜನರನ್ನು ಸಮಾವೇಶದಲ್ಲಿ ಸೇರಿಸಲು ಹಣ ಮತ್ತು ಡಾ.ರಾಜ್ ಕುಮಾರ್ ಸಮಾಧಿ ತೋರಿಸುತ್ತೇವೆಂದು ಆಮಿಷ ಹೊಡ್ಡುತ್ತಿದ್ದಾರೆ ಎಂದು ದೂರಿದರು. ಸುದ್ದಿ ಗೋಷ್ಠಿಯಲ್ಲಿ ರಘು, ವಾಸು, ಕೃಷ್ಣ ಉಪಸ್ಥಿತರಿದ್ದರು.

ನಾಳೆ ಮೈಸೂರು ಲೋಗೋ;ಟ್ಯಾಗ್ ಲೈನ್ ಬಿಡುಗಡೆ

ಮೈಸೂರು,ಡಿ.8– ಮೈಸೂರು ಜಿಲ್ಲೆಯ ಪ್ರವಾಸೋದ್ಯಮ, ಸಂಸ್ಕೃತಿ, ಕಲೆ, ಪರಂಪರೆ ಬಿಂಬಿಸುವ 'ಬ್ರ್ಯಾಂಡ್ ಮೈಸೂರು' ಸ್ಪರ್ಧೆಯಲ್ಲಿ ವಿನ್ಯಾಸಗೊಂಡ ಲೋಗೊ ಹಾಗೂ ಟ್ಯಾಗ್‌ಲೈನ್ ಬಿಡುಗಡೆ ಕಾರ್ಯಕ್ರಮವನ್ನು ಡಿಸೆಂಬರ್ 10 ರಂದು ಸಂಜೆ 3.30 ಗಂಟೆಗೆ ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸ್ಥಳೀಯ ಎಲ್ಲಾ ಜನ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಾದ ಎಂ.ಕೆ.ಸವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಬೆಂಗಳೂರಿನಲ್ಲಿ ಆರ್ಯ ಈಡಿಗ ಸಂಘದ ಅಮೃತ ಮಹೋತ್ಸವ



ಮೈಸೂರು, ಡಿ.8(ಜಿಎ)–ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಅಮೃತ ಮಹೋತ್ಸವ ಮತ್ತು ಈಡಿಗ ಜನಾಂಗದ 25 ಪಂಗಡಗಳ ಬೃಹತ್ ಜಾಗೃತ ಸಮಾವೇಶವನ್ನು ಡಿ.10ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಕೃಷ್ಣಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಚಿವರು, ಶಾಸಕರು ಸೇರಿದಂತೆ ಸುಮಾರು ಮೂರು ಲಕ್ಷ ಮಂದಿ ಪಾಲ್ಗೊಳ್ಳಲಿದ್ದಾರೆ. ಈ ಬೃಹತ್ ಜಾಗೃತ ಸಮಾವೇಶದ ಮೂಲಕ ಹಿಂದುಳಿದ ನಮ್ಮ ಜನಾಂಗದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ, ಯುವಕರ ಉದ್ಯೋಗಕ್ಕೆ ಮತ್ತು ಜನಾಂಗದ ಬಡವರ ಏಳಿಗೆಗಾಗಿ ಈಡಿಗ ಅಭಿವೃದ್ಧಿ ನಿಗಮ ಸ್ಥಾಪಿಸಿ 500 ಕೋಟಿ ರೂ.ಗಳನ್ನು ಮೀಸಲಿಡಬೇಕೆಂದು ಕರ್ನಾಟಕ ಸರ್ಕಾರವನ್ನು ಒತ್ತಾಯಿಸಲಾಗುವುದು. ಆದ್ದರಿಂದ ಸಮಾವೇಶದಲ್ಲಿ ಜಿಲ್ಲೆಯಿಂದಲೂ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು. ಹೆಚ್ಚಿನ ಮಾಹಿತಿಗೆ 93419 16963ನ್ನು ಸಂಪರ್ಕಿಸಿ ಎಂದರು.

ಮೈಸೂರು–ಚಾಮರಾಜನಗರದ ಈಡಿಗರನ್ನು ರಾಜ್ಯ ಸಂಘವು ಕಡೆಗಣಿಸಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಸಂಘದ ವಿರುದ್ಧ ಹೇಳಿಕೆ ನೀಡಲು ಅವರಿಗೆ ಯಾವುದೇ ನೈತಿಕತೆ ಇಲ್ಲ. ಅವರಿಗೂ ಸಂಘಕ್ಕೂ ಯಾವುದೇ ಸಂಬಂಧವಿಲ್ಲ. ಅವರ ಆರೋಪಗಳೆಲ್ಲ ಸತ್ಯಕ್ಕೆ ದೂರವಾದವೂ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕೆ.ಎನ್. ಸ್ವಾಮಿ, ಎಚ್.ಟಿ. ಗೋವಿಂದರಾಜು, ರಾಜಶೇಖರ ಕದಂಬ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಸಾಧಕರ ಆದರ್ಶ ರೂಢಿಸಿಕೊಳ್ಳಬೇಕು

● ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಅಭಿಮತ ● ಅಭಿಯಂತರರ ರಂಗಸಂಭ್ರಮಕ್ಕೆ ಚಾಲನೆ

ಮೈಸೂರು,ಡಿ.8(ಎಸ್‌ಪಿಎನ್)– ಇಂದಿನ ವಿದ್ಯಾರ್ಥಿಗಳು ಸರ್.ಎಂ. ವಿಶ್ವೇಶ್ವರಯ್ಯ, ಕುವೆಂಪು, ಪೂರ್ಣ ಚಂದ್ರ ತೇಜಸ್ವಿ ಸೇರಿದಂತೆ ಇತರೆ ಸಾಧಕರ ಬದುಕಿನ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹಿರಿಯ ಸಾಹಿತಿ ಪ್ರೊ. ಕಾಳೇಗೌಡ ನಾಗವಾರ ಅಭಿಪ್ರಾಯಪಟ್ಟರು.



ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಅಭಿಯಂತರರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮೂರು ದಿನಗಳ 'ರಂಗಸಂಭ್ರಮ'ಕ್ಕೆ ತಾಳ ಮದ್ದಳೆ ಬಾರಿಸುವ ಮೂಲಕ ಚಾಲನೆ ನೀಡಿ, ಮಾತನಾಡಿದರು.

ಕುವೆಂಪು ಅವರು ಸಾರ್ವಜನಿಕವಾಗಿ ಹೆಚ್ಚು ಮಾತನಾಡುತ್ತಿರಲಿಲ್ಲ. ಆದರೆ, ಅವರ ಚಿಂತನೆ, ಆದರ್ಶಗಳು ಇಂದಿಗೂ ಸಾರ್ವಕಾಲಿಕವಾಗಿವೆ. ಅವರು ರಚಿಸಿದ ಒಂದೊಂದು ಕಾವ್ಯ, ನಾಟಕ, ಗದ್ಯ, ಪ್ರಬಂಧ, ಕಾದಂಬರಿಗಳು ಎಲ್ಲಾ ಕಾಲಕ್ಕೂ ಸಲ್ಲುವ ಬರಹಗಳಾಗಿವೆ. ಅದರಲ್ಲೂ ಕನ್ನಡದಲ್ಲಿ ರಾಮಾಯಣ ದರ್ಶನಂ ರಚಿಸಿ, ಕನ್ನಡ ಸಾರಸ್ವತ ಲೋಕಕ್ಕೆ ಹೊಸ ಮೆರಗು ತಂದುಕೊಟ್ಟ ಪ್ರಸಂಗವನ್ನು ತಿಳಿಸಿಕೊಟ್ಟರು.

ಅಲ್ಲದೆ ಕುವೆಂಪು ಅವರ ಪುತ್ರ ಹಾಗೂ ಹಿರಿಯ ಸಾಹಿತಿ ಪೂರ್ಣ ಚಂದ್ರ ತೇಜಸ್ವಿ, ತಂದೆಯ ಖ್ಯಾತಿಯೊಂದಿಗೆ ನನ್ನ ಸಾಧನೆ ತಳಕು ಹಾಕದಂತೆ ಎಚ್ಚರವಹಿಸಿ, ತಂದೆಯ ಪ್ರಭಾವಳಿಯಿಂದ ಬೇರ್ಪಟ್ಟು ಬೆಳೆದ ರೀತಿ–ನೀತಿ, ಅವರ ವ್ಯಕ್ತಿತ್ವ ಇಂದಿನ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು ಎಂದು ಕಿವಿಮಾತು ಹೇಳಿದರಲ್ಲದೆ, ಅಭಿಯಂತರ ಸಂಸ್ಥೆಯು ಹವ್ಯಾಸಿ ರಂಗಭೂಮಿಯಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಅದರ ಚಟುವಟಿಕೆಗಳನ್ನು ನಾನು ಹಲವು ವರ್ಷಗಳಿಂದ ನೋಡಿ ಕೊಂಡು ಬಂದಿದ್ದು, ಈ ಸಂಸ್ಥೆ ಇಂಜಿನಿಯರ್ ವಿದ್ಯಾರ್ಥಿಗಳನ್ನು ರಂಗಭೂಮಿಯಲ್ಲಿ ತೊಡಗಿಸಿದ್ದರ ಹಿಂದೆ ಅವರ ಸಾಧನೆ ಅಪಾರ ಎಂದರು.

ರಂಗಭೂಮಿ ಮೂಲಕ ಮನುಷ್ಯ ಸಂಬಂಧಗಳನ್ನು ಬೆಸೆಯುವ ಕೆಲಸವಾಗಬೇಕು. ಜನತೆಗೆ ಸರಿ, ತಪ್ಪು ಯಾವುದು ಎಂಬುದನ್ನು ತೋರಿಸಿಕೊಡುವ ಅಗತ್ಯತೆ ಇದೆ. ರಂಗ ಚಳವಳಿಗಳು ಶಾಶ್ವತವಾಗಿ ಉಳಿಯಬೇಕಾದರೆ, ರಂಗಭೂಮಿಗೆ ಯುವಕರ ಬೆಂಬಲ ಅಗತ್ಯ ಎಂದು ತಿಳಿಸಿದರು.

ಪ್ರತಿಯೊಂದು ಹಳ್ಳಿಗಾಡಿನ ಸಮಸ್ಯೆಗಳು ತೇಜಸ್ವಿ ಅವರಿಗೆ ತಿಳಿದಿದ್ದವು. ಇವರಿಗೆ ಕುವೆಂಪು ಅವರಿಗಿಂತ ಹೆಚ್ಚು ಅಭಿಮಾನಿಗಳಿದ್ದರು. ನಮ್ಮ ವೃತ್ತಿ ಜೊತೆಗೆ ಕಲೆ, ಸಾಹಿತ್ಯ, ಆರೋಗ್ಯ ಹಾಗೂ ಸುಸಂಸ್ಕೃತವಾದ ಸಮಾಜ ಬೆಳೆಸುವ ಅಗತ್ಯವಿದೆ. ಕಲಾವಿದರಿಗೆ ಹಿತವಚನ ಹೇಳುತ್ತ ಇಂದಿನ ಸಿನಿಮಾ, ಟಿವಿ ಧಾರಾವಾಹಿಗಳ ಪ್ರಭಾವ ಎಷ್ಟೇ ಬೀರಿದರೂ ನಾಟಕದ ಕಲೆ ಎಂದೆಂದಿಗೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿರುವುದು ಶ್ಲಾಘನೀಯ ಎಂದರು.

ಕಲಾವಿದರು ತಮ್ಮ ಬದುಕು ಸಂಕಷ್ಟದಲ್ಲಿದ್ದರೂ ತಮ್ಮ ರಕ್ತಗತವಾದ ಕಲೆಯಿಂದ ಸಮಾಜದ ಸಂಕಷ್ಟಗಳನ್ನು ಮರೆಸಿ ಮನರಂಜಿಸುತ್ತಾರೆ. ಹಾಗಾಗಿ ಸಾರ್ವಜನಿಕರು ನಾಟಕಗಳನ್ನು ನೋಡಿ, ಪ್ರೋತ್ಸಾಹಿಸುವ ಮೂಲಕ ಕಲಾವಿದರಿಗೆ ಪ್ರೇರಕ ಶಕ್ತಿಯಾಗಿ ನಿಲ್ಲಬೇಕು ಎಂದು ರಂಗಪ್ರಿಯರಲ್ಲಿ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ರಂಗನಿರ್ದೇಶಕ ರಾಜೇಂದ್ರ ಕಾರಂತ, ಅಭಿಯಂತರರ ಸಂಸ್ಥೆ ಅಧ್ಯಕ್ಷ ಎಚ್. ಎಸ್.ಸುರೇಶ್ ಬಾಬು, ಕಾರ್ಯದರ್ಶಿ ಬಿ.ಎಸ್.ತಾಂಡವಮೂರ್ತಿ ಹಾಗೂ ಅಭಿಯಂತರ ಸಮೂಹ ಉಪಸ್ಥಿತರಿದ್ದರು. ಇದೇ ವೇಳೆ ಅಭಿಯಂತರ ಸಂಸ್ಥೆ ಮೂರು ದಶಕಗಳ ಸಾಧನೆ ಕುರಿತಾದ 'ಸಾರ್ಥಕ ತ್ರಿದರ್ಶಕ 'ಪುಸ್ತಕವನ್ನು ಬಿಡುಗಡೆಗೊಳಿಸಿದರು. ನಂತರ ಕೆ.ವಿ.ಸುಬ್ಬಣ್ಣ ರಚನೆಯ, ಮಂಜುನಾಥ್ ಬಡಿಗೇರ್ ನಿರ್ದೇಶನದ ಸೂಳೇ ಸನ್ಯಾಸಿ ನಾಟಕ ಪ್ರೇಕ್ಷಕರ ಮನಸೆಳೆಯಿತು. ಡಿ.9ರಂದು ರಂಗಕರ್ಮಿ ರಾಜೇಂದ್ರ ಕಾರಂತ ನಿರ್ದೇಶನದ ಮಲ್ಲಿಗೆ ತೋಟದಲ್ಲಿ ಮರ್ಡರ್ ನಾಟಕ ಪ್ರದರ್ಶನವಾಗಲಿದೆ. ಡಿ.10ರಂದು ಹಿರಿಯ ಸಾಹಿತಿ ಪೂರ್ಣಚಂದ್ರ ತೇಜಸ್ವಿ ರಚಿತ, ಸಿ.ಬಸವಲಿಂಗಯ್ಯ ಅವರ ರಂಗರೂಪ, ಹೆಚ್. ಎಸ್.ಸುರೇಶ್ ಅವರ ನಿರ್ದೇಶನದ ಚಿದಂಬರ ರಹಸ್ಯ ಪ್ರದರ್ಶನಗೊಳ್ಳಲಿದೆ.

ಕಾವೇರಿ ಕ್ರಿಯಾ ಸಮಿತಿ ಹೋರಾಟಕ್ಕೆ ಸಾಹಿತಿ ಸಿಪಿಕೆ ಸಾಥ್



ಮೈಸೂರು, ಡಿ.8(ಜಿಎ)–ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ಪುರಭವನದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಧರಣಿಗೆ ಶುಕ್ರವಾರ ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣ ಕುಮಾರ್(ಸಿಪಿಕೆ) ಸಾಥ್ ನೀಡಿದರು.

ಈ ವೇಳೆ ಮಾತನಾಡಿದ ಅವರು, ಕಾವೇರಿ ನ್ಯಾಯಾಧೀಕರಣ ಮತ್ತು ಪ್ರಾಧಿಕಾರವೂ ಕರ್ನಾಟಕದ ಕಾವೇರಿಕೊಳ್ಳದ ಜನರಿಗೆ ಬಹಳ ಅನ್ಯಾಯ ಮಾಡಿದೆ. ನಾವು ಇನ್ನೂ ನೀರು ಬಿಟ್ಟರೇ ನಮಗೆ ನೀರು ಇರುವುದಿಲ್ಲ. ಈಗಾಗಲೇ ಅನೇಕ ತಾಲೂಕಿನಲ್ಲಿ ಬರದ ಛಾಯೆ ಮೂಡಿದ್ದು, ಆಹಾರ ಧಾನ್ಯಕ್ಕೆ ಆಹಾಕಾರ ಹೆಚ್ಚಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನೀರು ಹರಿಸಿದರೆ, ಜೀವನದ ಅಳಿವು ಉಳಿವಿನ ಪ್ರಶ್ನೆಯಾಗಲಿದೆ ಎಂದರು.

ಕನ್ನಡಿಗರಿಗೆ ಕನ್ನಡದ ನೆಲ, ಜಲ, ಭಾಷೆ ಸೇರಿದಂತೆ ಎಲ್ಲಾ ವಿಚಾರದಲ್ಲಿ ಹೋರಾಡುವ ಸ್ಥಿತಿ ನಿರ್ಮಾಣವಾಗಿದ್ದು, ನಮ್ಮ ಸರ್ಕಾರ ದುರ್ಬಲವಾಗಿರುವುದೇ ಇದಕ್ಕೆ ಕಾರಣ. ಇಚ್ಛಾಶಕ್ತಿ ಇಲ್ಲದಂತಹ ಸರ್ಕಾರವನ್ನು ಎಚ್ಚರಿಸಬೇಕಿದೆ. ಯಾವುದೇ ಸರ್ಕಾರವಿದ್ದರೂ ನಮ್ಮ ಹಿತಕ್ಕೆ ಮಾರಕವಾಗಿದ್ದಾಗ ಪ್ರತಿಭಟನೆ ಮಾಡಬೇಕಿದೆ. ಈ ಅನುಸಾರವಾಗಿ ನಡೆಯುತ್ತಿರುವ ಧರಣಿ ಯಶಸ್ವಿಯಾಗಲಿ ಎಂದು ಆರೈಸಿದರು. ಧರಣಿಯಲ್ಲಿ ಸಮಿತಿ ಅಧ್ಯಕ್ಷ ಜಯ ಪ್ರಕಾಶ್, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಬಸವರಾಜು, ಮಹದೇವಪ್ಪ, ಮೆಲ್ಲಹಳ್ಳಿ ಮಹದೇವಸ್ವಾಮಿ, ಚಿನ್ನಸ್ವಾಮಿ, ಶಿವಪ್ಪ ದೇವರು, ಪ್ರಭಾ, ಅಲ್ಲಮ್ಮ, ವಿಷ್ಣು, ಟೈಗರ್ ಬಾಲಾಜಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಓದು ಕಾರ್ಯಕ್ರಮ



ಮೈಸೂರು, ಡಿ.8(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಯೋಗದಲ್ಲಿ 'ಡಾ.ಬಿ.ಆರ್.ಅಂಬೇಡ್ಕರ್ ಓದು' ಕಾರ್ಯಕ್ರಮ ನಡೆಸಲಾಯಿತು.

ಅಂಬೇಡ್ಕರ್ ಅವರ ಬದುಕು, ಬರಹ, ಭಾಷಣಗಳ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಹಾಗೂ ಪುಸ್ತಕ ರೂಪದಲ್ಲಿ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿ, 'ಅಂಬೇಡ್ಕರ್ ಓದು' ಕಾರ್ಯಕ್ರಮದ ಮಹತ್ವ ತಿಳಿಸಿಕೊಟ್ಟರು.

ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ನಾಗೇಂದ್ರಕುಮಾರ್, ಅಂಬೇಡ್ಕರ್ ಅವರ ಜೀವನ, ಸಾಧನೆ, ಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ರಾಗಿಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕಾಲೇಜಿನ ಪ್ರಾಧ್ಯಾಪಕರುಗಳಾದ ಡಾ.ಎಸ್.ವಿ.ಮುರಳೀಧರ, ಡಾ.ಪಿ.ಬೆಟ್ಟೇಗೌಡ, ಪ್ರೊ.ಪಿ.ಡಿ.ದಮಯಂತಿ, ಪ್ರೊ.ಹೆಚ್.ಎಲ್.ವಿಷಕಂಠ, ವಿದ್ಯಾರಣ್ಯ ಮತ್ತಿತರರು ಉಪಸ್ಥಿತರಿದ್ದರು.

ಗನ್‌ಹೌಸ್ ಬಳಿಯ ವೃತ್ತದಲ್ಲಿ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆ; ಅರಸು ಜನಾಂಗದವರ ಪ್ರತಿಭಟನೆ



ಗನ್‌ಹೌಸ್ ಬಳಿಯ ವೃತ್ತದಲ್ಲಿ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆಗೆ ಪರ–ವಿರೋಧ ವ್ಯಕ್ತವಾಯಿತು.

ಮೈಸೂರು, ಡಿ.8–ಅರಮನೆ ಹಾಗೂ ಜೆಎಸ್‌ಎಸ್ ವಿದ್ಯಾಪೀಠದ ನಡುವೆ ಗನ್‌ಹೌಸ್ ಬಳಿಯ ವೃತ್ತದಲ್ಲಿ ಶುಕ್ರವಾರ ರಾತ್ರಿ ಶಿವರಾತ್ರಿ ಶ್ರೀ ರಾಜೇಂದ್ರ ಸ್ವಾಮೀಜಿಯವರ ಪ್ರತಿಮೆ ಪ್ರತಿಷ್ಠಾಪನೆ ಮಾಡಿದ್ದು, ಇದನ್ನು ವಿರೋಧಿಸಿ ಅರಸು ಜನಾಂಗದ ಮುಖಂಡರು ಪ್ರತಿಭಟನೆ ನಡೆಸುತ್ತಿದ್ದಾರೆ.

ಕ್ರೇನ್ ಮೂಲಕ ರಾಜೇಂದ್ರ ಶ್ರೀಗಳ ಪ್ರತಿಮೆ ತುದು ನಿಲ್ಲಿಸಿದ ವಿಷಯ ತಿಳಿದ ಅರಸು ಜನಾಂಗದವರು, ತಕ್ಷಣ ಸ್ಥಳಕ್ಕೆ ದೌಡಾಯಿಸಿ, ಇಲ್ಲಿ ಪ್ರತಿಮೆ ಪ್ರತಿಷ್ಠಾಪಿಸುವ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣವಿದೆ. ಆದರೂ ಜೆಎಸ್‌ಎಸ್ ವಿದ್ಯಾ ಪೀಠದವರು ಏಕಾಏಕಿ ಪ್ರತಿಮೆ ಸ್ಥಾಪಿಸಿದ್ದಾರೆ. ಇದಕ್ಕೆ ಪೊಲೀಸರೂ ಸಹಕರಿಸಿದ್ದಾರೆ. ಪ್ರತಿಮೆ ತೆರವು ಮಾಡು ವವರೆಗೂ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದರು.

ಈ ವೇಳೆ ಸ್ಥಳಕ್ಕೆ ಬಂದ ರಾಜೇಂದ್ರ ಶ್ರೀಗಳ ಭಕ್ತರು, ಪ್ರತಿಮೆ ಸ್ಥಾಪನೆಗೆ ವಿರೋಧ ಮಾಡುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಕೆಲಕಾಲ ಪರಸ್ಪರ ಮಾತಿನ ಚಕಮಕಿ ನಡೆದು, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಎರಡು ಗುಂಪಿನವರನ್ನು ಸಮಾಧಾನಪಡಿಸಿದರು.

ನ್ಯಾಯಾಲಯ ಪ್ರತಿಮೆ ಸ್ಥಾಪನೆಗೆ ಅವಕಾಶ ನೀಡಿದ್ದರೆ ಅದರ ಆದೇಶ ಪ್ರತಿಯನ್ನು ಕೊಟ್ಟು ಮುಂದುವರೆಯಲಿ. ಇದನ್ನು ಬಿಟ್ಟು ರಾತ್ರೋರಾತ್ರಿ ಏಕಾಏಕಿ ಪ್ರತಿಮೆ ಸ್ಥಾಪಿಸಿರುವುದು ಖಂಡನೀಯ. ಜಿಲ್ಲಾಧಿಕಾರಿಗಳು ಬಂದು ಈ ಸಂಬಂಧ ಸ್ಪಷ್ಟನೆ ನೀಡುವವರೆಗೂ ನಾವು ಬಿಡುವುದಿಲ್ಲ ಎಂದು ಅರಸು ಜನಾಂಗದವರು ರಾತ್ರಿ ಬಹುಹೊತ್ತಿನವರೆಗೂ ಪ್ರತಿ ಭಟನೆ ಮುಂದುವರೆಸಿದ್ದರು. ಅತ್ತ ಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಭಾರಿ ಪೊಲೀಸ್ ಬಂದೋ ಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಮೈಸೂರಲ್ಲಿ ಲೀಲಾವತಿ ಅವರಿಗೆ ಶ್ರದ್ಧಾಂಜಲಿ



ಮೈಸೂರು, ಡಿ.8(ಎಸ್‌ಬಿಡಿ)– ದಕ್ಷಿಣ ಭಾರತ ಚಿತ್ರರಂಗದ ಮೇರುನಟಿ ಲೀಲಾವತಿ ಅವರು ನಿಧನರಾದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಾತಿ ಫೌಂಡೇಶನ್ ಹಾಗೂ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಅಗ್ರಹಾರ ವೃತ್ತದಲ್ಲಿ ಮೇಣದಬತ್ತಿ ಬೆಳಗಿ, ಹಿರಿಯ ನಟಿ ಲೀಲಾವತಿ ಅವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು.

ಈ ವೇಳೆ ನಿರ್ಮಾಪಕ, ಮಾಜಿ ಕಾರ್ಪೊರೇಟರ್ ಎಂ.ಡಿ.ಪಾರ್ಥಸಾರಥಿ ಮಾತನಾಡಿ, ಕನ್ನಡ, ತಮಿಳು, ತೆಲುಗು, ಮಲೆಯಾಳಂ ಸೇರಿದಂತೆ ವಿವಿಧ ಭಾಷೆಗಳ ಸುಮಾರು 600ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದ ಕನ್ನಡದ ಹೆಮ್ಮೆಯ ಕಲಾವಿದೆ ಲೀಲಾವತಿ ಅವರ ಅಗಲಿಕೆ ಅತೀವ ದುಃಖದ ಸಂಗತಿ. ಅವರ ಕಲಾಸೇವೆ ಜೊತೆಗೆ ಸಾಮಾಜಿಕ ಸೇವೆ ಜನರ ಮನಸ್ಸಿನಲ್ಲಿ ಹಸಿರಾಗಿರುತ್ತದೆ. ಈ ನೋವು ಸಹಿಸುವ ಶಕ್ತಿಯನ್ನು ಅವರ ಕುಟುಂಬದವರು ಹಾಗೂ ಅಭಿಮಾನಿಗಳಿಗೆ ದೇವರು ಕರುಣಿಸಲಿ ಎಂದು ಪ್ರಾರ್ಥಿಸಿದರು.

ಈ ವೇಳೆ ಮುಖಂಡರಾದ ನಜರ್ ಬಾದ್ ನಟರಾಜ್, ಜಿ.ರಾಘವೇಂದ್ರ, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವ ರಾಜ್ ಬಸಪ್ಪ ಹರೀಶ್ ನಾಯ್ಡು, ಮೈಲಾ. ವಿಜಯ್ ಕುಮಾರ್, ವರುಣಾ ಮಹಾದೇವ್, ಮರಟಿಕ್ಯಾತನಹಳ್ಳಿ ಮಂಜುನಾಥ್, ಜಯಪ್ಪ, ಆರಾಧ್ಯ, ರಘು, ಅನಂತ್ ರಂಗ, ಬಾಬು ಮತ್ತಿತರರಿದ್ದರು.

ಅಧಿಕ ಹಣ ಸಂಪಾದನೆ ಆಮಿಷ; ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚನೆ

ಮೈಸೂರು, ಡಿ. 8– ಹಣ ಹೂಡಿಕೆ ಮಾಡಿ ಟಾಸ್ಕ್ ಕಂಪ್ಲೀಟ್ ಮಾಡಿದರೆ ದುಪ್ಪಟ್ಟು ಹಣ ಬರುತ್ತದೆ ಎಂದು ನಂಬಿಸಿ ಮೈಸೂರಿನ ನಾಲ್ವರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ.

ಮೈಸೂರಿನ ಕೆ.ಆರ್. ಮೊಹಲ್ಲಾ ನಿವಾಸಿ ಎಂ.ಸಿ. ಸುನೀಲ್‌ಕುಮಾರ್ (33), ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವ ಆಸಕ್ತಿ ಹೊಂದಿದವರಾಗಿದ್ದು, ಇವರು ಗೂಗಲ್‌ನಲ್ಲಿ ಸರ್ಚ್ ಮಾಡಿ ARTISAN ಎಂಬ ವಾಟ್ಸಾಪ್ ಲಿಂಕ್ ಅನ್ನು ಕ್ಲಿಕ್ ಮಾಡುವ ಮೂಲಕ ವಾಟ್ಸಾಪ್ ಗ್ರೂಪ್‌ವೊಂದಕ್ಕೆ ಸೇರಿಕೊಂಡಿದ್ದಾರೆ.

ಈ ಗ್ರೂಪ್ ಮೂಲಕ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುತ್ತದೆ ಎಂದು ವಂಚಕರು ತಿಳಿಸಿದ ಮೇರೆಗೆ ಅವರು ಹಂತ ಹಂತವಾಗಿ 2.90 ಲಕ್ಷ ರೂ.ಗಳನ್ನು ಹೂಡಿಕೆ ಮಾಡಿದ್ದು, ನಂತರ ವೆಬ್‌ಸೈಟ್ ಮೂಲಕ ಹಣ ಡ್ರಾ ಮಾಡಲು ಪ್ರಯತ್ನಿಸಿದಾಗ ಸಾಧ್ಯವಾಗದ ಕಾರಣ ತಾನು ಸಂಪರ್ಕದಲ್ಲಿದ್ದ 8587805543 ಸಂಖ್ಯೆಗೆ ಕರೆ ಮಾಡಿದರೆ, ಔಟ್ ಆಫ್ ಕವರೇಜ್ ಏರಿಯಾ ಎಂದು ಬಂದಿದೆ. ತನ್ನ ಹಣ ಡ್ರಾ ಮಾಡಿಕೊಳ್ಳುವ ಬಗ್ಗೆ ಮೆಸೇಜ್ ರವಾನಿಸಲು ಉತ್ತರ ನೀಡದೆ ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಎನ್‌ಆರ್ ಮೊಹಲ್ಲಾ ನಿವಾಸಿಯಾಗಿರುವ ಗೃಹಿಣಿ ಹೆಚ್.ಪಿ. ರಚನಾ(28) ಅವರನ್ನು 9756823439 ಮತ್ತು 9105827067 ಸಂಖ್ಯೆಗಳಿಂದ ಸಂಪರ್ಕಿಸಿದ ವಂಚಕರು, ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುತ್ತದೆ ಎಂದು ನಂಬಿಸಿ 3,51,128 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಕುವೆಂಪು ನಗರ 'ಕೆ' ಬ್ಲಾಕ್ ನಿವಾಸಿ ಬಿ.ಕೆ. ಮಹದೇವಕುಮಾರ್(29) ಎಂಬುವರನ್ನು 8258836964 ಸಂಖ್ಯೆಯಿಂದ ವಾಟ್ಸಾಪ್ ಮೂಲಕ ಸಂಪರ್ಕಿಸಿದ ವಂಚಕರು ಫ್ಲೈಟ್ ನೆಟ್‌ವರ್ಕ್ ವೆಬ್‌ಸೈಟ್‌ನಲ್ಲಿ ಪ್ರತಿದಿನ 30 ಟಿಕೆಟ್ ಬುಕ್ ಮಾಡಿ 3 ರೌಂಡ್ ಕಂಪ್ಲೀಟ್ ಮಾಡಿದರೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿದ್ದಾರೆ. ಮೊದಲಿಗೆ ಅವರ ಖಾತೆಗೆ ಸಾವಿರ ರೂ. ಕಮಿಷನ್ ಜಮೆ ಮಾಡಿದ್ದು, ನಂತರ ಹಂತ ಹಂತವಾಗಿ 2,05,787 ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ.

ಬೆದರಿಸಿ ಸುಲಿಗೆ: ವಿಜಯನಗರ ಒಂದನೇ ಹಂತದ ನಿವಾಸಿಯಾಗಿರುವ ಸಾಫ್ಟ್‌ವೇರ್ ಇಂಜಿನಿಯರ್ ಎಂ.ಕೆ. ನವರತನ್(43) ಅವರಿಗೆ ಸ್ಕೈಪ್‌ನಿಂದ ಕರೆ ಮಾಡಿ ಆಧಾರ್ ಸಂಖ್ಯೆ ಪಡೆದುಕೊಂಡು ನಂತರ ಹೆದರಿಸಿ ಅವರಿಂದ 81,500 ರೂ. ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ಈ ಎಲ್ಲಾ ಪ್ರಕರಣಗಳೂ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಶಿರಸಿ ಬಳಿ ಕಾರು–ಬಸ್ ಮುಖಾಮುಖಿ ಡಿಕ್ಕಿ; ಭೀಕರ ಅಪಘಾತದಲ್ಲಿ ಐವರು ಸಾವು

ಶಿರಸಿ: ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬಂಡಲ ಗ್ರಾಮದಲ್ಲಿ ಶುಕ್ರವಾರ ಕಾರು ಮತ್ತು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿದಂತೆ ಐವರು ಮೃತಪಟ್ಟಿದ್ದಾರೆ.

ಇಂದು ಬೆಳಗ್ಗೆ ಹುಬ್ಬಳ್ಳಿಯಿಂದ ಭಟ್ಕಳಕ್ಕೆ ತೆರಳುತ್ತಿದ್ದ ಕೆಎಸ್‌ಆರ್ ಟಿಸಿ ಬಸ್, ಕುಮಟಾದಿಂದ ಶಿರಸಿಗೆ ಬರುತ್ತಿದ್ದ ಮಾರುತಿ ಸ್ವಿಫ್ಟ್ ಕಾರಿಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಕಾರಿನಲ್ಲಿದ್ದ ನಾಲ್ವರು ಸ್ಥಳದಲ್ಲೇ ಮೃತಪಟ್ಟರೆ, ಮತ್ತೊಬ್ಬರು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗೆ ಸಾಗಿಸುವ ವೇಳೆ ಮೃತಪಟ್ಟಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತರು ಶಿರಸಿಯ ರಾಘವೇಂದ್ರ ಕಲ್ಯಾಣ ಮಂಟಪದ ಮದುವೆಗೆ ಆಗಮಿಸುತ್ತಿದ್ದ ಮಂಗಳೂರಿನ ರಾಮಕೃಷ್ಣ ಬಾಬುರಾವ್ (71), ವಿದ್ಯಾಲಕ್ಷ್ಮೀ ರಾಮಕೃಷ್ಣ(65), ಪುಷ್ಪಾ ಮೋಹನ ರಾವ್ (62), ಸುಹಾಸ್ ಗಣೇಶ ರಾವ್ (30), ಹಾಗೂ ಚೆನ್ನೈನ ಅರವಿಂದ(30) ಎಂದು ಗುರುತಿಸಲಾಗಿದೆ.

ಕಾರಿನಲ್ಲಿದ್ದ ನಾಲ್ವರು ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದರೆ. ಮತ್ತೊಬ್ಬರು ಅವರ ಸ್ನೇಹಿತರು ಎನ್ನಲಾಗಿದೆ. ಅಪಘಾತದ ತೀವ್ರತೆಗೆ ಸ್ವಿಫ್ಟ್ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಬಸ್ಸಿನ ಮುಂಬಾಗ ಸಂಪೂರ್ಣ ಜಖಂಗೊಂಡಿದೆ.

ಹೆಣ್ಣು ಭ್ರೂಣ ಹತ್ಯೆ ತಡೆಗಾಗಿ ಜಾಗೃತಿ ಜಾಥಾ



ಪಾಂಡವಪುರ, ಡಿ.8– ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾಲೂಕು ಆಡಳಿತ, ಆರೋಗ್ಯ ಇಲಾಖೆ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಪಟ್ಟಣದಲ್ಲಿ ಶುಕ್ರವಾರ ಜಾಗೃತಿ ಜಾಥಾ ನಡೆಸಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಪಟ್ಟಣದ ಮಿನಿ ವಿಧಾನಸೌಧದಿಂದ ಹೊರಟ ಜಾಗೃತಿ ಜಾಥಾಕ್ಕೆ ತಹಸೀಲ್ದಾರ್ ಶ್ರೇಯಸ್, ಡಾ.ಸಿ.ಎ.ಅರವಿಂದ್ ಚಾಲನೆ ನೀಡಿದರು. ಅಲ್ಲಿಂದ ಹೊರಟ ಜಾಗೃತಿ ಜಾಥಾ ಪಟ್ಟಣದ ವಿವಿಧ ರಸ್ತೆಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಭ್ರೂಣಹತ್ಯೆ ಕುರಿತು ಅರಿವು ಮೂಡಿಸಿತು.

ತಹಸೀಲ್ದಾರ್ ಶ್ರೇಯಸ್ ಮಾತನಾಡಿ, ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಎರಡೂ ಸಹ ಕಾನೂನು ಬಾಹಿರವಾಗಿದ್ದು, ಇಂತಹ ಕೃತ್ಯವೆಸಗುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಜಿಲ್ಲೆಯಲ್ಲಿ ಹೆಚ್ಚಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಕಂಡು ಬರುತ್ತಿದ್ದು, ಅವುಗಳನ್ನು ತಡೆಯಲು ಜಿಲ್ಲಾಡಳಿತ ಕ್ರಮ ವಹಿಸಿದೆ ಎಂದರು.

ಈಗಾಗಲೇ ಜಿಲ್ಲಾಧಿಕಾರಿಗಳು ಭ್ರೂಣ ಹತ್ಯೆ ತಡೆಗೆ ತಂಡ ರಚಿಸಿದ್ದು, ಸ್ಕ್ಯಾನಿಂಗ್ ಸೆಂಟರ್, ಆಸ್ಪತ್ರೆ ಹಾಗೂ ಮೆಡಿಕಲ್ ಸ್ಟೋರ್‌ಗಳಿಗೆ ಆ ತಂಡಗಳು ಭೇಟಿ ಕೊಟ್ಟು ಪರಿಶೀಲನೆ ನಡೆಸುತ್ತಿದೆ. ಭ್ರೂಣಹತ್ಯೆ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಜಾಗೃತಿ ಜಾಥಾ ನಡೆಸಿ ಜನರಿಗೆ ಅರಿವು ಮೂಡಿಸಲಾಗುತ್ತಿದೆ. ಟಾಸ್ಕ್‌ಫೋರ್ಸ್ ಸಭೆ ನಡೆಸಿ ಮುಂದಿನ ದಿನಗಳಲ್ಲಿ ಗ್ರಾಪಂ ಮಟ್ಟದಲ್ಲೂ ಜಾಗೃತಿ ಸಭೆ ನಡೆಸಲು ಸೂಚಿಸಲಾಗುವುದು ಎಂದರು.

ವೈದ್ಯಾಧಿಕಾರಿ ಡಾ.ಸಿ.ಎ.ಅರವಿಂದ್ ಮಾತನಾಡಿ, ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳನ್ನು ತಡೆಯಲು ಕ್ರಮ ವಹಿಸಲಾಗುತ್ತಿದ್ದು, ಆಸ್ಪತ್ರೆ, ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅಧಿಕಾರಿಗಳು ಭೇಟಿ ಕೊಟ್ಟು ಪರಿಶೀಲನೆ ನಡೆಸುತ್ತಿದ್ದಾರೆ. ಸಾರ್ವಜನಿಕರು ಜಾಗೃತರಾಗಬೇಕು. ಯಾವುದೇ ಕಾರಣಕ್ಕೂ ಭ್ರೂಣ ಹತ್ಯೆಯಂತಹ ಕೃತ್ಯಗಳಿಗೆ ಮುಂದಾಗಬಾರದು ಎಂದು ಸಲಹೆ ನೀಡಿದರು.

ತಾಪಂ ಇಓ ಲೋಕೇಶ್‌ಮೂರ್ತಿ, ಟಿಎಚ್‌ಓ ಧನಂಜಯ್, ಪಿಎಸ್‌ಐ ಉಮೇಶ್, ಶಿಶು ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ, ಹಿಂದುಳಿದ ವರ್ಗಗಳ ಅಧಿಕಾರಿ ಸತೀಶ್, ಆರೋಗ್ಯ ಹಿರಿಯ ಮೇಲ್ವಿಚಾರಕ ಪುಟ್ಟಸ್ವಾಮಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ಇಳಿ ವಯಸ್ಸಲ್ಲೂ ಕಾವೇರಿಗಾಗಿ ಧ್ವನಿ ಎತ್ತಿದ ಹಿರಿಯ ನಟಿ ಲೀಲಾವತಿ



ಮಂಡ್ಯ, ಡಿ.8– ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ವಿಧಿವಶರಾಗಿದ್ದಾರೆ. ಆದರೆ ಅವರಿಗೆ ಸಾಮಾಜಿಕ ಸಮಸ್ಯೆಗಳು, ರೈತ ಸಮಸ್ಯೆಗಳ ಬಗ್ಗೆ ಇದ್ದ ಕಾಳಜಿಗೆ ಪ್ರಸ್ತುತ ನಡೆಯುತ್ತಿರುವ ಕಾವೇರಿ ಹೋರಾಟ ಸಾಕ್ಷಿಯಾಗಿದ್ದು, ಇಳಿವಯಸ್ಸಿನಲ್ಲಿ ಕಾವೇರಿ ಹೋರಾಟದಲ್ಲಿ ಪಾಲ್ಗೊಂಡು ಇಡೀ ಕನ್ನಡ ಚಿತ್ರರಂಗಕ್ಕೆ ಮಾದರಿಯಾಗಿದ್ದರು. ತಮಿಳುನಾಡಿಗೆ ನಿತ್ಯ ಕಾವೇರಿ ನೀರು ಬಿಡುಗಡೆ ಖಂಡಿಸಿ ಕಳೆದ ಮೂರ್‍ನಾಲ್ಕು ತಿಂಗಳಿನಿಂದ ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಕಾವೇರಿ ಹಿತರಕ್ಷಣಾ ಸಮಿತಿ ನಿರಂತರ ಧರಣಿ ನಡೆಸುತ್ತಿದೆ. ಕಳೆದ ಸೆಪ್ಟೆಂಬರ್ 25ರಂದು ನಡೆದ ಹೋರಾಟದಲ್ಲಿ ಹಿರಿಯ ನಟಿ ಲೀಲಾವತಿ ಅವರು ಪುತ್ರ ವಿನೋದ್‌ರಾಜ್ ಜೊತೆ ಮಂಡ್ಯಕ್ಕೆ ಬಂದು ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಹೋರಾಟದಲ್ಲಿ ಪಾಲ್ಗೊಂಡು ಪ್ರತಿಭಟನಾಕಾರರಿಗೆ ಆತ್ಮಸ್ಥೈರ್ಯ ತುಂಬಿದ್ದ ಅವರು ಕಾವೇರಿಗಾಗಿ ನಮ್ಮ ಹೋರಾಟ ನಿರಂತರ ಎಂದಿದ್ದರು. ದೊಡ್ಡ ದೊಡ್ಡ ಸ್ಟಾರ್ ನಟರು ಸೇರಿದಂತೆ ಸಿನಿ ಕಲಾವಿದರು ಹೋರಾಟದಲ್ಲಿ ಪಾಲ್ಗೊಳ್ಳದಿದ್ದಾಗ ಚಿತ್ರನಟರ ಬಗ್ಗೆ ಅಸಮಾಧಾನಗೊಂಡಿದ್ದ ಹೋರಾಟಗಾರರು ಇಳಿವಯಸ್ಸಿನಲ್ಲಿ ನಟಿ ಲೀಲಾವತಿ ಆಗಮಿಸಿದ್ದಕ್ಕೆ ಆಶ್ಚರ್ಯಚಕಿತರಾಗಿದ್ದರು. ವಯೋಸಹಜ ಖಾಯಿಲೆಯಿಂದ ಸರಿಯಾಗಿ ಓಡಾಡಲೂ ಆಗದ ಪರಿಸ್ಥಿತಿ ಇದ್ದರೂ ಸಹ ಲೀಲಾವತಿ ಅವರು ಕಾವೇರಿ ಹೋರಾಟದಲ್ಲಿ ಪಾಲ್ಗೊಂಡಿದ್ದು, ಇಂದಿನ ಚಿತ್ರನಟರಿಗೆ ಮಾದರಿಯಾಗಿದೆ. ಜೊತೆಗೆ ಸೆಪ್ಟೆಂಬರ್ 25ರಂದು ಲೀಲಾವತಿ ಅವರು ಹೋರಾಟದಲ್ಲಿ ಪಾಲ್ಗೊಂಡಿದ್ದೇ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡ ಕಡೇ ಕಾರ್ಯಕ್ರಮವಾಗಿತ್ತು.

ಈ ಬಗ್ಗೆ ಮಾತನಾಡಿರುವ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ, ಲೀಲಾವತಿ ಅವರ ನಿಧನ ನಿಜಕ್ಕೂ ಬೇಸರದ ಸಂಗತಿಯಾಗಿದ್ದು, ಅವರ ಕಡೆಯ ದಿನಗಳಲ್ಲೂ ಕನ್ನಡ, ಕಾವೇರಿ ಪರ ಅವರಿಗಿದ್ದ ಕಾಳಜಿ ನಿಜಕ್ಕೂ ನಮಗೆ ಸ್ಫೂರ್ತಿ. ಮುಪ್ಪಿನಲ್ಲೂ ಅವರ ಹೋರಾಟದ ಉತ್ಸಾಹ ನಿಜಕ್ಕೂ ಶ್ಲಾಘನೀಯವಾಗಿದ್ದು, ಕುಟುಂಬ ಸಮೇತ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಅವರ ಸಮಾಜಮುಖಿ ಕಾರ್ಯ ನಮಗೆ ಮಾದರಿಯಾಗಿದೆ. ಕಾವೇರಿಗಾಗಿ ಹೋರಾಟದಲ್ಲಿ ಪಾಲ್ಗೊಂಡು ನಮಗೆ ಶಕ್ತಿ ತುಂಬಿದ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಿದ್ದಾರೆ.

ಚಲುವರಾಯಸ್ವಾಮಿ, ಸುಮಲತಾ ಸಂತಾಪ: ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಿರಿಯ ನಟಿ ಲೀಲಾವತಿ ನಿಧನಕ್ಕೆ ಸಂತಾಪ ಸೂಚಿಸಿದ್ದು, 600ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ ಬಹುಭಾಷಾ ತಾರೆ ಲೀಲಾವತಿ ಅವರ ಅಗಲಿಕೆ ತೀವ್ರ ದುಃಖ ತಂದಿದೆ. ತಮ್ಮ ಅಮೋಘ, ಭಾವನಾತ್ಮಕ ನಟನೆ ಮೂಲಕ ಜನಮೆಚ್ಚುಗೆ ಪಡೆಯುವುದಲ್ಲದೆ ಸಾಮಾಜಿಕ ಕಾರ್ಯಗಳ ಮೂಲಕವೂ ಮಾದರಿಯಾಗಿ ಬದುಕಿದ ಹಿರಿಯ ಕಲಾವಿದೆ ನಿಧನಕ್ಕೆ ತೀವ್ರ ಸಂತಾಪಗಳು. ಅವರ ಅಗಲಿಕೆ ಭಾರತೀಯ ಚಿತ್ರರಂಗಕ್ಕೆ ದೊಡ್ಡ ನಷ್ಟ ಅವರ ಅಭಿಮಾನಿಗಳು ಹಾಗೂ ಕುಟುಂಬಕ್ಕೆ ಭಗವಂತ ದುಃಖ ಬರಿಸುವ ಶಕ್ತಿ ನೀಡಲಿ. ಲೀಲಾವತಿ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಪ್ರಾರ್ಥಿಸುವೆ ಎಂದು ಶೋಕ ವ್ಯಕ್ತ ಪಡಿಸಿದ್ದಾರೆ. ಅಲ್ಲದೇ ಸಂಸದರು ಹಾಗೂ ಹಿರಿಯ ನಟಿ ಸುಮಲತಾ ಸೇರಿದಂತೆ ಜಿಲ್ಲೆಯ ವಿವಿಧ ರಾಜಕೀಯ ಗಣ್ಯರು ಸಹ ಸಂತಾಪ ವ್ಯಕ್ತಪಡಿಸಿದ್ದಾರೆ.

ಉತ್ತಮ ಆರೋಗ್ಯಕ್ಕೆ ಸಾಂಪ್ರದಾಯಿಕ ಆಹಾರ ಪದ್ಧತಿ ರೂಢಿಸಿಕೊಳ್ಳಿ

ಡಿಹೆಚ್‌ಓ ಡಾ.ಮೋಹನ್ ಸಲಹೆ



ನಾಗಮಂಗಲ, ಡಿ.8– ಆಧುನಿಕ ಜೀವನಶೈಲಿ ಮತ್ತು ಇಂದಿನ ಆಹಾರ ಪದ್ಧತಿಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಜನ ಸಾಮಾನ್ಯರಲ್ಲಿ ಅಧಿಕ ರಕ್ತದೊತ್ತಡ ಹಾಗೂ ಮಧುಮೇಹದಂತಹ ಕಾಯಿಲೆ ಹೆಚ್ಚಾಗಿ ಕಂಡು ಬರುತ್ತಿದ್ದು ಇದಕ್ಕೆ ಪೂರಕವಾಗಿ ಸಾಂಪ್ರದಾಯಿಕ ಆಹಾರ ಪದ್ಧತಿಯನ್ನು ರೂಢಿಸಿಕೊಂಡಾಗ ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ನಿಯಂತ್ರಿಸಲು ಸಾಧ್ಯ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್ ಸಲಹೆ ನೀಡಿದರು.

ತಾಲೂಕಿನ ಬ್ರಹ್ಮದೇವರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಗ್ರಾಮ ಪಂಚಾಯಿತಿ ಸಹಭಾಗಿತ್ವದಲ್ಲಿ ಶುಕ್ರವಾರ ಆಯೋಜಿಸಿದ್ದ ಅಧಿಕ ರಕ್ತದೊತ್ತಡ ಮತ್ತು ಮಧುಮೇಹದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಹಳ್ಳಿ ಜನರಲ್ಲಿ ಬಿಪಿ ಮತ್ತು ಸಕ್ಕರೆ ಕಾಯಿಲೆ ಇರುವುದು ಅವರಿಗೆ ಗೊತ್ತಿರುವುದಿಲ್ಲ. ಅದನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯುವ ಸಲುವಾಗಿ ಇಂತಹ ಶಿಬಿರಗಳ ಮೂಲಕ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ ಎಂದರು.

ಪಿಜಿಡಿಎಚ್‌ಪಿಇ ಕೋರ್ಸ್‌ನ ಪ್ರಾಂಶುಪಾಲ ಡಾ.ಶಶಿಕಾಂತರಾವ್ ಮಾತನಾಡಿ, ಗ್ರಾಮದ ಪ್ರತಿಯೊಬ್ಬರಿಗೂ ಆರೋಗ್ಯ ತಪಾಸಣೆ ನಡೆಸಿದ ಬಳಿಕ ಅಧಿಕ ರಕ್ತದೊತ್ತಡ ಅಥವಾ ಮಧುಮೇಹ ದೃಢಪಟ್ಟವರಿಗೆ ಸೂಕ್ತ ಚಿಕಿತ್ಸೆ ಲಭ್ಯವಾಗುವಂತೆ ವೈದ್ಯರು ಅಗತ್ಯ ಕ್ರಮವಹಿಸಬೇಕು. ಗ್ರಾಮಸ್ಥರೆಲ್ಲರೂ ಈ ಶಿಬಿರದ ಪ್ರಯೋಜನವನ್ನು ಸದ್ಬಳಕೆ ಮಾಡಿಕೊಂಡು ಆರೋಗ್ಯವಂತ ಜೀವನ ನಡೆಸಬೇಕು ಎಂದು ಹೇಳಿದರು.

ಗ್ರಾಪಂ ಸದಸ್ಯ ರವಿಕುಮಾರ್ ಮಾತನಾಡಿ, ಹಿಂದಿನ ದಿನಗಳಲ್ಲಿ ಕರುಳುಬೇನೆ, ಮಲೇರಿಯಾ, ಟೈಫಾಯಿಡ್, ಜಾಂಡೀಸ್ ನಂತಹ ಸಾಂಕ್ರಾಮಿಕ ಖಾಯಿಲೆಗಳು ಹೆಚ್ಚಾಗಿದ್ದವು. ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಂತಹ ಅಸಾಂಕ್ರಾಮಿಕ ಖಾಯಿಲೆಗಳು ಕಡಿಮೆ ಇದ್ದವು. ಆದರೆ ಇತ್ತೀಚಿನ ದಿನಗಳಲ್ಲಿನ ಜೀವನಶೈಲಿಯಿಂದ ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ಕಾಯಿಲೆಗಳು ಜನರನ್ನು ಕಾಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಶಿಬಿರದಲ್ಲಿ 150ಕ್ಕೂ ಹೆಚ್ಚು ಜನರಿಗೆ ತಪಾಸಣೆ ನಡೆಸಿ ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ದೃಢಪಟ್ಟವರಿಗೆ ಸೂಕ್ತ ಚಿಕಿತ್ಸೆಯ ಸಲಹೆ ನೀಡಲಾಯಿತು.

ಬ್ರಹ್ಮದೇವರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವೆಂಕಟೇಶ್, ಪಿಡಿಓ ಶಿವಲಿಂಗೇಗೌಡ, ಉಪಾಧ್ಯಕ್ಷೆ ಸವಿತಾ, ಸದಸ್ಯ ರವಿ, ಪಿಜಿಡಿಎಚ್‌ಪಿಇ ಕೋರ್ಸ್‌ನ ಉಪನ್ಯಾಸಕ ಡಾ.ಮಂಜುನಾಥ್ ಉಪಸ್ಥಿತರಿದ್ದರು.

ಟ್ರಾಕ್ಟರ್‌ನಿಂದ ಬಿದ್ದು ವ್ಯಕ್ತಿ ಸಾವು

ಶ್ರೀರಂಗಪಟ್ಟಣ, ಡಿ.8– ಚಲಿಸುತ್ತಿದ್ದ ಟ್ರಾಕ್ಟರ್‌ನಿಂದ ಬಿದ್ದು ಕಾರ್ಮಿಕ ಮೃತಪಟ್ಟಿರುವ ಘಟನೆ ಪಟ್ಟಣದ ಮೈಸೂರು–ಬೆಂಗಳೂರು ಹೆದ್ದಾರಿಯ ಶ್ರೀಸಾಯಿ ಅನಾಥಶ್ರಮದ ಬಳಿ ಸಂಭವಿಸಿದೆ.



ಪಟ್ಟಣದ ಗೋಸೇಗೌಡರ ಬೀದಿಯ ನಿವಾಸಿ ಶಿವರಾಮು (52) ಮೃತಪಟ್ಟ ಕಾರ್ಮಿಕನಾಗಿದ್ದು, ಈತ ಕೆಲಸ ಮುಗಿಸಿ ಟ್ರಾಕ್ಟರ್‌ನಲ್ಲಿ ಪಶ್ಚಿಮವಾಹಿನಿಯಿಂದ ಮನೆಗೆ ವಾಪಸಾಗುತ್ತಿದ್ದ ವೇಳೆ ಅಡ್ಡ ಬಂದ ಬೈಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಬ್ರೇಕ್ ಹಾಕಿದಾಗ ನಿಯಂತ್ರಣ ತಪ್ಪಿ ಟ್ರಾಕ್ಟರ್‌ನಿಂದ ಕೆಳಗೆ ಬಿದ್ದಿದ್ದಾನೆ. ಈ ವೇಳೆ ಈತನ ಮೇಲೆ ಟ್ರಾಕ್ಟರ್ ಹರಿದ ಪರಿಣಾಮ ಶಿವರಾಮು ಮೃತಪಟ್ಟಿದ್ದಾನೆ. ಈ ಸಂಬಂಧ ಶ್ರೀರಂಗಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಷ್ಟ್ರಮಟ್ಟದ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಶ್ರೀರಂಗಪಟ್ಟಣ, ಡಿ.8– ಪಟ್ಟಣದ ಶ್ರೀರಂಗನಾಥಸ್ವಾಮಿ ದೇಗುಲದ ಆವರಣದಲ್ಲಿ ಸ್ಟಾರ್ಸ್ ಕ್ರಿಕೆಟರ್ಸ್ ವತಿಯಿಂದ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಹೊನಲು ಬೆಳಕಿನ 'ಕಾವೇರಿ ಕಪ್ 2023' ಕ್ರಿಕೆಟ್ ಪಂದ್ಯಾವಳಿಗೆ ತಹಸೀಲ್ದಾರ್ ಪರಶುರಾಮ್ ಬ್ಯಾಟ್ ಬೀಸುವ ಮೂಲಕ ಸತ್ತಿಗೇರಿ ಚಾಲನೆ ನೀಡಿ ಆಟಗಾರರಿಗೆ ಶುಭ ಹಾರೈಸಿದರು.

ನಂತರ ಮಾತನಾಡಿದ ಅವರು, ಕ್ರಿಕೆಟ್ ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆದಿದೆ. ಶ್ರೀರಂಗ ಪಟ್ಟಣದಲ್ಲಿ ರಾಷ್ಟ್ರ ಮಟ್ಟದ ಟೂರ್ನಿ ಆಯೋಜಿಸಿರುವುದು ಸಂತಸ ತಂದಿದೆ. ಕ್ರೀಡಾಪಟುಗಳು ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾ ಸ್ಫೂರ್ತಿ ಮೆರೆಯಬೇಕು ಎಂದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯುವ ಜನತೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ. ಕ್ರೀಡೆಗಳು ಹೆಚ್ಚು ಹೆಚ್ಚು ಆಯೋಜನೆಯಾಗುವ ಮೂಲಕ ಹೆಚ್ಚು ಕ್ರೀಡಾಪಟುಗಳನ್ನು ಸೃಷ್ಟಿಸಬೇಕೆಂದು ಕಿವಿ ಮಾತು ಹೇಳಿದರು.

ಪುರಸಭೆ ಸದಸ್ಯ ಎಸ್.ಪ್ರಕಾಶ್ ತಮ್ಮ ಹಿಂದಿನ ಕ್ರೀಡಾ ಚಟುವಟಿಕೆಗಳ ದಿನಗಳನ್ನು ಸ್ಮರಿಸಿಕೊಂಡರು. ಹಿರಿಯ ಕ್ರೀಡಾಪಟು ಎಸ್.ಜಯಸಿಂಹ ಮಾತನಾಡಿ, ಟೂರ್ನಿ ಆಯೋಜನೆ ಹಾಗೂ ಯಶಸ್ಸಿಗೆ ಕಾರಣರಾದ ಆಟಗಾರರಿಗೆ ಅಭಿನಂದನೆ ಸಲ್ಲಿಸಿದರು. ಮತ್ತೊರ್ವ ಹಿರಿಯ ಕ್ರೀಡಾ ಪಟು ಎಸ್.ಜೆ.ವೆಂಕಟರಾಮು ಉಪಸ್ಥಿತರಿದ್ದು, ಆಟಗಾರರಿಗೆ ಶುಭ ಹಾರೈಸಿದರು. ಆಯೋಜಕರಲ್ಲಿ ಪ್ರಮುಖರಾದ ಸುಬ್ರಹ್ಮಣ್ಯ, ಎಸ್.ಎನ್. ಬಾಲರಾಜ್.ಬಿ.ಕೆ, ಕೊಕೋ ಕೋಲಾ ಪಾನೀಯ ಸಂಸ್ಥೆ ಅಬ್ರಹಾಂ ಸೇರಿದಂತೆ ಇತರರಿದ್ದರು. ಡಿ.8 ರಿಂದ 10ರವರೆಗೆ ನಡೆಯುವ ಟೂರ್ನಿ ಯಲ್ಲಿ ಪಾಂಡವಪುರ, ಮೈಸೂರು, ನಂಜನಗೂಡು, ಮಂಗಳೂರು, ಉಡುಪಿ, ಬೆಂಗಳೂರು, ಚೆನ್ನೈ ಸೇರಿದಂತೆ 14 ತಂಡ ಗಳು ಭಾಗವಹಿಸಿದ್ದು, ಗೆಲುವಿಗಾಗಿ ಸೆಣಸಾಡುವ ಮೂಲಕ ಕ್ರೀಡಾ ಪ್ರೇಮಿಗಳಿಗೆ ರಸ ದೌತಣ ನೀಡಲಿವೆ. ಪ್ರಥಮ ಬಹುಮಾನ 3 ಲಕ್ಷ ರೂ. ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ 1.5 ಲಕ್ಷ ರೂ. ಹಾಗೂ ಆಕರ್ಷಕ ಟ್ರೋಫಿಯನ್ನು ವಿಜೇತ ತಂಡಗಳಿಗೆ ನೀಡಲಾಗುತ್ತಿದ್ದು, ಪಂದ್ಯಗಳು ಮೊದಲ ಹಂತದಲ್ಲಿ ಲೀಗ್ ಮಾದರಿಯಲ್ಲಿ ನಂತರ ನಾಕ್ ಔಟ್ ಮಾದರಿಯಲ್ಲಿ ನಡೆಯಲಿವೆ.

ಹಿರಿಯ ನಟಿ ಲೀಲಾವತಿ ಇನ್ನಿಲ್ಲ



ಒಂದನೇ ಪುಟದಿಂದ

ಸಂಸ್ಥೆಯಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದರು. ಸುಬ್ಬಯ್ಯ ನಾಯ್ಡು ಸಂಸ್ಥೆಯ 'ಭಕ್ತ ಪ್ರಹ್ಲಾದ' ನಾಟಕ ಅವರಿಗೆ ಪ್ರಾರಂಭದಲ್ಲಿ ಹೆಸರು ತಂದುಕೊಟ್ಟಿತು. ಪೌರಾಣಿಕ ನಾಟಕಗಳಲ್ಲಿ ಅಭಿನಯಿಸುತ್ತಿದ್ದ ಲೀಲಾವತಿ, ಪ್ರಾರಂಭಿಕ ಹಂತದಲ್ಲಿ ಸಖಿಯಾಗಿ ನಟಿಸುತ್ತಿದ್ದರು. 1949ರಲ್ಲಿ ಶಂಕರ್ ಸಿಂಗ್ ಅವರ 'ನಾಗಕನ್ನಿಕೆ' ಚಿತ್ರದಲ್ಲಿ ಸಖಿಯ ಪಾತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದರು. ಅವರು ನಾಯಕಿಯಾಗಿ ಅಭಿನಯಿಸಿದ ಮೊದಲ ಚಿತ್ರ 'ಮಾಂಗಲ್ಯ ಯೋಗ'. ವರನಟ ಡಾ. ರಾಜ್‌ಕುಮಾರ್ ಅವರೊಂದಿಗೆ ಲೀಲಾವತಿ ಅಭಿನಯಿಸಿದ ಪ್ರಥಮ ಚಿತ್ರ 'ರಣಧೀರ ಕಂಠೀರವ'. ರಾಣಿ ಹೊನ್ನಮ್ಮ ಚಿತ್ರದ ಯಶಸ್ಸಿನ ನಂತರ ರಾಜ್‌ಕುಮಾರ್ ಮತ್ತು ಲೀಲಾವತಿ ಜೋಡಿ ಜನಪ್ರಿಯವಾಯಿತು. ಆ ವೇಳೆ ಸಾಲು–ಸಾಲು ಚಿತ್ರಗಳಲ್ಲಿ ರಾಜ್‌ಕುಮಾರ್ ಅವರಿಗೆ ನಾಯಕಿಯಾಗಿ ಲೀಲಾವತಿ ಅಭಿನಯಿಸಿದ್ದರು. ಸಂತ ತುಕಾರಾಂ, ಕಣ್ತೆರೆದು ನೋಡು, ಕೈವಾರ ಮಹಾತ್ಮೆ, ಗಾಳಿ ಗೋಪುರ, ಕನ್ಯಾರತ್ನ, ಕುಲವಧು, ವೀರಕೇಸರಿ, ಮನ ಮೆಚ್ಚಿದ ಮಡದಿ, ಸಿಪಾಯಿ ರಾಮು, ಗೆಜ್ಜೆ ಪೂಜೆ ಸೇರಿದಂತೆ ಹಲವಾರು ಚಿತ್ರಗಳಲ್ಲಿ ಲೀಲಾವತಿಯವರು ಅದ್ಭುತವಾಗಿ ನಟಿಸುವ ಮೂಲಕ ಹೆಸರು ಗಳಿಸಿದ್ದರು. 70ರ ದಶಕದ ನಂತರ ಪೋಷಕ ನಟಿಯಾಗಿ ಕನ್ನಡ ಚಿತ್ರರಂಗದಲ್ಲಿ ಉಳಿದಿದ್ದ ಅವರು ಹಲವು ಚಿತ್ರಗಳಲ್ಲಿ ತಾಯಿ, ಅಜ್ಜಿ ಮುಂತಾದ ಪೋಷಕ ಪಾತ್ರಗಳಲ್ಲಿ ಮನಸೆಳೆದಿದ್ದರು. ಕನ್ನಡದಲ್ಲಿ 400 ಚಿತ್ರಗಳಲ್ಲಿ ಅಭಿನಯಿಸಿದ್ದ ಲೀಲಾವತಿಯವರು, ದಕ್ಷಿಣ ಭಾರತದ ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿ ಒಟ್ಟಾರೆ 600ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ.


ಲೀಲಾವತಿ ತಮ್ಮ ಏಕೈಕ ಪುತ್ರ ವಿನೋದ್ ರಾಜ್‌ನನ್ನು ಚಿತ್ರರಂಗದಲ್ಲಿ ಬೆಳೆಸಬೇಕೆಂಬ ಕನಸು ಹೊತ್ತಿದ್ದರು. ದ್ವಾರಕೀಶ್ ನಿರ್ಮಿಸಿದ 'ಡ್ಯಾನ್ಸ್ ರಾಜಾ ಡ್ಯಾನ್ಸ್' ಚಿತ್ರದಲ್ಲಿ ನಾಯಕ ನಟನಾಗಿ ವಿನೋದ್ ರಾಜ್ ಚಿತ್ರರಂಗ ಪ್ರವೇಶಿಸಿದರಾದರೂ, ಯಶಸ್ಸು ಕಾಣಲಿಲ್ಲ. ಲೀಲಾವತಿ ಅವರು ಸೋಲದೇವನಹಳ್ಳಿಯಲ್ಲಿ ಜಮೀನು ಖರೀದಿಸಿ ಕೃಷಿಯಲ್ಲಿ ತೊಡಗಿಸಿಕೊಂಡರು. ವಿನೋದ್ ರಾಜ್ ತನ್ನ ತಾಯಿಗೆ ಬೆನ್ನೆಲುಬಾಗಿ ನಿಂತಿದ್ದರು. ಗ್ರಾಮದ ಬಡ ಜನರ ಕಷ್ಟ–ಸುಖಗಳಿಗೆ ಲೀಲಾವತಿ ಮತ್ತು ವಿನೋದ್ ಸ್ಪಂದಿಸುತ್ತಿದ್ದರು. ಈ ಗ್ರಾಮದಲ್ಲಿ ಪಶು ಆಸ್ಪತ್ರೆ ಕಟ್ಟಬೇಕೆಂಬುದು ಲೀಲಾವತಿ ಅವರ ಆಸೆಯಾಗಿತ್ತು. ಕೆಲ ದಿನಗಳ ಹಿಂದೆಯಷ್ಟೇ ಲೀಲಾವತಿಯವರ ಕನಸಿನ ಆಸ್ಪತ್ರೆಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಉದ್ಘಾಟಿಸಿದ್ದರು. ತುಮಕೂರು ವಿವಿಯಿಂದ ಗೌರವ ಡಾಕ್ಟರೇಟ್ ಪಡೆದಿರುವ ಲೀಲಾವತಿ ಕನ್ನಡದ ಕಂದ ಚಿತ್ರದ ಅತ್ಯುತ್ತಮ ಪೋಷಕ ನಟಿಯಾಗಿ ಫಿಲಂ ಫೇರ್ ಪ್ರಶಸ್ತಿ, ಜೀವಮಾನ ಸಾಧನೆಗಾಗಿ ಡಾ. ರಾಜ್‌ಕುಮಾರ್ ಪ್ರಶಸ್ತಿ, ಕರ್ನಾಟಕ ಸರ್ಕಾರದಿಂದ ಗೆಜ್ಜೆ ಪೂಜೆ, ಸಿಪಾಯಿ ರಾಮು, ಡಾ. ಕೃಷ್ಣ ಮುಂತಾದ ಚಿತ್ರಗಳಿಗೆ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಅಮ್ಮ–ಮಗನ ಬಾಂಧವ್ಯ ವರ್ಣಿಸಲಸಾಧ್ಯ: ಶಿವಣ್ಣ





ಬೆಂಗಳೂರು: ಹಿರಿಯ ನಟಿ ಲೀಲಾವತಿ ನಿಧನಕ್ಕೆ ನಟ ಶಿವರಾಜ್‌ಕುಮಾರ್ ಅವರು ಸಂತಾಪ ಸೂಚಿಸಿದ್ದಾರೆ. ಲೀಲಾವತಿ ಅವರ ನಿಧನ ನಮ್ಮ ಚಿತ್ರರಂಗಕ್ಕೆ ದೊಡ್ಡ ನಷ್ಟ ಆಗಿದೆ. ಅಮ್ಮ ಮತ್ತು ಮಗನ ಬಾಂಧವ್ಯವೇ ಬೇರೆ ತರಹ ಇತ್ತು. ಕಳೆದ ವಾರ ಲೀಲಾವತಿ ಅಮ್ಮನವರನ್ನು ಮಾತನಾಡಿಸಿದೆ. ಅವರ ಆರೋಗ್ಯದ ಬಗ್ಗೆ ನಾವೆಲ್ಲಾ ಅವರ ಜೊತೆಗೆ ಇರುತ್ತೀವಿ ಎಂದು ವಿನೋದ್‌ಗೆ ಹೇಳಿದ್ದೆ. ಲೀಲಾವತಿ ಅಮ್ಮನನ್ನು ವಿನೋದ್ ತುಂಬಾ ಹಚ್ಚಿಕೊಂಡಿದ್ದರು. ಅವರಿಬ್ಬರ ಬಾಂಧವ್ಯವೇ ಬೇರೇ ತರಹ ಇತ್ತು. ಈಗ ಅದನ್ನೆಲ್ಲಾ ಯೋಚನೆ ಮಾಡಿದಾಗ ಬೇಜಾರಾಗುತ್ತದೆ. ವಿನೋದ್ ಹೇಗೆ ತೆಗೆದುಕೊಳ್ತಾರೋ ಅನ್ನಿಸುತ್ತಿದೆ. ವಿನೋದ್ ತಾಯಿನ ಕಳೆದುಕೊಂಡ ನೋವಿನಲ್ಲಿದ್ದಾರೆ. ಇದೆಲ್ಲಾ ಸರಿ ಹೋಗಲಿ ಮತ್ತೆ ವಿನೋದ್ ಅವರನ್ನು ಭೇಟಿ ಮಾಡುತ್ತೇವೆ ಎಂದು ಶಿವಣ್ಣ ತಿಳಿಸಿದ್ದಾರೆ.



ಸನ್ಮಾನ, ಅವಮಾನ ಎರಡೂ ಕಂಡವರು ಲೀಲಾವತಿ: ನಟಿ ಉಮಾಶ್ರೀ



ಬೆಂಗಳೂರು: ಲೀಲಾವತಿ ಅವರು ಸಣ್ಣ ವಯಸ್ಸಿನಲ್ಲೇ ಸಿನಿಮಾಗೆ ಬಂದವರು. ಆನಂತರ ದೊಡ್ಡ ರೀತಿಯಲ್ಲಿ ನಾಯಕಿ ನಟಿಯಾಗಿ ಬೆಳೆದರು. ಸಾಕಷ್ಟು ಸಿನಿಮಾಗಳನ್ನು ಕೊಟ್ಟವರು. ಅಂತಹ ಕಲಾವಿದರು ನಮ್ಮೊಂದಿಗೆ ಇದ್ದರು ಎನ್ನೋದೇ ಹೆಮ್ಮೆ ಅನಿಸುತ್ತಿದೆ ಎನ್ನುವುದು ನಟಿ ಉಮಾಶ್ರೀ ಮಾತು.

ಲೀಲಾವತಿ ಅವರದ್ದು ಮಾದರಿ ಜೀವನ. ಆ ತಾಯಿ ಸಾಕಷ್ಟು ಕಷ್ಟ ಪಟ್ಟಿದ್ಧಾರೆ. ಸನ್ಮಾನ, ಅವಮಾನ ಎರಡನ್ನೂ ಪಡೆದಿದ್ದಾರೆ. ತಾಯಿ ಮತ್ತು ಮಗನ ಬಾಂಧವ್ಯಕ್ಕೆ ಮಾದರಿ ಆದಂತಹ ಜೀವವದು. ಈಗ ತಾಯಿ ಮಗ ದೂರವಾಗಿದ್ದು ನೋವು ತಂದಿದೆ. ಅವರು ಇಲ್ಲ ಅನ್ನೋದು ನಂಬೋಕೆ ಆಗ್ತಿಲ್ಲ. ಮಹಿಳೆಯಾಗಿ ಸಮಾಜಕ್ಕೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ ಲೀಲಮ್ಮ. ಅವರ ಹಾಕಿಟ್ಟ ದಾರಿ ನಮಗೆಲ್ಲ ಮಾದರಿ ಯಾಗಬೇಕು ಎಂದಿದ್ದಾರೆ ನಟಿ, ಮಾಜಿ ಸಚಿವೆ ಉಮಾಶ್ರೀ.

ಲೀಲಾವತಿಯವರ ನಿಧನಕ್ಕೆ ಪ್ರಧಾನಿ ಮೋದಿ, ಸಿಎಂ ಸಿದ್ದರಾಮಯ್ಯ ಇತರರು ಸಂತಾಪ






ಬೆಂಗಳೂರು, ಡಿ.8– ಹಿರಿಯ ನಟಿ ಲೀಲಾವತಿ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

'ಕನ್ನಡ ಚಿತ್ರರಂಗದ ಹೆಸರಾಂತ ನಟಿ ಲೀಲಾವತಿ ಅವರ ನಿಧನದ ಸುದ್ದಿ ಕೇಳಿ ದುಃಖವಾಯಿತು. ಸಿನಿಮಾದ ನೈಜ ಪ್ರತೀಕವಾದ ಅವರು ಹಲವಾರು ಚಲನಚಿತ್ರಗಳಲ್ಲಿ ತಮ್ಮ ಬಹುಮುಖ ನಟನೆಯೊಂದಿಗೆ ಬೆಳ್ಳಿ ಪರದೆಯನ್ನು ಅಲಂಕರಿಸಿದವರು. ಅವರ ವೈವಿಧ್ಯಮಯ ಪಾತ್ರಗಳು ಮತ್ತು ಅದ್ಭುತ ಪ್ರತಿಭೆಯನ್ನು ಸದಾ ಸ್ಮರಿಸಲಾಗುತ್ತದೆ ಮತ್ತು ಪ್ರಶಂಸಿಸಲಾಗುತ್ತದೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ನನ್ನ ಸಂತಾಪಗಳು. ಓಂ ಶಾಂತಿ' ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

'ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ಅವರ ಅಗಲಿಕೆಯ ಸುದ್ದಿ ನೋವುಂಟು ಮಾಡಿದೆ. ಕಳೆದ ವಾರವಷ್ಟೇ ಅವರು ಅನಾರೋಗ್ಯಕ್ಕೀಡಾದ ವಿಚಾರ ತಿಳಿದು ಅವರ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಪುತ್ರ ವಿನೋದ್ ರಾಜ್ ಅವರೊಂದಿಗೆ ಮಾತನಾಡಿದ್ದೆ. ಹಲವು ದಶಕಗಳ ಕಾಲ ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದ ಲೀಲಾವತಿ ಅವರು ಗುಣಮುಖರಾಗಿ ಇನ್ನಷ್ಟು ಕಾಲ ನಮ್ಮ ನಡುವೆ ಇರುತ್ತಾರೆಂಬ ನನ್ನ ನಂಬಿಕೆ ಹುಸಿಯಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ವರ್ಗಕ್ಕೆ ಈ ದುಃಖವನ್ನು ಭರಿಸುವ ಶಕ್ತಿ ಸಿಗಲಿ' ಎಂದು ಪ್ರಾರ್ಥಿಸುತ್ತೇನೆ ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂತಾಪ ವ್ಯಕ್ತಪಡಿಸಿದ್ದಾರೆ.





ಅತ್ಯಂತ ಜನಪ್ರಿಯ ಜಾಗತಿಕ ನಾಯಕರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಪಿಎಂ ಮೋದಿ



ದೆಹಲಿ, ಡಿ.8– ಅಮೆರಿಕ ಮೂಲದ 'ಗ್ಲೋಬಲ್ ಲೀಡರ್ ಅಪ್ರೂವಲ್ ರೇಟಿಂಗ್ ಟ್ರ್ಯಾಕರ್' ಮಾರ್ನಿಂಗ್ ಕನ್ಸಲ್ಟ್ ನಡೆಸಿದ ಸಮೀಕ್ಷೆಯ ಪ್ರಕಾರ ಪ್ರಕಾರ, ಪ್ರಧಾನಿ ನರೇಂದ್ರ ಮೋದಿ ಅವರು ಶೇಕಡಾ 76 ರೇಟಿಂಗ್‌ನೊಂದಿಗೆ ವಿಶ್ವದ ಅತ್ಯಂತ ಜನಪ್ರಿಯ ನಾಯಕರಾಗಿ ಅಗ್ರ ಸ್ಥಾನದಲ್ಲಿ ದ್ದಾರೆ. ಪ್ರಧಾನಿ ಮೋದಿ ಅವರ ಆನಂತರದ ಸ್ಥಾನದಲ್ಲಿ ಮೆಕ್ಸಿಕನ್ ಅಧ್ಯಕ್ಷ ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್ ಒಬ್ರಡಾರ್ (66%), ಸ್ವಿಟ್ಜರ್ಲೆಂಡ್ ಅಧ್ಯಕ್ಷ ಅಲೈನ್ ಬರ್ಸೆಟ್(58%) ಮತ್ತು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ (49%) ಇದ್ದಾರೆ. ಅದೇ ವೇಳೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು 40% ರೇಟಿಂಗ್‌ನೊಂದಿಗೆ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದ್ದಾರೆ, ಇದು ಮಾರ್ಚ್ ನಿಂದ ಅವರ ಅತ್ಯಧಿಕ ರೇಟಿಂಗ್ ಆಗಿದೆ. ನವೆಂಬರ್ 29ರಿಂದ ಡಿ.5ರ ಅವಧಿಯಲ್ಲಿನ ಸಮೀಕ್ಷೆಯಾಗಿದೆ ಇದು. ಈ ಬಾರಿಯ ಸಮೀಕ್ಷೆಯಲ್ಲಿ ಶೇ. 18 ಜನರು ಮೋದಿಯವರನ್ನು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ.

ರಾಜಕೀಯ ಗುಪ್ತಚರ ಸಂಶೋಧನಾ ಸಂಸ್ಥೆಯು ಸಂಗ್ರಹಿಸಿದ ದತ್ತಾಂಶವು 22 ಜಾಗತಿಕ ನಾಯಕರ ಸಮೀಕ್ಷೆಯನ್ನು ಆಧರಿಸಿದೆ. ಸೆಪ್ಟೆಂಬರ್ 6–12, 2023 ರಿಂದ ಸಂಗ್ರಹಿಸಲಾದ ಮಾಹಿತಿಯ ಪ್ರಕಾರ, ಪಿಎಂ ಮೋದಿ ಅವರು ಪಟ್ಟಿಯಲ್ಲಿ ಅತ್ಯಂತ ಕಡಿಮೆ ಅಂದರೆ ಶೇ. 18ಜನರು ಒಪ್ಪುವುದಿಲ್ಲ ಎಂಬ ರೇಟಿಂಗ್ ಅನ್ನು ಹೊಂದಿದ್ದಾರೆ. ನಾಯಕರನ್ನು ಒಪ್ಪುವುದಿಲ್ಲ ಎಂಬ ಪಟ್ಟಿಯಲ್ಲಿರುವ ಅಗ್ರ 10 ನಾಯಕರಲ್ಲಿ, ಕೆನಡಾದ ಜಸ್ಟಿನ್ ಟ್ರುಡೊ ಅಗ್ರ ಸ್ಥಾನದಲ್ಲಿದ್ದಾರೆ. ಅವರು ಶೇಕಡಾ 58 ಮಂದಿ ಟ್ರುಡೊ ಅವರನ್ನು ಒಪ್ಪುವುದಿಲ್ಲ ಎಂದಿದ್ದಾರೆ. ಈ ಹಿಂದಿನ ರೇಟಿಂಗ್‌ಗಳಲ್ಲಿಯೂ ಮೋದಿ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದರು. ಆಗ ಅವರು ಜಾಗತಿಕ ನಾಯಕರ ಪಟ್ಟಿಯಲ್ಲಿ ಶೇ 76 ರಷ್ಟು ರೇಟಿಂಗ್‌ನೊಂದಿಗೆ ಅಗ್ರಸ್ಥಾನ ಪಡೆದಿದ್ದರು. ಹಿಂದಿನ ರೇಟಿಂಗ್‌ನಲ್ಲಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಶೇಕಡಾ 40, ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಶೇಕಡಾ 37, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಶೇಕಡಾ 27 ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಶೇಕಡಾ 24ರ ಅನುಮೋದನೆಯನ್ನು ಪಡೆದಿದ್ದಾರೆ. ಈ ರೇಟಿಂಗ್‌ಗಳು ಸೆಪ್ಟೆಂಬರ್ 6ರಿಂದ 12ರವರೆಗೆ ಸಂಗ್ರಹಿಸಿದ ಡೇಟಾವನ್ನು ಆಧರಿಸಿವೆ ಎಂದು ಮಾರ್ನಿಂಗ್ ಕನ್ಸಲ್ಟ್ ಹೇಳಿದೆ. ಅಮೆರಿಕದಿಂದ, ಸರಾಸರಿ 45,000 ಮಂದಿ ಸಮೀಕ್ಷೆಯಲ್ಲಿ ಭಾಗಿಯಾದರೆ, ಇತರ ದೇಶಗಳಿಂದ, ಸರಿಸುಮಾರು 500 ರಿಂದ 5,000 ವರೆಗೆ ಜನ ಸಮೀಕ್ಷೆಯಲ್ಲಿ ಭಾಗವಹಿಸಿದ್ದರು.

ಮಾರ್ನಿಂಗ್ ಕನ್ಸಲ್ಟ್ ಪ್ರಕಾರ ಇದು ರಾಜಕೀಯ ಚುನಾವಣೆಗಳು, ಚುನಾಯಿತ ಅಧಿಕಾರಿಗಳು ಮತ್ತು ಮತದಾನದ ಸಮಸ್ಯೆಗಳ ಕುರಿತು ರಿಯಲ್ ಟೈಂ ಮತದಾನದ ಡೇಟಾವನ್ನು ಒದಗಿಸುತ್ತದೆ. ಮಾರ್ನಿಂಗ್ ಕನ್ಸಲ್ಟ್ ಪ್ರತಿದಿನ 20,000ಕ್ಕೂ ಹೆಚ್ಚು ಜಾಗತಿಕ ಸಂದರ್ಶನಗಳನ್ನು ನಡೆಸುತ್ತದೆ. ಎಲ್ಲಾ ಸಂದರ್ಶನಗಳನ್ನು ಆನ್‌ಲೈನ್‌ನಲ್ಲಿ ನಡೆಸಲಾಗುತ್ತದೆ.

ಜಮ್ಮು–ಕಾಶ್ಮೀರದ ಆರ್ಟಿಕಲ್ 370 ರದ್ಧತಿ ಕುರಿತ ಸುಪ್ರೀಂಕೋರ್ಟ್ ಆದೇಶ ಡಿಸೆಂಬರ್ 11ಕ್ಕೆ

ನವದೆಹಲಿ: ಜಮ್ಮು–ಕಾಶ್ಮೀರದ ಆರ್ಟಿಕಲ್ 370 ರದ್ಧತಿ ಕುರಿತು ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯ ತೀರ್ಪು ಡಿಸೆಂಬರ್ 11 ಕ್ಕೆ ಪ್ರಕಟವಾಗಲಿದೆ.

ಸಿಜೆಐ ಡಿವೈ ಚಂದ್ರಚೂಡ್ ನೇತೃತ್ವದ ಪಂಚ ಸದಸ್ಯ ಪೀಠ ತೀರ್ಪು ಪ್ರಕಟಿಸಲಿದೆ ಎಂದು ಕೋರ್ಟ್ ವೆಬ್ ಸೈಟ್‌ನಲ್ಲಿ ತಿಳಿಸಲಾಗಿದೆ. ಪಂಚ ಸದಸ್ಯ ಪೀಠದಲ್ಲಿ ನ್ಯಾ. ಸಂಜಯ್ ಕಿಶನ್ ಕೌಲ್, ನ್ಯಾ. ಸಂಜೀವ್ ಖನ್ನಾ, ನ್ಯಾ. ಬಿಆರ್ ಗವಾಯಿ ಹಾಗೂ ನ್ಯಾ.ಸೂರ್ಯ ಕಾಂತ್ ಸಹ ಇದ್ದಾರೆ.

16 ದಿನಗಳ ವಿಚಾರಣೆಯ ನಂತರ ಸೆ.05 ರಂದು ಸುಪ್ರೀಂ ಕೋರ್ಟ್ ಈ ಪ್ರಕರಣದ ತೀರ್ಪನ್ನು ಕಾಯ್ದಿರಿಸಿತ್ತು.

ಜಮ್ಮು–ಕಾಶ್ಮೀರದ ಆರ್ಟಿಕಲ್ 370 ರದ್ದತಿಯನ್ನು ವಿರೋಧಿಸಿ ಅರ್ಜಿ ಸಲ್ಲಿಸಿದ್ದವರ ಪರವಾಗಿ ಕಪಿಲ್ ಸಿಬಲ್, ಗೋಪಾಲ್ ಸುಬ್ರಹ್ಮಣ್ಯಂ, ರಾಜೀವ್ ಧವನ್, ಜಫರ್ ಶಾ, ದುಷ್ಯಂತ್ ದಾವೆ ವಾದಿಸಿದ್ದರು.

ಇ–ಶ್ರಮ್ ಪೋರ್ಟಲ್ ಮೂಲಕ ಅಸಂಘಟಿತ ಕಾರ್ಮಿಕರ ನೋಂದಣಿ

ಮೈಸೂರು,ಡಿ.8– ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಲು ಇ–ಶ್ರಮ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದ್ದು, ಸುಮಾರು 379 ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಸದರಿ ಪೋರ್ಟಲ್ ಮೂಲಕ ಉಚಿತವಾಗಿ ನೋಂದಾಯಿಸಲಾಗುತ್ತಿದ್ದು, ಗುರುತಿನ ಚೀಟಿಯನ್ನು ನೋಂದಾಯಿತ ಸ್ಥಳದಲ್ಲಿ ವಿತರಿಸಲಾಗುತ್ತಿದೆ. ಆದ್ದರಿಂದ ಅಸಂಘಟಿತ ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರ, ಕಾರ್ಮಿಕರು ನೋಂದಾಯಿಸಿಕೊಳ್ಳಲು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಮತ್ತು ಜವಳಿ ಇಲಾಖೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಕೇಶವರಾಜು

ಮೈಸೂರು, ಡಿ.8–ಮೈಸೂರಿನ ಗಾಯತ್ರಿಪುರಂ ನಿವಾಸಿ ಕೇಶವರಾಜು (58) ಅವರು ಶುಕ್ರವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ 12.30ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಶಾಸಕ ಜಿ.ಟಿ.ದೇವೇಗೌಡರ ಆಗ್ರಹ

ಪ್ರಾಧಿಕಾರ ವಸೂಲಿ ಮಾಡುವ ಕಂದಾಯ ಹಾಗೂ ಇನ್ನಿತರ ತೆರಿಗೆಗಳಿಂದಲೇ ಬಡಾವಣೆಗಳ ಅಭಿ ವೃದ್ಧಿ ಮಾಡಬೇಕು. ಸರ್ಕಾರದ ಅಧಿಕಾರಿಗಳು ನಿಧಿ–1 ಮತ್ತು ನಿಧಿ–2 ಎಂದು ವರ್ಗೀಕರಣ ಮಾಡಿದ್ದು, ನಿಧಿ–2ರಲ್ಲಿರುವ ಅನುದಾನವನ್ನು ಬಡಾವಣೆಗಳ ಮೂಲಭೂತ ಸೌಕರ್ಯಗಳಿಗಾಗಿ ಬಳಸಬಹುದು. ಆದರೆ ಕಂದಾಯ ಸೇರಿದಂತೆ ಎಲ್ಲಾ ತೆರಿಗೆ ಮೊತ್ತವನ್ನು ಸರ್ಕಾರದ ಆದೇಶದಂತೆ ನಿಧಿ–1 ರಲ್ಲಿ ಜಮೆ ಮಾಡಲಾಗುತ್ತಿದೆ. ಪರಿಣಾಮ ನಿಧಿ–2ರಲ್ಲಿ ಅನುದಾನವಿಲ್ಲದೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಿಧಿ–1 ಮತ್ತು ನಿಧಿ–2 ಎನ್ನುವ ವಿಂಗಡಣೆಯನ್ನು ತೆಗೆದು, ಹಿಂದಿನ ರೀತಿಯಲ್ಲೇ ನಿರ್ವಹಣೆ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಜಿಟಿಡಿ ಮನವಿ ಮಾಡಿದರು.

ಅಭಿವೃದ್ಧಿ ಬಳಿಕ ಹಸ್ತಾಂತರಿಸಲಿ: ಮುಡಾದಿಂದ ಖಾತೆ ಮಾಡದಂತೆ ಜಿಲ್ಲಾಧಿಕಾರಿಗಳು ಆದೇಶ ನೀಡಿ, ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವಂತೆ ಸೂಚಿಸಿದ್ದಾರೆ. ಹೊಸ ಬಡಾವಣೆ ನಿರ್ಮಾಣ ಹಂತದಿಂದ ಅಲ್ಲಿನ ಶೇ.100ರಷ್ಟು ನಿವೇಶನ ಬಿಡುಗಡೆ ಮಾಡುವವರೆಗೂ ಮುಡಾದಿಂದಲೇ ಕಂದಾಯ ವಸೂಲಿ ಮಾಡಲಾಗುತ್ತದೆ. ಕೊನೆಗೆ ಯಾವುದೇ ಮೂಲ ಸೌಕರ್ಯ ಕಲ್ಪಿಸದೆ, ಬಡಾವಣೆಯನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸದಿದ್ದರೂ ಬಡಾವಣೆಗಳನ್ನು ಏಕಾಏಕಿ ಸ್ಥಳೀಯ ಸಂಸ್ಥೆಗೆ ಹಸ್ತಾಂತರ ಮಾಡಿ ಎನ್ನುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ ಜಿಟಿಡಿ, ಹಸ್ತಾಂತರಕ್ಕೆ ಗುರುತಿಸಿರುವ ಬಡಾವಣೆಗಳನ್ನು ಅಭಿವೃದ್ಧಿಪಡಿಸಿದ ನಂತರ ಪ್ರಕ್ರಿಯೆ ಮುಂದುವರೆಸುವ ಅವಶ್ಯಕತೆಯನ್ನು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ಮನದಟ್ಟು ಮಾಡಿಕೊಟ್ಟರು. ಜಿ.ಟಿ.ದೇವೇಗೌಡರ ಪ್ರಶ್ನೆಗೆ ಉತ್ತರಿಸಿದ ಸಚಿವ ಭೈರತಿ ಸುರೇಶ್, ಈ ಸಂಬಂಧ ಶೀಘ್ರದಲ್ಲೇ ಅಧಿಕಾರಿಗಳ ಜೊತೆ ಸಭೆ ನಡೆಸಿ, ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಫಾರಂ ನಂ.3 ವಿತರಣೆ

ನೀಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ಈ ಹಿಂದೆ ಹಳೆಯ ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಯೋಜಿತ ನಕ್ಷೆಗಳಿರುವುದಿಲ್ಲ. ಫಾರಂ–ಸಿ ನೀಡಲು ಯೋಜಿತ ನಕ್ಷೆ, ನಿರಪೇಕ್ಷಣಾ ಪತ್ರ ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ. ಅವುಗಳು ಲಭ್ಯ ವಿಲ್ಲದ ಕಾರಣ ಸಮಸ್ಯೆ ಹೆಚ್ಚಾಗಿದೆ ಎಂದರು. ಶೀಘ್ರದಲ್ಲೇ ನಿರ್ಧಾರ ತೆಗೆದುಕೊಂಡು 2 ತಿಂಗಳೊಳಗಾಗಿ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಭರವಸೆ ನೀಡಿದರು.

ಎರಡು ಹುಲಿ ಕಳೇಬರ ಪತ್ತೆ

ಪಶು ವೈದ್ಯಾಧಿಕಾರಿ ಡಾ.ಮಂಜುನಾಥ್ ಸೇರಿದಂತೆ ಸಿಬ್ಬಂದಿ ಆಗಮಿಸಿ, ಶ್ವಾನದಳ ಹಾಗೂ ಪೊಲೀಸರೊಂದಿಗೆ ಪರಿಶೀಲಿಸಿದರು. ಸುಮಾರು 200 ಮೀಟರ್ ಅಂತರದಲ್ಲಿ ಈ ಎರಡೂ ಕಳೇಬರಗಳು ಪತ್ತೆಯಾಗಿದ್ದು, ಹುಲಿಗಳ ಸಾವಿಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಮರಣೋತ್ತರ ಪರೀಕ್ಷೆಯಿಂದ ಹುಲಿಗಳ ಸಾವಿನ ಬಗ್ಗೆ ತಿಳಿಯಬೇಕಿದೆ. ಅರಣ್ಯ ಇಲಾಖೆಯ ನಿಯಮಾನುಸಾರ ಸ್ಥಳದಲ್ಲೇ ಹುಲಿಗಳ ಕಳೇಬರಗಳನ್ನು ಸುಡಲಾಯಿತು.

ಹುಲಿ ಕಳೇಬರ ನೋಡಲು ಮುಗಿಬಿದ್ದ ಜನರು: ಹುಲಿಗಳ ಕಳೇಬರ ಗ್ರಾಮದ ಹೊರವಲಯದಲ್ಲಿ ಪತ್ತೆಯಾಗಿರುವ ವಿಷಯ ತಿಳಿದ ಗ್ರಾಮಸ್ಥರು ಹಾಗೂ ಸ್ಥಳೀಯರು, ತಂಡೋಪತಂಡವಾಗಿ ಬಂದು ಕಳೇಬರ ನೋಡಲು ಮುಗಿಬಿದ್ದರು. ಶುಕ್ರವಾರ ಮಧ್ಯಾಹ್ನವಾದರೂ ಸ್ಥಳಕ್ಕೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ವೈದ್ಯರು ಬಾರದ ಹಿನ್ನೆಲೆಯಲ್ಲಿ ಜನರು ಅಸಮಾಧಾನ ವ್ಯಕ್ತಪಡಿಸಿದರು. ಇತ್ತೀಚೆಗೆ ಈ ಭಾಗದಲ್ಲಿ ಹುಲಿಯೊಂದು ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಭಯ ಹುಟ್ಟಿಸಿತ್ತು. ಗ್ರಾಮಸ್ಥರು ಜಮೀನುಗಳಿಗೆ ತೆರಳಲು ಭಯಭೀತರಾಗಿದ್ದರು ಎಂದು ಸ್ಥಳೀಯ ತಿಳಿಸಿದರು.

ಕೂಚ್ ಬೆಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿ

ಮೊದಲ ಇನ್ನಿಂಗ್ಸ್‌ನಲ್ಲಿ ಉತ್ತರಪ್ರದೇಶ 239ಕ್ಕೆ ಆಲ್‌ಔಟ್

ಕರ್ನಾಟಕ 2 ವಿಕೆಟ್ ನಷ್ಟಕ್ಕೆ 21 ರನ್



ಮೈಸೂರು, ಡಿ.8(ಎಂಟಿವೈ)– ಕೂಚ್ ಬೆಹಾರ್ ಟ್ರೋಫಿ ರಾಷ್ಟ್ರೀಯ ಪಂದ್ಯಾವಳಿಯ ಆತಿಥೇಯ ಕರ್ನಾಟಕ ಹಾಗೂ ಉತ್ತರ ಪ್ರದೇಶದ ನಡುವೆ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡದ ಮಾರಕ ಬೌಲಿಂಗ್ ದಾಳಿಗೆ ಉತ್ತರಪ್ರದೇಶ ಮೊದಲ ಇನ್ನಿಂಗ್ಸ್‌ನಲ್ಲಿ 239 ರನ್ ಗಳಿಸಿ ಆಲೌಟಾಗಿದ್ದು, ಕರ್ನಾಟಕ ದಿನದ ಗೌರಕ್ಕೆ ಪಾತ್ರವಾಗಿದೆ.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಉತ್ತರ ಪ್ರದೇಶ ಬೃಹತ್ ಮೊತ್ತ ಕಲೆ ಹಾಕುವ ಮುನ್ಸೂಚನೆ ನೀಡಿತ್ತಾದರೂ, ಕರ್ನಾಟಕ ತಂಡ ಬೌಲರ್‌ಗಳ ಕರಾರುವಾಕ್ ಬೌಲಿಂಗ್‌ಗೆ ಕೊನೆಯ ವಿಕೆಟ್‌ಗಳು ಉದುರಿದ್ದರಿಂದ ಕೇವಲ 239 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಕರ್ನಾಟಕ ತಂಡದ ನಾಯಕ ಧೀರಜ್ ಗೌಡ(4/37) ಹಾಗೂ ಧ್ರುವ್ ಪ್ರಭಾಕರ್(4/63) ತಲಾ 4 ವಿಕೆಟ್ ಪಡೆಯುವ ಮೂಲಕ ಉತ್ತರ ಪ್ರದೇಶ ತಂಡವನ್ನು ಕಟ್ಟಿ ಹಾಕುವಲ್ಲಿ ಯಶಸ್ವಿಯಾದರು. ಇದರಿಂದ ಮೊದಲ ಇನ್ನಿಂಗ್ಸ್‌ನಲ್ಲಿ ಉತ್ತರಪ್ರದೇಶ 77 ಓವರ್‌ಗಳಲ್ಲಿ 239 ರನ್‌ಗಳ ಗೌರವಯುತ ಮೊತ್ತ ಕಲೆಹಾಕಿ ಆಲೌಟ್ ಆಯಿತು.

ಉತ್ತರ ಪ್ರದೇಶದ ಆರಂಭಿಕ ಆಟಗಾರರಾದ ಮನವ್ ಸಿಂಧು(33) ಹಾಗೂ ಇನ್ಜಮಾಮ್ ಹುಸೈನ್(20) ತಂಡಕ್ಕೆ ಉತ್ತಮ ಆರಂಭ ತಂದುಕೊಡುವ ಪ್ರಯತ್ನ ಮಾಡಿದರು. ತಂಡದ ಮೊತ್ತ 9 ಓವರ್‌ನಲ್ಲಿ 37 ರನ್ ಆಗಿದ್ದಾಗ ಇನ್ಜಮಾಮ್ ಹುಸೈನ್ ಔಟಾದರು. ಬಳಿಕ ಸ್ಕ್ರೀಸ್‌ಗೆ ಬಂದ ನಾಯಕ ಯಶು ಪ್ರಧಾನ್(54 ರನ್, 40 ಬಾಲ್, 6 ಬೌಂಡರಿ, 3 ಸಿಕ್ಸ್) ಬಿರುಸಿನ ಬ್ಯಾಟಿಂಗ್ ಮಾಡಿ ಅರ್ಧಶತಕ ಸಿಡಿಸಿದರು. ನಂತರ ಬಂದ ಟಿಯೋಟಿಯ(39), ಸುಶಾಂತ್(38) ಜವಾಬ್ದಾರಿಯ ಆಟದಿಂದ ತಂಡಕ್ಕೆ ನೆರವಾದರು. ಭೋಜನ ವಿರಾಮದ ವೇಳೆ 50.3 ಓವರ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದ ಉತ್ತರಪ್ರದೇಶ ಭೋಜನ ವಿರಾಮದ ನಂತರ ತತ್ತರಿಸಿತು. ವಿಕೆಟ್ ಕೀಪರ್ ಅಕ್ಷಯ್ ದುಬೆ 16, ಶುಭಂ ಮಿಶ್ರ 0, ಅರುಶ್ ಗೋಲ್ 8. ಆದಿತ್ಯ ಕುಮಾರ್ ಸಿಂಗ್ 0, ಹಿತೇಶ್ ಕುಮಾರ್ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಯಾಸಿರ್ ಖಾನ್ 11 ಎಸೆತ ಎದುರಿಸಿ 2 ಸಿಕ್ಸರ್, 1 ಬೌಂಡರಿಯೊಂದಿಗೆ 21 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಉತ್ತರ ಪ್ರದೇಶ 77 ಓವರ್‌ಗಳಲ್ಲಿ 239 ರನ್‌ಗಳ ಗೌರವಯುತ ಮೊತ್ತ ಕಲೆಹಾಕಿ ಆಲೌಟ್ ಆಯಿತು.

ಕರ್ನಾಟಕದ ಪರವಾಗಿ ಎನ್.ಸಮರ್ಥ 4 ಓವರ್‌ನಲ್ಲಿ 19 ರನ್ ನೀಡಿದರೆ, ಮೈಸೂರಿನ ವೇಗಿ ಇಶಾನ್.ಎಸ್, 9 ಓವರ್‌ನಲ್ಲಿ 34 ರನ್, ಸಮಿತ್ ದ್ರಾವಿಡ್ 4 ಓವರ್‌ನಲ್ಲಿ 34 ರನ್ ನೀಡಿದರು. ನಿಶ್ಚಿತ್ ಎನ್.ಪೈ 7 ಓವರ್‌ನಲ್ಲಿ 26 ರನ್ ನೀಡಿ 1 ವಿಕೆಟ್, ನಾಯಕ ಧೀರಜ್‌ಗೌಡ 27 ಓವರ್‌ನಲ್ಲಿ 37 ರನ್ ನೀಡಿ 4 ವಿಕೆಟ್ ಕುಳಿಸಿದರು. ಧ್ರುವ್ ಪ್ರಭಾಕರ್ 18 ಓವರ್‌ನಲ್ಲಿ 63ರನ್ 4 ವಿಕೆಟ್ ಗಳಿಸಿದರು. ಹಾರ್ದಿಕ್ ರಾಜ್ 8 ಓವರ್‌ನಲ್ಲಿ 24 ರನ್ ನೀಡಿದರು.

ಕರ್ನಾಟಕ ಮೊದಲ ಇನ್ನಿಂಗ್ಸ್ 2 ವಿಕೆಟ್ ನಷ್ಟಕ್ಕೆ 21 ರನ್: ಉತ್ತರ ಪ್ರದೇಶ ತಂಡ 239 ರನ್ ಬೆನ್ನತ್ತಿದ ಅಥಿತೇಯ ಕರ್ನಾಟಕ ಮೊದಲ ದಿನದ ಅಂತ್ಯಕ್ಕೆ 2 ವಿಕೆಟ್ ಕಳೆದುಕೊಂಡು 29 ರನ್ ಗಳಿಸಿದೆ. ತಂಡ ಮೊತ್ತ 6.1 ಓವರ್‌ನಲ್ಲಿ 21 ರನ್ ಆಗಿದ್ದಾಗ ಆರಂಭಿಕ ಆಟಗಾರ ವಿಕೆಟ್ ಕೀಪರ್ ಕೇಶವ್ ಬಜಾಜ್ 2 ಬೌಂಡರಿಯೊಂದಿಗೆ 11ರನ್ ಗಳಿಸಿದ್ದಾಗ ಔಟಾಗುವ ಮೂಲಕ ಮೊದಲ ವಿಕೆಟ್ ಒಪ್ಪಿಸಿದರು. ಬಳಿಕ 23 ರನ್ ಆಗಿದ್ದಾಗ ಮತ್ತೊಬ್ಬ ಆರಂಭಿಕ ಆಟಗಾರ ಪ್ರಕರ್ ಚತುರ್ವೇಧಿ 10 ರನ್ ಗಳಿಸಿದ್ದಾಗ ಔಟಾಗಿ ತಂಡದ ಎರಡನೇ ವಿಕೆಟ್ ಒಪ್ಪಿಸಿದರು. ಬಳಿಕ ಮಾಧವ್ ದಾರ್ವಾಡಕರ್(7) ಹಾಗೂ ಸಮಿತ್ ದ್ರಾವಿಡ್(1) ಅಜೇಯರಾಗಿ ಕಣದಲ್ಲಿದ್ದಾರೆ. ಉತ್ತರ ಪ್ರದೇಶ್ ಪರ ಹಿತೇಶ್ ಕುಮಾರ್ ಹಾಗೂ ಯಾಸಿರ್ ಖಾನ್ ತಲಾ 1 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್

ಉತ್ತರ ಪ್ರದೇಶ ಮೊದಲ ಇನ್ನಿಂಗ್ಸ್: 77 ಓವರ್‌ನಲ್ಲಿ 239 ರನ್‌ಗೆ ಆಲೌಟ್,

ಕರ್ನಾಟಕ ಮೊದಲ ಇನ್ನಿಂಗ್ಸ್: ದಿನದ ಅಂತ್ಯಕ್ಕೆ 11 ಓವರ್‌ನಲ್ಲಿ 2 ವಿಕೆಟ್ ನಷ್ಟಕ್ಕೆ 21 ರನ್

ಸಬ್ಸಿಡಿ ಲೋನ್ ಕೊಡಿಸುವುದಾಗಿ ವಂಚನೆ ಆರೋಪ

ಇಂಗಲ ಕುಪ್ಪೆ ಕೃಷ್ಣ ಮೈಸೂರು ಕಚೇರಿ ಮುಂದೆ ರೈತ ಮಹಿಳೆಯರ ಪ್ರತಿಭಟನೆ



ಮೈಸೂರು, ಡಿ.8(ಜಿಎ)–ರೈತ ಮಹಿಳೆಯರಿಗೆ ಸಬ್ಸಿಡಿ ಲೋನ್ ಕೊಡಿಸುವುದಾಗಿ ಸಾಗುವಳಿ ಜಮೀನನ್ನು ನಿಮ್ಮ ಹೆಸರಿಗೆ ಮಾಡಿಸಿ ಕೊಡುವುದಾಗಿ ಇಂಗಲ ಕುಪ್ಪೆ ಕೃಷ್ಣ ಎಂಬುವವರು ವಂಚಿಸಿದ್ದಾರೆ ಎಂದು ಆರೋಪಿಸಿ ರೈತ ಮಹಿಳೆಯರು ನಗರದ ಡಿ.ಬನುಮಯ್ಯ ರಸ್ತೆಯಲ್ಲಿರುವ ಅವರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರೈತ ಬಣ ಎಂದು ಹೇಳಿಕೊಂಡು ನಕಲಿ ಹೋರಾಟಗಾರ ಇಂಗಲ ಕುಪ್ಪೆ ಕೃಷ್ಣ ಕೆಲವು ಮಹಿಳೆಯರಿಗೆ ಸಬ್ಸಿಡಿ ಲೋನ್ ಕೊಡಿಸುವುದಾಗಿ ಸಾಗುವಳಿ ಜಮೀನನ್ನು ನಿಮ್ಮ ಹೆಸರಿಗೆ ಮಾಡಿಸಿ ಕೊಡುವುದಾಗಿ ಸುಮಾರು 2 ಲಕ್ಷ ರೂ. ತೆಗೆದುಕೊಂಡು ವಂಚನೆಯನ್ನು ಮಾಡಿದ್ದಾರೆ. ಆತನ ವಿರುದ್ಧ ಸೂಕ್ತ ಕ್ರಮ ತೆಗೆದುಕೊಂಡು ನ್ಯಾಯವನ್ನು ದೊರಕಿಸಿಕೊಡಬೇಕು ಹಾಗೂ ಆತನನ್ನು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಕೃಷ್ಣ ಅವರು ಶ್ರೀ ವೀರಭದ್ರೇಶ್ವರ ಸ್ವಾಮಿ ಮತ್ತು ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್‌ಗೆ ಸೇರಿದ ಮಳಿಗೆವೊಂದನ್ನು ಬಾಡಿಗೆಗೆ ಪಡೆದುಕೊಂಡಿದ್ದಾರೆ. ರೈತ ಮಹಿಳೆಯರು ಇಂದು ಬೆಳಗ್ಗೆ ಮಳಿಗೆ ಬಳಿ ಪ್ರತಿಭಟನೆ ಮಾಡುತ್ತಿರುವುದನ್ನು ಗಮನಿಸಿದ ದೇವಾಲಯದ ಟ್ರಸ್ಟ್‌ನ ಕಾರ್ಯದರ್ಶಿ ತಕ್ಷಣವೇ, ಕೃಷ್ಣ ಎಂಬುವರು ದೇವಾಲಯದ ಟ್ರಸ್ಟ್‌ಗೆ ಸೇರಿದ ಒಂದು ಮಳಿಗೆಯಲ್ಲಿ ಬಾಡಿಗೆದಾರರಾಗಿದ್ದು, ಇವರು ಸುಮಾರು ತಿಂಗಳುಗಳಿಂದ ಬಾಡಿಗೆಯನ್ನು ನೀಡದೇ ಅಂಗಡಿಯನ್ನು ತೆರೆಯದೇ ಇರುತ್ತಾರೆ. ಆದರೆ, ಇಂದು ಬಾಗಿಲನ್ನು ತೆರೆದಿದ್ದರು ಆ ಸಮಯಕ್ಕೆ ಸರಿಯಾಗಿ ರೈತ ಮುಖಂಡರು ಮತ್ತು ಮಹಿಳೆಯರು ಬಂದು ಗಲಾಟೆಯನ್ನು ಮಾಡಿದ್ದಾರೆ. ಈಗ ಕೃಷ್ಣ ಅಂಗಡಿಯನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಈ ವಿಷಯವನ್ನು ಈ ಮೂಲಕ ತಮ್ಮ ಗಮನಕ್ಕೆ ತರುತ್ತಾ ಮುಂದಿನ ಕ್ರಮವನ್ನು ಕೈಗೊಳ್ಳುವಂತೆ ಲಿಖಿತ ದೂರನ್ನು ಕೃಷ್ಣರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗೆ ನೀಡಿದರು.

ನಂತರ ಮಹಿಳೆಯರು ಠಾಣೆಗೆ ತೆರಳಿ ಮಹಿಳೆಯರಿಗೆ ಸಬ್ಸಿಡಿ ಲೋನ್ ಕೊಡಿಸುವುದಾಗಿ ಸಾಗುವಳಿ ಜಮೀನನ್ನು ನಿಮ್ಮ ಹೆಸರಿಗೆ ಮಾಡಿಸಿ ಕೊಡುವುದಾಗಿ ಕೆಲವು ರೈತ ಮಹಿಳೆಯರ ಬಳಿ ಸುಮಾರು 2 ಲಕ್ಷ ರೂ. ಹಣವನ್ನು ತೆಗೆದುಕೊಂಡು ವಂಚನೆಯನ್ನು ಮಾಡಿದ್ದಾರೆ ಎಂದು ದೂರು ಸಲ್ಲಿಸಿದ್ದಾರೆ.

ಅಪರಿಚಿತ ಕಾರು ಡಿಕ್ಕಿ; ಪಾದಚಾರಿ ರೈತ ಸಾವು

ನಂಜನಗೂಡು, ಡಿ. 8– ಅಪರಿಚಿತ ಕಾರು ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ರೈತ ಸಾವನ್ನಪ್ಪಿದ ಘಟನೆ ನಂಜನಗೂಡಿನ ಮಲ್ಲನಮೂಲೆ ಮಠದ ಮುಂಭಾಗ ಸಂಭವಿಸಿದೆ. ಮೈಸೂರಿನ ಕೆಸರೆ ನಿವಾಸಿ ಸದಾಶಿವಪ್ಪ(59) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಕೆಸರೆಯಿಂದ ಸ್ನೇಹಿತರೊಂದಿಗೆ ಆಟೋದಲ್ಲಿ ಮಲ್ಲನಮೂಲೆ ಮಠಕ್ಕೆ ತೆರಳಿದ್ದರು. ಡಿ. 6ರಂದು ಸಂಜೆ 7.45ರ ಸುಮಾರಿನಲ್ಲಿ ಎದುರಿನ ರಸ್ತೆಯಲ್ಲಿ ಆಟೋ ನಿಂತಿದ್ದು, ಮಠಕ್ಕೆ ಹೋಗಲು ಸದಾಶಿವಪ್ಪ ರಸ್ತೆ ದಾಟುತ್ತಿದ್ದ ವೇಳೆ ಮೈಸೂರು ಕಡೆಯಿಂದ ನಂಜನಗೂಡು ಕಡೆಗೆ ತೆರಳುತ್ತಿದ್ದ ಕಾರು ಅವರಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ನಂತರ ಚಾಲಕ ಕಾರು ನಿಲ್ಲಿಸದೇ ಪರಾರಿಯಾಗಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಸದಾಶಿವಪ್ಪ ಅವರಿಗೆ ನಂಜನಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಡಿ. 7ರಂದು ಮೃತಪಟ್ಟಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು

ಹುಣಸೂರು, ಡಿ. 8– ಮನೆಯ ಬಾಗಿಲು ಮೀಟಿ ಚಿನ್ನಾಭರಣ ಮತ್ತು ನಗದು ಕಳವು ಮಾಡಿರುವ ಘಟನೆ ಹುಣಸೂರು ತಾಲೂಕು ಬಿಳಿಕೆರೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸುಧಾ(49), ನಗ–ನಾಣ್ಯ ಕಳೆದುಕೊಂಡವರಾಗಿದ್ದು, ಇವರು ಎಮ್ಮೆಕೊಪ್ಪಲು ಗ್ರಾಮದ ಸಂಬಂಧಿಕರ ಮನೆಗೆ ಕಾರ್ಯಕ್ರಮವೊಂದಕ್ಕಾಗಿ ಡಿ. 6ರಂದು ತೆರಳಿದ್ದು, ಪಕ್ಕದ ಮನೆಯವರು ನೀಡಿದ ಮಾಹಿತಿಯಂತೆ ಡಿ. 7ರಂದು ಬೆಳಗ್ಗೆ ಮನೆಗೆ ಹಿಂದಿರುಗಿ ನೋಡಿದಾಗ ದುಷ್ಕರ್ಮಿಗಳು ಅವರ ಮನೆ ಬಾಗಿಲು ಮೀಟಿ 3 ಲಕ್ಷ ರೂ. ನಗದು, 20 ಗ್ರಾಂ ತೂಕದ ಚಿನ್ನಾಭರಣ ಮತ್ತು ಒಂದು ಕೆ.ಜಿ. ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿ17ಕ್ಕೆ ಮಾನವ ಹಕ್ಕುಗಳ ದಿನಾಚರಣೆ



ಮೈಸೂರು, ಡಿ.8(ಜಿಎ)–ಮಾನವ ಹಕ್ಕುಗಳ ಸೇವಾ ಸಮಿತಿ ವತಿಯಿಂದ ಮಾನವ ಹಕ್ಕುಗಳ ದಿನಾಚರಣೆ ಹಾಗೂ ಸಮಿತಿಯ 7ನೇ ವಾರ್ಷಿಕೋತ್ಸವದ ಪ್ರಯುಕ್ತ ಡಿ.17 ರಂದು ಬೆಳಿಗ್ಗೆ 11ಕ್ಕೆ ಕಾನೂನು ಅರಿವು–ನೆರವು ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಮಾನವರತ್ನ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಪುರಭವನದಲ್ಲಿ ಆಯೋಜಿಸಲಾಗಿದೆ ಎಂದು ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಶಿವರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮವನ್ನು ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಉದ್ಘಾಟಿಸಲಿದ್ದಾರೆ. ಮಣಿಪಾಲ್ ಆಸ್ಪತ್ರೆಯ ವೈದ್ಯ ಲಕ್ಷ್ಮೀನಾರಾಯಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಅಂದು ಎ.ಎಸ್.ಜಿ. ಕಣ್ಣಿನ ಆಸ್ಪತ್ರೆ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಕನ್ನಡಕ ವಿತರಣೆ, ಮಧುಮೇಹ, ಬಿ.ಪಿ. ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಮಾಜಿ ವೀರಯೋಧರು, ಮಹಿಳಾ ಆಟೋ ಚಾಲಕರು, ಮಹಿಳಾ ಪೌರ ಕಾರ್ಮಿಕರು ಹಾಗೂ ರೈತರನ್ನು ಸನ್ಮಾನಿಸಲಾಗುವುದು. ಜತೆಗೆ ವಿವಿಧ ಕ್ಷೇತ್ರದ ಸಾಧಕರಿಗೆ ಮಾನವ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಕಾರ್ಯಾಧ್ಯಕ್ಷ ತೇಜಸ್ ಪೃಥ್ವಿರಾಜ್, ಪವನ್ ಜೋಶಿ, ಮೌಲ್ಯ, ಹೇಮಲತಾ ಉಪಸ್ಥಿತರಿದ್ದರು.

ನಾಳೆ ಪ್ರತಿಭಾ ಪುರಸ್ಕಾರ

ಮೈಸೂರು, ಡಿ.8–ಮೈಸೂರಿನ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಡಿ.10ರಂದು ಸಂಜೆ 4 ಗಂಟೆಗೆ ಕಲಾಮಂದಿರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ. ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತ್ ಸ್ವಾಮಿ ಮಹಾಮೇಧಾನಂದ, ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅರ್ಜುನ ದುರಂತ ಸಾವು : ತಪ್ಪಿತಸ್ಥರ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಡಿ.8(ಜಿಎ)–ಹಾಸನದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಆನೆ ದಾಳಿಯಿಂದ ಮೃತಪಟ್ಟ ದಸರಾ ಆನೆ ಅರ್ಜುನನ ಸಾವಿನ ಕುರಿತು ತನಿಖೆ ನಡೆಸಿ ತಪ್ಪಿತಸ್ಥರನ್ನು ಅಮಾನತುಗೊಳಿಸುವಂತೆ ಒತ್ತಾಯಿಸಿ ಗಂಧದ ಗುಡಿ ಫೌಂಡೇಶನ್ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಹಾಸನದಲ್ಲಿ ನಡೆದ ಕಾಡಾನೆ ಸೆರೆ ಕಾರ್ಯಾಚರಣೆ ಸಂದರ್ಭದಲ್ಲಿ ದಸರಾ ಜಂಬೂಸವಾರಿಯಲ್ಲಿ 8 ಬಾರಿ ಅಂಬಾರಿ ಹೊತ್ತಿದ್ದ ಅರ್ಜುನ ಸಾವನ್ನಪ್ಪಲು ವೈದ್ಯಾಧಿಕಾರಿಗಳು, ಅರಣ್ಯ ಸಿಬ್ಬಂದಿ ನಿರ್ಲಕ್ಷ್ಯವೇ ಕಾರಣ. ಅಂದು ಅಧಿಕಾರಿಗಳು ಮುಂಜಾಗ್ರತೆ ವಹಿಸಿದ್ದರೆ ಇಂದು ನಾವು ಅರ್ಜುನನನ್ನು ಕಳೆದುಕೊಳ್ಳುತ್ತಿರಲಿಲ್ಲ. ಹೀಗಾಗಿ ಸರ್ಕಾರ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡು ಅರ್ಜುನನ ಸಾವಿಗೆ ನ್ಯಾಯ ಕೊಡಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಫೌಂಡೇಷನ್ ಅಧ್ಯಕ್ಷ ಆರ್ಯನ್ ಗಂಧದಗುಡಿ, ಉಪಾಧ್ಯಕ್ಷ ಮನೋಹರ್ ಗೌಡ, ಪದಾಧಿಕಾರಿಗಳಾದ ಮೇಘನ್, ಮಹದೇವ್ ಶೆಟ್ಟಿ, ಹೇಮಂತ್ ರಾವ್, ರತನ್ ಚಿಕ್ಕು, ಪ್ರದೀಪ್ ಬಲ್ಕ್, ಮಹೇಶ್ ಭೋವಿ, ಮರಿಗೌಡ್ರು, ಯಶೋಧ, ಮಧು ಮಾಲತಿ, ರಮೇಶ್, ಚೇತನ್ ಮತ್ತಿತರರು ಪಾಲ್ಗೊಂಡಿದರು.

ಬೈಕ್ ಚಕ್ರಕ್ಕೆ ಸೀರೆ ಸುತ್ತಿಕೊಂಡು ಕೆಳಗೆ ಬಿದ್ದು ಗೃಹಿಣಿ ಸಾವು

ತಿ.ನರಸೀಪುರ, ಡಿ. 8– ಚಲಿಸುತ್ತಿದ್ದ ಬೈಕ್ ಚಕ್ರಕ್ಕೆ ಸೀರೆ ಸುತ್ತಿಕೊಂಡ ಪರಿಣಾಮ ಕೆಳಗೆ ಬಿದ್ದು ಹಿಂಬದಿ ಸವಾರರಾಗಿದ್ದ ಗೃಹಿಣಿ ಸಾವನ್ನಪ್ಪಿರುವ ಘಟನೆ ತಿ.ನರಸೀಪುರ ತಾಲೂಕು ಆಲಗೂಡು ಗ್ರಾಮದ ಕೊಳ್ಳೇಗಾಲ–ತಿ.ನರಸೀಪುರ ರಸ್ತೆಯಲ್ಲಿ ಸಂಭವಿಸಿದೆ.

ಮಂಡ್ಯ ತಾಲೂಕು ಎಸ್.ಐ. ಕೋಡಿಹಳ್ಳಿ ಗ್ರಾಮದ ಕೇಶವ ಎಂಬುವರ ಪತ್ನಿ ಅಶ್ವಿನಿ ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಪತಿ ಮತ್ತು ಇಬ್ಬರು ಮಕ್ಕಳೊಂದಿಗೆ ಡಿ. 6ರಂದು ಸಂಜೆ 5.15ರ ಸುಮಾರಿನಲ್ಲಿ ಬೈಕ್‌ನಲ್ಲಿ ಮೂಗೂರಿನ ದೇವಸ್ಥಾನಕ್ಕೆ ತೆರಳಿ ಹಿಂತಿರುಗುತ್ತಿದ್ದರು. ಈ ವೇಳೆ ಪತಿ ಕೇಶವ ಚಲಿಸುತ್ತಿದ್ದ ಬೈಕ್‌ಗೆ (ಕೆಎ 11–ಇಇ 2362) ಹಿಂಬದಿ ಸವಾರರಾದ ಅಶ್ವಿನಿ ಅವರ ಸೀರೆ ಸುತ್ತಿಕೊಂಡ ಪರಿಣಾಮ ಬೈಕ್‌ನಿಂದ ಎಲ್ಲರೂ ಕೆಳಗೆ ಬಿದ್ದಿದ್ದಾರೆ. ತೀವ್ರವಾಗಿ ಗಾಯಗೊಂಡ ಅಶ್ವಿನಿ ಅವರನ್ನು ತಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಡಿ.8(ಜಿಎ)– ಚಿಕ್ಕಮಗಳೂರಿನಲ್ಲಿ ಪೊಲೀಸರು ಯುವ ವಕೀಲರೊಬ್ಬರ ಮೇಲೆ ನಡೆಸಿದ ಅಮಾನುಷ ಹಲ್ಲೆ, ಕಲಬುರಗಿಯಲ್ಲಿ ವಕೀಲರೊಬ್ಬರ ಹತ್ಯೆ ಖಂಡಿಸಿ, ವಕೀಲರ ಸಂರಕ್ಷಣಾ ಕಾಯಿದೆ ಜಾರಿಗೆ ತರುವಂತೆ ಒತ್ತಾಯಿಸಿ ಮೈಸೂರು ವಕೀಲರ ಸಂಘದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನ್ಯಾಯಾಲಯದ ಕಲಾಪದಿಂದ ದೂರ ಉಳಿದು ಬೀದಿಗಿಳಿದ ನೂರಾರು ವಕೀಲರು ನ್ಯಾಯಾಲಯದ ಎದುರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಎಂ.ಮಹದೇವ ಸ್ವಾಮಿ ಮಾತನಾಡಿ, ರಾಜ್ಯದಲ್ಲಿ ವಕೀಲರ ಮೇಲೆ ನಿರಂತರವಾಗಿ ಹಲ್ಲೆಗಳು ನಡೆಯುತ್ತಿದ್ದು, ವಕೀಲರುಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಚಿಕ್ಕಮಗಳೂರಿನಲ್ಲಿ ವಕೀಲರ ಮೇಲೆ ಪೊಲೀಸರು ಅಮಾನುಷವಾಗಿ ಹಲ್ಲೆ ನಡೆಸಿ ಅವಮಾನಿಸಿದ್ದಾರೆ. ಹಲ್ಲೆ ನಡೆಸಿದ ಪೊಲೀಸರನ್ನು ಸರ್ಕಾರ ಕೂಡಲೇ ಸೇವೆಯಿಂದ ವಜಾ ಮಾಡಬೇಕು. ಆಗಸ್ಟ್ ತಿಂಗಳಲ್ಲಿ ಮೈಸೂರಿನಲ್ಲಿ ನಡೆದ ವಕೀಲರ ಸಮ್ಮೇಳನದಲ್ಲಿ ಮುಖ್ಯಮಂತ್ರಿಯವರು ವಕೀಲರಿಗೆ ಭರವಸೆ ನೀಡಿದಂತೆ ಪ್ರಸಕ್ತ ಅಧಿವೇಶನದಲ್ಲಿ ವಕೀಲರ ಸಂರಕ್ಷಣಾ ಕಾಯಿದೆಯನ್ನು ಜಾರಿಗೆ ತರಬೇಕು ಎಂದು ಅವರು ಒತ್ತಾಯಿಸಿದರು.

ಚಿಕ್ಕಮಗಳೂರಿನ ವಕೀಲರ ಮೇಲೆ ಹಲ್ಲೆ ನಡೆಸಿದ ಪೊಲೀಸರ ವಿರುದ್ಧ ಭಾರತ ದಂಡ ಸಂಹಿತೆ ಕಲಂ, 506, 341, 307, 324, 326, 504 ಮತ್ತು 149 ರಡಿ ಪ್ರಕರಣ ದಾಖಲಾಗಿದ್ದರೂ ಸಂಬಂಧಪಟ್ಟ ವ್ಯಕ್ತಿಗಳನ್ನು ಆ ದಿನ ಬಂಧಿಸಿಲ್ಲ. ಜತೆಗೆ 2ನೇ "ಆರೋಪಿಯನ್ನು ಬಂಧಿಸಿ ಠಾಣೆಯಲ್ಲೇ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಕಲಂ 307ರಲ್ಲಿ ದಾಖಲಾದ ಪ್ರಕರಣಕ್ಕೆ ನ್ಯಾಯಾಲಯದ ಆದೇಶವಿಲ್ಲದೆ ಠಾಣಾ ಜಾಮೀನಿನ ಮೇಲೆ ಬಿಟ್ಟಿರುವುದು ಕಾನೂನು ಬಾಹಿರ ಅಲ್ಲದೇ ಪೊಲೀಸರು, ವಕೀಲರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ತೊಡೆತಟ್ಟಿ ಅವಹೇಳನ ಮಾಡಿದ್ದಾರೆ. ಇದರ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.

ಚಿಕ್ಕಮಗಳೂರು ಘಟನೆ ಸಂಬಂಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಮಂಗಳವಾರ ತೀರ್ಪು ಹೊರಬೀಳುವ ಸಾಧ್ಯತೆ ಇದ್ದು, ಬಳಿಕ ಮುಂದಿನ ಹೋರಾಟ ರೂಪಿಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್, ಖಜಾಂಚಿ ಎಚ್.ಎಸ್.ಮಹದೇವಸ್ವಾಮಿ, ಜಂಟಿ ಕಾರ್ಯದರ್ಶಿ ಜಿ.ಎಂ.ನಾಗೇಶ್, ಮಹಿಳಾ ಕಾರ್ಯದರ್ಶಿ ಬಿ.ಎಸ್.ಭಾಗ್ಯಮ್ಮ ಸೇರಿದಂತೆ ನೂರಾರು ವಕೀಲರು ಪಾಲ್ಗೊಂಡಿದರು.

ಮೈಸೂರು ಮಿತ್ರ ಶನಿವಾರ 9 ಡಿಸೆಂಬರ್ 2023

ನೊಂದ ಕುಟುಂಬಗಳಿಗೆ ಮನೆ ಒದಗಿಸಿ

ತಹಶೀಲ್ದಾರ್‌ಗೆ ಲೋಕಾಯುಕ್ತ ಡಿವೈಎಸ್‌ಪಿ ಪವನ್ ಕುಮಾರ್ ಸಲಹೆ



ಮಡಿಕೇರಿ, ಡಿ.8–ಕೊಡಗು ಜಿಲ್ಲೆಯಲ್ಲಿ 2018ರಲ್ಲಿ ಸಂಭವಿಸಿದ ಪ್ರಕೃತಿ ವಿಕೋಪಕ್ಕೆ ಸಿಲುಕಿದ ನೊಂದ ಕುಟುಂಬಗಳಿಗೆ ಇನ್ನೂ ಮನೆ ಕಲ್ಪಿಸಿಲ್ಲ ಎಂಬ ಬಗ್ಗೆ ದೂರುಗಳು ಬರುತ್ತಿದ್ದು, ಈ ಬಗ್ಗೆ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿ ಅರ್ಹರಿಗೆ ಮನೆ ಕೊಡಿಸಬೇಕು ಎಂದು ತಹಶೀಲ್ದಾರ್‌ಗೆ ಲೋಕಾಯುಕ್ತ ಡಿವೈಎಸ್‌ಪಿ ಪವನ್ ಕುಮಾರ್ ಸಲಹೆ ನೀಡಿದರು.

ನಗರದ ತಹಶೀಲ್ದಾರ್ ಕಚೇರಿಯಲ್ಲಿ ಶುಕ್ರವಾರ ಸಾರ್ವಜನಿಕರಿಂದ ದೂರು ಸ್ವೀಕರಿಸಿ ಮಾತನಾಡಿದ ಅವರು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ಗಮನಹರಿಸಬೇಕು. ಸಾರ್ವಜನಿಕರು ಸಲ್ಲಿಸುವ ಯಾವುದೇ ಅರ್ಜಿಗಳಿಗೆ ಸಕಾಲದಲ್ಲಿ ಸ್ಪಂದಿಸಬೇಕು ಎಂದು ತಿಳಿಸಿದರು.

ಕೆಲವು ಕಡೆಗಳಲ್ಲಿ ಭೂಮಿ ಒತ್ತುವರಿ ಮಾಡಿರುವ ಬಗ್ಗೆ ದೂರುಗಳು ಬರುತ್ತಿದ್ದು, ಈ ಬಗ್ಗೆ ಸರ್ವೇ ನಡೆಸಿ, ಸಾರ್ವಜನಿಕರ ದೂರುಗಳಿಗೆ ಪರಿಹರಿಸುವಂತಾಗಬೇಕು. ಈ ನಿಟ್ಟಿನಲ್ಲಿ ತಹಶೀಲ್ದಾರ್ ಮತ್ತು ತಾಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಸಮನ್ವಯತೆಯಿಂದ ಕಾರ್ಯನಿರ್ವಹಿಸಿದ್ದಲ್ಲಿ ಭೂ ಒತ್ತುವರಿ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಹೇಳಿದರು.

ಕೆಲವು ಕಡೆ ರಸ್ತೆ, ಮತ್ತೊಂದು ಕಡೆಗಳಲ್ಲಿ ಪಾರ್ಕಿಂಗ್ ಬಿಡಿಸಬೇಕು ಎಂದು ಭೂ ಒತ್ತುವರಿ ಬಗ್ಗೆ ದೂರುಗಳು ಬರುತ್ತಿವೆ. ಈ ಬಗ್ಗೆ ವಿಶೇಷವಾಗಿ ಗಮನಹರಿಸಬೇಕು. ದೂರುದಾರರು ಸಹ ಸರ್ಕಾರದ ಯಾವುದೇ ಕಚೇರಿಗಳಲ್ಲಿ ಕೆಲಸ ಆಗದಿದ್ದಲ್ಲಿ ನೇರವಾಗಿ ಕಚೇರಿಯ ಮುಖ್ಯಸ್ಥರನ್ನು ಭೇಟಿ ಮಾಡಬೇಕು. ಅದನ್ನು ಬಿಟ್ಟು ತಳ ಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಭೇಟಿಯಾಗಿ ಕಾಲಹರಣ ಮಾಡಬಾರದು ಎಂದು ಕಿವಿಮಾತು ಹೇಳಿದರು.

ಯಾವುದೇ ಸರ್ಕಾರಿ ಕಚೇರಿಯ ಮುಖ್ಯಸ್ಥರಲ್ಲಿ ಮನವಿ ಮಾಡಿದರೆ, ಕಾಲಮಿತಿಯಲ್ಲಿ ತಮ್ಮ ಮನವಿಗೆ ಸ್ಪಂದನೆ ದೊರೆಯಲಿದೆ. ಆ ನಿಟ್ಟಿನಲ್ಲಿ ಮುಖ್ಯಸ್ಥರನ್ನು ನೇರವಾಗಿ ಸಂಪರ್ಕಿಸು ವುದನ್ನು ಮನವಿದಾರರು ರೂಢಿಸಿಕೊಳ್ಳಬೇಕು ಎಂದರು.

ಇದೇ ವೇಳೆ ನಾಪಂಡ ತಿಮ್ಮಯ್ಯ ಅವರು, ಭೂಮಿಗೆ ಕಂದಾಯ ನಿಗದಿ ಮಾಡುವಂತೆ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಇದುವರೆಗೆ ಕಂದಾಯ ನಿಗದಿ ಮಾಡಿಲ್ಲ. ಆದರೆ, ಕೆಲ ಪ್ರಕರಣಗಳಲ್ಲಿ ಕುಟುಂಬಸ್ಥರ ಒಪ್ಪಿಗೆ ಇಲ್ಲದವರಿಗೂ ಕಂದಾಯ ನಿಗದಿ ಮಾಡಲಾಗಿದೆ ಎಂದು ಎಂದು ಲೋಕಾಯುಕ್ತ ಡಿವೈಎಸ್‌ಪಿ ಅವರ ಗಮನಕ್ಕೆ ತಂದರು.

ನಂತರ ಮಾತನಾಡಿದ ತಹಶೀಲ್ದಾರ್ ಪ್ರವೀಣ್ ಕುಮಾರ್, ಕುಟುಂಬಸ್ಥರಲ್ಲಿ ತಕರಾರು ಇರುವುದರಿಂದ ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ ತಕರಾರು ಸಲ್ಲಿಸಿರುವ ಕುಟುಂಬಸ್ಥರನ್ನು ಕರೆಸಿ ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಬಳಿಕ ಲೋಕಾಯಕ್ತ ಡಿವೈಎಸ್‌ಪಿ, ಜಿಲ್ಲಾಡಳಿತ, ಉಪವಿಭಾಗ ಹಾಗೂ ತಹಶೀಲ್ದಾರ್ ಹಂತದಲ್ಲಿ ಸರ್ವೇ ನಡೆಸಲು ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ಸರ್ವೇ ಮಾಡಲು ಅಡ್ಡಿಪಡಿಸಿದರೆ ಅಂತಹ ಸಂದರ್ಭದಲ್ಲಿ ಪೊಲೀಸ್ ಠಾಣೆಗೆ ದೂರು ನೀಡಬೇಕು. ಅಂತಹ ಸಂದರ್ಭದಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಅಧಿಕಾರಿಗಳು ತಮ್ಮ ಕರ್ತವ್ಯನಿರ್ವಹಿಸಲು ಮುಂದಾಗುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕ ವಿರೂಪಾಕ್ಷ ಅವರಿಗೆ ಸಲಹೆ ನೀಡಿದರು.

ಸರ್ಕಾರದ ಎಲ್ಲಾ ಇಲಾಖೆಯ ಅಧಿಕಾರಿಗಳು ಕಾನೂನನ್ನು ಪಾಲಿಸಿ, ಕರ್ತವ್ಯ ನಿರ್ವಹಿಸಬೇಕು. ನಿಯಮ ಬಿಟ್ಟು ಕರ್ತವ್ಯ ನಿರ್ವಹಿಸಿ ಎಂದು ಲೋಕಾಯುಕ್ತ ಸಂಸ್ಥೆ ಹೇಳುವುದಿಲ್ಲ. ಆ ನಿಟ್ಟಿನಲ್ಲಿ ಅಧಿಕಾರಿಗಳು ಕಾನೂನು ಪ್ರಕಾರ ಕರ್ತವ್ಯ ನಿರ್ವಹಿಸಬೇಕು ಎಂದು ಪವನ್ ಕುಮಾರ್ ತಿಳಿಸಿದರು. ಇದೇ ವೇಳೆ ತಾಪಂ ಇಓ ಶೇಖರ್, ಭೂ ದಾಖಲೆಗಳ ಸಹಾಯಕ ನಿರ್ದೇಶಕ ವಿರೂಪಾಕ್ಷ ಹಲವು ಮಾಹಿತಿ ನೀಡಿದರು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ದೋಷ ಸರಿಪಡಿಸದಿದ್ದಲ್ಲಿ ಕಾನೂನು ಹೋರಾಟ

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಎಚ್ಚರಿಕೆ



ಮಡಿಕೇರಿ, ಡಿ.8–ಸರ್ಕಾರಿ ದಾಖಲೆಗಳಲ್ಲಿ 'ಕೊಡವ' ಪದ ಬಳಕೆಯ ಕ್ರಮವನ್ನು ರಾಜ್ಯ ಗೆಜೆಟ್‌ನಲ್ಲಿ ಅಧಿಕೃತವಾಗಿ ನಮೂದಿಸುವಾಗ 'ಕೆ' ಆವೃತ್ತಿಯ 'ಕೊಡವ' ಪದವನ್ನು ಮಾತ್ರ ದಾಖಲಿಸಿ, 'ಸಿ' ಆವೃತ್ತಿಯ 'ಕೊಡವ' ಪದವನ್ನು ಉಲ್ಲೇಖಿಸಿಲ್ಲ. ಅರ್ಜಿದಾರ ಸಂಘಟನೆಯ ಹೆಸರನ್ನು ಕೊಡವ ನ್ಯಾಷನಲ್ ಕೌನ್ಸಿಲ್‌ಗೆ ಬದಲಾಗಿ 'ರಾಷ್ಟ್ರೀಯ ಕೊಡವ ಪರಿಷತ್ತು' ಎಂದು ವಿಕೃತಿಗೊಳಿಸಲಾಗಿದೆ. ಈ ದೋಷಗಳನ್ನು ಸರಿಪಡಿಸದಿದ್ದಲ್ಲಿ ಕಾನೂನು ಹೋರಾಟ ನಡೆಸುವುದಾಗಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಎಚ್ಚರಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡವ ನ್ಯಾಷನಲ್ ಕೌನ್ಸಿಲ್(ಸಿಎನ್‌ಸಿ) ಸಂಘಟನೆಯ 14 ವರ್ಷಗಳ ಸುದೀರ್ಘ ರಾಜಕೀಯ ಮತ್ತು ಕಾನೂನು ಹೋರಾಟದ ನಂತರ ಸರ್ಕಾರಿ ದಾಖಲೆಗಳಲ್ಲಿ ಕೊಡವ ಪದ ಬಳಕೆಯ ಕ್ರಮವನ್ನು ರಾಜ್ಯ ಗೆಜೆಟ್‌ನಲ್ಲಿ ನಮೂದಿಸಲಾಗಿದೆ. ಕೊಡವ ಹೆಗ್ಗುರುತನ್ನು ಶಾಸನಬದ್ಧವಾಗಿ ಅನುಮೋದಿಸುವ ಮತ್ತು ಎಲ್ಲಾ ಕ್ಷೇತ್ರದಲ್ಲಿ ಕೊಡವ ಅಸ್ತಿತ್ವವನ್ನು ಮರುಸ್ಥಾಪಿಸುವ ಪ್ರಕ್ರಿಯೆ ಸಿಎನ್‌ಸಿಯ ದೊಡ್ಡ ಸಾಧನೆಯಾಗಿದೆ. 'ಕೊಡಗರು' ಬದಲಿಗೆ ತನ್ನ ಶಾಸ್ತ್ರೀಯ ನಾಮಕರಣ 'ಕೊಡವ' ಎಂದು ಮರು ಸ್ಥಾಪಿಸುವಲ್ಲಿ ತೊಡಗಿಸಿಕೊಂಡ ಎಲ್ಲರಿಗೂ ಸಿಎನ್‌ಸಿ ಕೃತಜ್ಞತೆ ಸಲ್ಲಿಸುತ್ತದೆ ಎಂದರು.

ಸರ್ಕಾರದ ಈ ಕ್ರಮ ನಮಗೆ ಸಂತೋಷ ತಂದಿದೆ. ಆದರೆ, ಇದನ್ನು ಸಂಭ್ರಮಿಸಲಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಡಾ.ದ್ವಾರಕನಾಥ್ ಆಯೋಗದ ವರದಿ ಮತ್ತು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರ ಆದೇಶದ ಪ್ರಕಾರ, 'ಕೊಡವ' ನಾಮಕರಣ ರಾಜ್ಯ ಗೆಜೆಟ್‌ನಲ್ಲಿ ಅಧಿಕೃತವಾಗಿ ಪ್ರವೇಶಿಸಿತು. ಇದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಪ್ರಯತ್ನದ ಫಲವಾಗಿದೆ

ಸುದೀರ್ಘ ಹೋರಾಟದ ರೂವಾರಿ ಸಿಎನ್‌ಸಿ ಹೆಸರನ್ನು ಗೆಜೆಟ್‌ನಲ್ಲಿ ಅರ್ಥಹೀನಗೊಳಿಸಲಾಗಿದೆ. ಅರ್ಜಿದಾರ ಸಂಘಟನೆಯ ಹೆಸರನ್ನು 'ರಾಷ್ಟ್ರೀಯ ಕೊಡವ ಪರಿಷತ್ತು' ಎಂದು ಉಲ್ಲೇಖಿಸಿ ವಿಕೃತಗೊಳಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಾಂಡಂಡ ಅಪ್ಪಣ್ಣ ಸುಬ್ಬಯ್ಯ ನಿಧನ



ಸುಂಟಿಕೊಪ್ಪ, ಡಿ.8–ಸುಂಟಿಕೊಪ್ಪದ ನಾಕೂರು ಕಾನ್‌ಬೈಲ್ ನಿವಾಸಿಗಳಾದ ಕಾಫಿ ಬೆಳೆಗಾರ ಪಾಂಡಂಡ ಅಪ್ಪಣ್ಣ ಸುಬ್ಬಯ್ಯ (53) ಅವರು ಶುಕ್ರವಾರ ಸಂಜೆ ಹೃದಯಾಘಾತದಿಂದ ನಿಧನರಾದರು. ಇವರು ಪ್ರತಿಷ್ಠಿತ ಮೈಸೂರು ರೇಸ್ ಕ್ಲಬ್‌ನ ಸದಸ್ಯರಾಗಿದ್ದರು.

ಮೃತರು ಪತ್ನಿ ಯಾಶಿಕಾ, ಪುತ್ರ ನಂಜಪ್ಪ, ಪುತ್ರಿ ದೇಚಮ್ಮ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಶನಿವಾರ) ಮಡಿಕೇರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಪ್ಪಣ್ಣ ಸುಬ್ಬಯ್ಯ ಅವರ ನಿಧನಕ್ಕೆ ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಎಂ. ಚಂದ್ರೇಗೌಡ ಸೇರಿದಂತೆ ಆಡಳಿತ ಮಂಡಳಿ ಸಂತಾಪ ವ್ಯಕ್ತಪಡಿಸಿದೆ.

ಜಾಗೃತಿಯಿಂದ ಏಡ್ಸ್ ನಿಯಂತ್ರಣ ಸಾಧ್ಯ: ಡಾ.ಯತಿರಾಜ್



ವಿರಾಜಪೇಟೆ, ಡಿ.8– ಹೆಚ್ಚಾಗಿ ಏಡ್ಸ್ ಜಾಗೃತಿ ಮೂಡಿಸಿದಾಗ ಮಾತ್ರ ಹೆಚ್‌ಐವಿ ಸೋಂಕು ನಿಯಂತ್ರಿಸಲು ಸಾಧ್ಯ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಯತಿರಾಜ್ ಹೇಳಿದರು.

ನಗರದ ಸಂತ ಅನ್ನಮ್ಮ ಪದವಿ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ವಿರಾಜಪೇಟೆ ತಾಲೂಕು ಆರೋಗ್ಯ ಇಲಾಖೆ, ವಿರಾಜಪೇಟೆ ಸೆಂಟ್ ಆನ್ಸ್ ಪದವಿ ಕಾಲೇಜಿನ ಎನ್‌ಎಸ್‌ಎಸ್, ಯುವ ರೆಡ್‌ಕ್ರಾಸ್, ವೈಯುಕ್ತಿಕ ಕೌನ್ಸಿಲಿಂಗ್ ಘಟಕಗಳ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶ್ವ ಏಡ್ಸ್ ತಡೆ ದಿನಾಚರಣೆಯಲ್ಲಿ ಮಾತನಾಡಿದ ಅವರು, ಏಡ್ಸ್ ಒಂದು ಮಾರಕ ರೋಗ ಎನ್ನುವುದಕ್ಕಿಂತ ಅದರ ಕುರಿತು ಜಾಗೃತಿ ಅವಶ್ಯವಾಗಿದೆ. ಸರ್ಕಾರಿ ಆಸ್ಪತ್ರೆ ಐಸಿಟಿಸಿ ಘಟಕ ಮತ್ತು ಆರೋಗ್ಯ ಉಪಕೇಂದ್ರಗಳಲ್ಲಿ ಎಚ್‌ಐವಿ ಪರೀಕ್ಷಾ ಕೇಂದ್ರಗಳು ಸಾರ್ವಜನಿಕ ಜಾಗೃತಿ ಮೂಡಿಸುತ್ತಿವೆ ಎಂದು ತಿಳಿಸಿದರು.

ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಮೇಲ್ವಿಚಾರಕಿ ಸುನೀತಾ ಮುತ್ತಣ್ಣ ಮಾತನಾಡಿ, ವಿದ್ಯಾರ್ಥಿಗಳು ಏಡ್ಸ್ ಅರಿವು ಮೂಡಿಸುವ ಪ್ರಯತ್ನ ಸಮಾಜದಲ್ಲಿ ಆಗಬೇಕು. ಇಂದಿನ ಆಧುನಿಕ ಜೀವನದಲ್ಲಿ ಮೌಲ್ಯಗಳು ಅತೀ ಮುಖ್ಯವಾಗಿದ್ದು, ಪ್ರತಿಯೊಬ್ಬರು ಮೌಲ್ಯಯುತ ಜೀವನ ನಡೆಸುವಂತಾಗಬೇಕು ಹಾಗೂ ಏಡ್ಸ್ ನಿಯಂತ್ರಣ ಘಟಕದ ವತಿಯಿಂದ ಜಿಲ್ಲಾ, ತಾಲೂಕು ಮತ್ತು ಗ್ರಾಮ ಮಟ್ಟದಲ್ಲೂ ಸಮುದಾಯದ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ ಎಂದರು. ಸಂತ ಅನ್ನಮ್ಮ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರೆ.ಫಾ.ಮದಲೈ ಮುತ್ತು ಮಾತನಾಡಿ, ವಿದ್ಯಾರ್ಥಿಗಳು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಜೀವನದಲ್ಲಿ ಸಂಸ್ಕೃತಿಯನ್ನು ರಕ್ಷಿಸುವ ಜೊತೆಗೆ ಶಿಸ್ತನ್ನು ಅಳವಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಏಡ್ಸ್ ತಡೆ ಕುರಿತು ನಗರದ ಮುಖ್ಯ ಬೀದಿಯಲ್ಲಿ ವಿದ್ಯಾರ್ಥಿಗಳು ಜಾಗೃತಿ ಜಾಥಾ ನಡೆಸಿದರು. ಸಂತ ಅನ್ನಮ್ಮ ವಿದ್ಯಾಸಂಸ್ಥೆ ವ್ಯವಸ್ಥಾಪಕ ರೆ.ಫಾ.ಐಸಾಕ್ ರತ್ನಾಕರ್ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಂಶುಪಾಲೆ ತೃಪ್ತಿ ಬೋಪಣ್ಣ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂಎಸಿ ಸಂಚಾಲಕಿ ಹೇಮಾ, ಐಸಿಟಿಸಿ ಘಟಕದ ಆಪ್ತ ಸಮಾಲೋಚಕ ಚಿಟ್ಟಿಯಪ್ಪ, ಚಂದ್ರಶೇಖರ್, ರಂಗಮಣಿ, ಸೆಂಟ್ ಆನ್ಸ್ ಪದವಿ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಶಾಂತಿ ಭೂಷಣ್, ಯುವ ರೆಡ್‌ಕ್ರಾಸ್ ಅಧಿಕಾರಿ ವಿಲೀನ ಗೋನ್ಸಾಲ್ವೇಸ್, ಕೌನ್ಸಿಲಿಂಗ್ ಘಟಕದ ಸಂಯೋಜಕಿ ನಿರ್ಮಲಾ, ಉಪನ್ಯಾಸಕಿ ಪ್ರತಿಮಾ ರೈ, ಎನ್‌ಎಸ್‌ಎಸ್ ಘಟಕ ಮತ್ತು ಯುವ ರೆಡ್‌ಕ್ರಾಸ್ ಘಟಕದ ವಿದ್ಯಾರ್ಥಿಗಳು ಹಾಜರಿದ್ದರು.

ಕ್ಯಾಲ್ಸ್ ಶಾಲೆಯಲ್ಲಿ ಕಲಾರ್ಪಣ್

ಗೋಣಿಕೊಪ್ಪ, ಡಿ.8–ಇಲ್ಲಿನ ಕ್ಯಾಲ್ಸ್ ಶಾಲೆಯಲ್ಲಿ ಕಲಾರ್ಪಣ್ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಂಸ್ಕೃತಿ ಕಲಾ ಪ್ರದರ್ಶಿಸಿದರು. ನೃತ್ಯ, ಕಿರುನಾಟಕ, ನಾದಪ್ರಿಯ, ವೇದ ಪ್ರಿಯ, ನಟರಾಜ ಕಲೆಗಳು ಮೂಡಿ ಬಂದವು. ದೀಪಾಲಂಕಾರದ ಮೂಲಕ ವಿದ್ಯಾರ್ಥಿಗಳು ವಿಶೇಷತೆ ಮೂಡಿಸಿದರು. ಶಾಸ್ತ್ರೀಯ, ಜನಪದ, ಲಘು ಸಂಗೀತ, ವಾದ್ಯಗೋಷ್ಠಿ ಪ್ರಸ್ತುತ ಪಡಿಸಿದರು. ನಂತರ ಪಠ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಮಕ್ಕಳ ಶೈಕ್ಷಣಿಕ ಮತ್ತು ಸಾಮಾಜಿಕ ಪ್ರಗತಿಗೆ ಪಾಲಕರ ಪಾತ್ರ ಮಹತ್ವವಾಗಿದೆ. ಮಕ್ಕಳ ಪ್ರತಿಭೆಗೆ ಪಾಲಕರಿಂದ ಬೆಂಬಲ ದೊರೆಯಬೇಕಿದೆ. ಇದರಿಂದ ಅವರು ಉತ್ತಮ ಪ್ರಜೆಯಾಗಳಾಗಿ ರೂಪಿಸಬಹುದು ಎಂದರು. ಶಾಲೆ ಸಂಸ್ಥಾಪಕ ದತ್ತ ಕರುಂಬಯ್ಯ, ನಿರ್ದೇಶಕಿ ಅಶ್ವಿನಿ ನಾಚಪ್ಪ, ಪ್ರಾಂಶುಪಾಲ ಗೌರಮ್ಮ ನಂಜಪ್ಪ ಇದ್ದರು.

ನಾಪೋಕ್ಲು ವ್ಯಾಪ್ತಿಯಲ್ಲಿ ದಿಢೀರ್ ಮಳೆ

ನಾಪೋಕ್ಲು, ಡಿ.8–ನಾಪೋಕ್ಲು ವ್ಯಾಪ್ತಿಯಲ್ಲಿ ಶುಕ್ರವಾರ ಸಂಜೆ ದಿಢೀರ್ ಮಳೆಯಾಗಿದ್ದು, ಇದರಿಂದ ಕಾಫಿ ಕೊಯ್ಲುವಿಗೆ ಅಡ್ಡಿಯಾಗುವ ಆತಂಕವಾಗಿದೆ. ಎರಡು ದಿನಗಳಿಂದ ಮೋಡ ಕವಿದ ವಾತಾವರಣವಿದ್ದು, ಶುಕ್ರವಾರ ಸಂಜೆ ಮಳೆ ಆರಂಭಗೊಂಡಿತು. ಪಟ್ಟಣ ಸೇರಿದಂತೆ ಸುತ್ತಮುತ್ತಲ ಭಾಗಗಳಲ್ಲಿ ಉತ್ತಮ ಮಳೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಾಫಿ ಕೊಯ್ಲು ಆರಂಭಗೊಂಡಿದ್ದು, ಮಳೆಯಿಂದಾಗಿ ಬೆಳೆಗಾರರು ಆತಂಕಕ್ಕೆ ಒಳಗಾದರು.

ವಿವಿಧೆಡೆ ಅರೇಬಿಕಾ ಕಾಫಿ ಬೆಳೆಯನ್ನು ಕೊಯ್ಲು ಮಾಡಲಾಗಿದ್ದು, ಒಕ್ಕಣೆಗೆ ಕಣದಲ್ಲಿ ಹರಡಲಾಗಿತ್ತು. ಬಿಸಿಲಿನ ತಾಪವೂ ಇಲ್ಲದೆ ಕಾಫಿಯನ್ನು ಒಣಗಿಸುವುದು ಕಷ್ಟಕರವಾಗಿದ್ದ ಸಂದರ್ಭದಲ್ಲಿ ಮಳೆ ಸುರಿದು ರೈತರನ್ನು ಮತ್ತಷ್ಟು ಆತಂಕಕ್ಕೆ ದೂಡಿದೆ. ಈ ಭಾಗದಲ್ಲಿ ಭತ್ತದ ಕೃಷಿ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದ್ದು, ಕೆಲವೇ ರೈತರು ಅಲ್ಲಲ್ಲಿ ಭತ್ತದ ಕೃಷಿಯಲ್ಲಿ ತೊಡಗಿದ್ದಾರೆ. ಮಳೆಯಿಂದ ಭತ್ತದ ಇಳುವರಿಗೆ ಹಾನಿಯಾಗಿದೆ. ಕೊಯ್ಲು ಮಾಡಿರುವ ಭತ್ತ ಮಳೆಯಿಂದ ನೆನೆದು ಹೋಗಿವೆ.

ಪೊಲೀಸ್ ಠಾಣೆ ಎದುರು ಗ್ರಾಮಸ್ಥರ ಪ್ರತಿಭಟನೆ



ಯಳಂದೂರು, ಡಿ.8– ತಾಲೂಕಿನ ವೈಕೆ.ಮೋಳೆ ಗ್ರಾಮದ ಪರಿಶಿಷ್ಟ ಜಾತಿಯ ಬಡಾವಣೆಯಲ್ಲಿ ಅಂಬೇಡ್ಕರ್ ಸಮುದಾಯ ಭವನದ ನಿರ್ಮಾಣ ಕಾಮಗಾರಿಗೆ ವಿನಾಕಾರಣ ಪೊಲೀಸರು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು, ಗುರುವಾರ ರಾತ್ರಿ ಪಟ್ಟಣ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಬಡಾವಣೆಯಲ್ಲಿ 37 ಲಕ್ಷ ರೂ. ವೆಚ್ಚದಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಿಸಲಾಗುತ್ತಿದೆ. ಆದರೆ, ಇದೇ ಗ್ರಾಮದ ಮಹದೇವಶೆಟ್ಟಿ, ದೊಡ್ಡಪುಟ್ಟ ಎಂಬುವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದೇವೆ. ಈ ಕಾಮಗಾರಿಯನ್ನು ನಿಲ್ಲಿಸಿ ಎಂದು ಪೊಲೀಸರ ಮೊರೆ ಹೋಗಿದ್ದಾರೆ. ಇದರಿಂದ ಪೊಲೀಸರು ಪದೇ ಪದೆ ಬಂದು ಕಾಮಗಾರಿ ತಡೆಯುತ್ತಿದ್ದಾರೆ. ಹಾಗಾಗಿ ಕಾಮಗಾರಿ ವಿಳಂಬವಾಗುತ್ತಿದೆ. ತಡೆಯಾಜ್ಞೆ ಹಾಗೂ ಕಾಮಗಾರಿಗೆ ಯಾವುದೇ ಸಂಬಂಧವಿಲ್ಲ. ಈ ಬಗ್ಗೆ ಸರ್ವೇ ನಡೆಸಿ, ಸಮುದಾಯ ಭವನ ನಿರ್ಮಿಸುತ್ತಿದ್ದರೂ ವಿನಾಕಾರಣ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿದರು.

ಟವರ್ ಕಾಮಗಾರಿ ಕೈಬಿಡಿ: ಗ್ರಾಮದ ಮುಖ್ಯ ರಸ್ತೆಯಲ್ಲಿ ಖಾಸಗಿ ಮೊಬೈಲ್ ಕಂಪನಿಯವರು ಟವರ್ ನಿರ್ಮಿಸುತ್ತಿದ್ದಾರೆ. ಇದು ಗ್ರಾಮದ ನಡುವೆಯೇ ಇದ್ದು, ಮಕ್ಕಳು, ವೃದ್ಧರು, ಮತ್ತು ಹಕ್ಕಿಪಕ್ಷಿ ಸೇರಿದಂತೆ ಜೀವಸಂಕುಲಕ್ಕೆ ವಿಕಿರಣ ಸೋರಿಕೆ ಯಿಂದ ಮಾರಕವಾಗಿ ಪರಿಣಮಿಸುವ ಸಂಭವವಿದೆ. ಹಾಗಾಗಿ ಈ ಕಾಮಗಾರಿಯನ್ನು ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಸಿಪಿಐ ಶಿವರಾಜ್ ಮುಧೋಳ್ ಹಾಗೂ ಪಿಎಸ್‌ಐ ಚಂದ್ರಹಾಸ್ ನಾಯಕ್ ಮಾತನಾಡಿ, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ, ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿ ಹಾಗೂ ಮೊಬೈಲ್ ಟವರ್‌ನ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಬಳಿಕ ಪ್ರತಿಭಟನೆಯನ್ನು ಹಿಂಪಡೆಯಲಾಯಿತು. ಗ್ರಾಮದ ಮುಖಂಡರಾದ ಎನ್.ಬುಲೆಟ್ ಸಿದ್ದರಾಜು, ಎಂ.ಮಂಜುನಾಥ್, ಡಿ.ದೊರೆಸ್ವಾಮಿ, ವಿ.ಮಹೇಶ್, ರಂಗಸ್ವಾಮಿ, ಕೃಷ್ಣಯ್ಯ, ಮಲ್ಲಯ್ಯ, ನಂಜುಂಡಸ್ವಾಮಿ, ಟಿ.ಮಹದೇವಸ್ವಾಮಿ, ಬಸವರಾಜು, ರಂಗ ಇತರರು ಹಾಜರಿದ್ದರು

ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಪೂರೈಸಿ

ಜನಸಂಪರ್ಕ ಸಭೆಯಲ್ಲಿ ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಸೋಮಶೇಖರ್ ಸೂಚನೆ



ಚಾಮರಾಜನಗರ ಡಿ.8–ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವ ಮೂಲಕ ದೂರು ಬರದಂತೆ ಕ್ರಮ ವಹಿಸಿ, ಕಮರ್ಷಿಯಲ್ ವಿದ್ಯುತ್ ಸಂಪರ್ಕ ಹೊಂದಿರುವವರಿಗೆ ಸಮರ್ಪಕ ಹಾಗೂ ನಿಯಮಿತವಾಗಿ ವಿದ್ಯುತ್ ನೀಡುವಂತೆ ಚಾಮರಾಜನಗರ–ಕೊಡಗು ಸೆಸ್ಕ್ ವೃತ್ತ ಅಧೀಕ್ಷಕ ಇಂಜಿನಿಯರ್ ಎಂ.ಕೆ.ಸೋಮಶೇಖರ್ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನ ಹರದನಹಳ್ಳಿ ಉಪವಿಭಾಗದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ನಡೆದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರ ದೂರುಗಳನ್ನು ಆಲಿಸಿ ಮಾತನಾಡಿದ ಅವರು, ಬೇಸಿಗೆ ಕಾಲ ಸಮೀಪಿಸುತ್ತಿದೆ. ರೈತರ ಕೃಷಿ ಪಂಪ್‌ಸೆಟ್‌ಗಳು, ಕೈಗಾರಿಕೆಗಳು, ಸಣ್ಣಕೈಗಾರಿಕೆಗಳು ಹಾಗೂ ವ್ಯಾಪಾರಸ್ಥರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಲು ಸಿಬ್ಬಂದಿ ಕ್ರಮ ವಹಿಸಬೇಕು. ವಿದ್ಯುತ್ ಸಮಸ್ಯೆಗಳು ಕಂಡಬಂದ ತಕ್ಷಣ ಸ್ಪಂದಿಸಿ, ಸರಿಪಡಿಸುವ ಮೂಲಕ ಅವಘಡಗಳನ್ನು ತಪ್ಪಿಸಬೇಕು. ಯಾವುದೇ ದೂರನ್ನು ನಿರ್ಲಕ್ಷ್ಯ ಮಾಡಬೇಡಿ. ಸಿಬ್ಬಂದಿ 24x7 ಮಾದರಿಯಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದರು.

ವಿಭಾಗದ ವ್ಯಾಪ್ತಿಯಲ್ಲಿ ಜೋತು ಬಿದ್ದಿರುವ ಹಾಗೂ ಶಿಥಿಲಗೊಂಡಿರುವ ವಿದ್ಯುತ್ ತಂತಿಗಳನ್ನು ಬದಲಾಯಿಸಿ ಹೊಸ ಲೈನ್‌ಗಳನ್ನು ಅಳವಡಿಸಲು ಕ್ರಮ ವಹಿಸಬೇಕು. ಅಲ್ಲದೇ ವಿದ್ಯುತ್ ಕಂಬ, ಟಿಸಿ ಹಾಗೂ ಇತರೇ ಲೈನ್‌ಗಳನ್ನು ಬೆಳೆದಿರುವ ಜಂಗಲ್ ಹಾಗೂ ಬಳ್ಳಿಗಳನ್ನು ತೆರವುಗೊಳಿಸಿ, ಅಡಚಣೆಯಾಗದಂತೆ ವಿದ್ಯುತ್ ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಹರವೆ ಗ್ರಾಮದ ಮಂಜುನಾಥ್ ದೂರು ನೀಡಿ, ನಮ್ಮ ಕ್ರಷರ್ ವ್ಯಾಪ್ತಿ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ಸಂಜೆ ವೇಳೆ ಕರೆಂಟ್ ಹೋದರೆ ಬೆಳಗಿನವರೆಗೂ ವಿದ್ಯುತ್ ಸರಬರಾಜು ಆಗುತ್ತಿಲ್ಲ. ಇದರಿಂದ ಕ್ರಷರ್‌ನಿಂದ ಕಟ್ಟಡಗಳ ಉತ್ಪನ್ನಗಳಿಗೆ ತೊಂದರೆಯಾಗುತ್ತಿದೆ. ಸರಿಯಾಗಿ ಬಿಲ್ ಪಾವತಿಸಿದರೂ ವಿದ್ಯುತ್ ವ್ಯತ್ಯಯವಾಗುತ್ತಿದೆ ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಇಂಜಿನಿಯರ್, ಕೂಡಲೇ ಕ್ರಮ ವಹಿಸಬೇಕೆಂದು ಶಾಖಾ ಇಂಜನಿಯರ್‌ಗೆ ಸೂಚಿಸಿದರು. ಅಟ್ಟುಗುಳಿಪುರ ಗ್ರಾಮದ ತಂಗವೇಲು ಮಾತನಾಡಿ, ನಾನು ಕ್ರಯಕ್ಕೆ ಪಡೆದಿರುವ ಮನೆಗೆ ಭಾಗ್ಯಜ್ಯೋತಿ ಕಲ್ಪಿಸಲಾಗಿದೆ. ಈಗ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡಲು ಅನೇಕ ಭಾರಿ ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್, ಸರ್ಕಾರ ಗೃಹಜ್ಯೋತಿ ಜಾರಿಗೆ ತಂದಿದ್ದು, ಹಾಲಿ ಇರುವ ಸಂಪರ್ಕ ಕಡಿತಗೊಳಿಸಿ ಹೊಸ ಸಂಪರ್ಕ ಪಡೆಯುವಂತೆ ಸಲಹೆ ನೀಡಿದರು. ಮುತ್ತುರಾಜು ಮಾತನಾಡಿ, ವಿದ್ಯುತ್ ಕಂಬಗಳನ್ನು ಸೂಕ್ತ ರೀತಿಯಲ್ಲಿ ಅಳವಡಿಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದ್ರುಪದ್, ಹರದನಹಳ್ಳಿ ಶಾಖಾಧಿಕಾರಿಗಳಾದ ಎನ್.ವಸಂತ್ ಕುಮಾರ್, ನವೀನ್, ಸತೀಶ್, ಕಂದಾಯ ಹಿರಿಯ ಸಹಾಯಕ ಮಹದೇವಸ್ವಾಮಿ ಇತರರು ಇದ್ದರು.

ಮೆಟ್ಟಿಲುಗಳ ಕಾಮಗಾರಿ ಪರಿಶೀಲನೆ



ಹನೂರು, ಡಿ.8– ಶ್ರೀಕ್ಷೇತ್ರ ಮಲೆ ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟದವರೆಗೆ ನಿರ್ಮಾಣ ಮಾಡುತ್ತಿರುವ ಪಾದಯಾತ್ರಿಗಳ ಮೆಟ್ಟಿಲುಗಳ ಕಾಮಗಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಶುಕ್ರವಾರ ಪರಿಶೀಲಿಸಿದರು.

ಸುಮಾರು 22 ಕೋಟಿ ರೂ. ವೆಚ್ಚದಲ್ಲಿ ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟದವರೆಗೆ ಏಳುವರೆ ಕಿಲೋಮೀಟರ್ ಮೆಟ್ಟಿಲುಗಳ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿ ಸುಮಾರು ಎರಡು ವರ್ಷ ಕಳೆದಿದೆ. ಆದರೆ, ಗುತ್ತಿಗೆದಾರರು ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಸಮನ್ವಯ ಕೊರತೆಯಿಂದ ಕಾಮಗಾರಿ ಕುಂಠಿತವಾಗಿತ್ತು. ಇದರಿಂದ ಪ್ರಾಧಿಕಾರದ ವತಿಯಿಂದ ನಿರ್ಮಿಸುತ್ತಿರುವ ಮೆಟ್ಟಿಲು ಕಾಮಗಾರಿಯಿಂದ ಪಾದಯಾತ್ರೆಗಳಿಗೆ ಯಾವುದೇ ಅನುಕೂಲವಾಗಿರಲಿಲ್ಲ. ಈ ಸಂಬಂಧ ಯಾತ್ರಿಕರು ಮಲೆ ಮಹದೇಶ್ವರಬೆಟ್ಟದ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿಗೆ ಶೀಘ್ರವಾಗಿ ಮೆಟ್ಟಿಲು ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಹಲವಾರು ಬಾರಿ ಮನವಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಖುದ್ದು ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗಳೊಂದಿಗೆ ಚರ್ಚಿಸಿ, ಮೂರು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಇದೇ ವೇಳೆ ಗುತ್ತಿಗೆದಾರ ಸತ್ಯ ಮಾತನಾಡಿ, ಇನ್ನು ಮೂರು ತಿಂಗಳೊಳಗೆ ಮೆಟ್ಟಿಲುಗಳ ಕಾಮಗಾರಿಯನ್ನು ಪೂರ್ಣಗೊಳಿಸಿ ಪಾದಯಾತ್ರಿಕರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ತಿಳಿಸಿದರು. ಲೋಕೋಪಯೋಗಿ ಇಲಾಖೆಯ ಎಇ ಸಂತೋಷ್, ಪ್ರಾಧಿಕಾರದ ಇಂಜಿನಿಯರ್ ಸೆಲ್ವರಾಜ್ ಇನ್ನಿತರರು ಹಾಜರಿದ್ದರು.

ಅರ್ಜುನನ ಸಾವಿನ ಸಮಗ್ರ ತನಿಖೆಗೆ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರ, ಡಿ.8–ಮೈಸೂರು ದಸರಾ ಅರ್ಜುನ ಆನೆ ಸಾವಿನ ಪ್ರಕರಣವನ್ನು ಸಮಗ್ರ ತನಿಖೆ ನಡೆಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದ ಪ್ರತಿಭಟನೆ ನಡೆಸಲಾಯಿತು.

ನಗರದ ಸುಲ್ತಾನ್ ಷರೀಫ್ ವೃತ್ತದ ಬಳಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಎದುರು ಸೇನಾ ಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಹಾಸನ ವಲಯ ಅರಣ್ಯಾಧಿಕಾರಿಗಳು ಹಾಗೂ ಅರಣ್ಯ ಸಚಿವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯ ಸಹಾಯಕ ಪರಮೇಶ್ವರ ಅವರಿಗೆ ಮನವಿ ಸಲ್ಲಿಸಿದರು.

ಹಾಸನ ವಲಯ ಅರಣ್ಯಾಧಿಕಾರಿ ಬೇಜಾಬ್ದಾರಿತನದಿಂದ ಪುಂಡಾನೆಯನ್ನು ಸೆರೆ ಹಿಡಿಯಲು ಹೋದ ಅರ್ಜುನನ ಮೇಲೆ ಗುಂಡು ಹಾರಿಸಿದ ಪರಿಣಾಮದಿಂದ ಮೃತಪಟ್ಟಿದೆ ಎಂಬ ಸಂಶಯ ವ್ಯಕ್ತವಾಗಿದ್ದರೂ ಮರಣೋತ್ತರ ಪರೀಕ್ಷೆಯನ್ನು ಸರಿಯಾಗಿ ಮಾಡದೆ ತರಾತುರಿಯಲ್ಲಿ ಅಂತ್ಯಸಂಸ್ಕಾರ ಮಾಡಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿರುವುದರಿಂದ ಸರ್ಕಾರ ಈ ದುರ್ಘಟನೆಯನ್ನು ಗಂಭೀರವಾಗಿ ತೆಗೆದುಕೊಂಡು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದ ಹುಂಡಿ ರಾಜು, ಗು.ಪುರುಷೋತ್ತಮ್, ಮಹೇಶ್‌ಗೌಡ, ಚಾ.ವೆಂ.ರಾಜ್ ಗೋಪಾಲ್, ಚಾ.ಹ.ರಾಮು, ವೀರಭದ್ರ, ರಾಚಪ್ಪ, ಲಿಂಗರಾಜು, ಪ್ರಕಾಶ್, ಮಂಜು ಇತರರು ಭಾಗವಹಿಸಿದ್ದರು.



ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಗುಂಡ್ಲುಪೇಟೆ ಮಲ್ಲೇಶ್ ಅವರನ್ನು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹಾಗೂ ಸ್ನೇಹಿತರು ಸನ್ಮಾನಿಸಿದರು. ಬಿಜೆಪಿ ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯಸುಂದರ್, ಮುಖಂಡರಾದ ಚಂದಕವಾಡಿ ಕಪಿನಿ ನಾಯಕ, ಆರ್.ಸುಂದರ್, ಲಿಂಗರಾಜು, ವೇಣು ಗೋಪಾಲ್, ಮಲ್ಲರಾಜು, ಶಿವಕುಮಾರ್, ಮಹದೇವನಾಯಕ, ಗೋಪಾಲ್ ಇದ್ದರು.

ನಾಳೆ ಆರ್ಯ ಈಡಿಗ ಸಮಾವೇಶ



ಬೇಗೂರು(ಗುಂಡ್ಲುಪೇಟೆ), ಡಿ.8– ಬೆಂಗಳೂರಿನ ಅರಮನೆ ಮೈದಾನದಲ್ಲಿ ಡಿ.10ರಂದು ಹಮ್ಮಿಕೊಂಡಿರುವ ಬೃಹತ್ ಜಾಗೃತಿ ಸಮಾವೇಶಕ್ಕೆ ತಾಲೂಕಿನಿಂದ ಸುಮಾರು 250ಕ್ಕೂ ಹೆಚ್ಚು ಮಂದಿ ತೆರಳಲಿದ್ದಾರೆ ಎಂದು ಗುಂಡ್ಲುಪೇಟೆ ತಾಲೂಕಿನ ರೇಣುಕಾಂಬ ಆರ್ಯ ಈಡಿಗ ಸಂಘದ ಅಧ್ಯಕ್ಷ ಗೋಪಾಲ ಸ್ವಾಮಿ ತಿಳಿಸಿದರು.

ಬೇಗೂರು ಗ್ರಾಮದ ಆರ್ಯ ಈಡಿಗ ಸಮುದಾಯ ಭವನದ ಆವರಣದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಆರ್ಯ ಈಡಿಗ ಸಂಘ ಸ್ಥಾಪನೆಯಾಗಿ ಸುಮಾರು 78 ವರ್ಷ ತುಂಬಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಡಿ.10 ರಂದು ಅಮೃತ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದರು. ಅನೇಕ ಹೆಸರುಗಳಿಂದ ಸುಮಾರು 25 ಈಡಿಗ ಉಪಪಂಗಡಗಳನ್ನೊಳಗೊಂಡ ಎಲ್ಲರನ್ನು ಒಟ್ಟುಗೂಡಿಸುವುದು ಸಮಾವೇಶದ ಉದ್ದೇಶವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಈಡಿಗ ಜನಾಂಗದ ರಾಜಕೀಯ ಮುಖಂಡರು, ಚಿತ್ರ ನಟರು, ಈಡಿಗ ಸಂಘಟನೆಗಳು ಭಾಗವಹಿಸಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಪಿ.ಚಂದ್ರು, ಮುಖಂಡರಾದ ಲೋಕೇಶ್, ಕೇಬಲ್ ಶ್ರೀನಿವಾಸ್, ವೆಂಕಟೇಶ್, ಬೆಟ್ಟದಮಾದಹಳ್ಳಿ ನಂಜುಂಡಸ್ವಾಮಿ ಹಾಜರಿದ್ದರು.

ಚಿನ್ನಸ್ವಾಮಿ ನಿಧನ



ಚಾಮರಾಜನಗರ, ಡಿ.8– ಪಿಎಲ್‌ಡಿ ಬ್ಯಾಂಕ್ ನಿವೃತ್ತ ನೌಕರ, ಬಸವೇಶ್ವರ ಪತ್ತಿನ ಸಹಕಾರ ಸಂಘದ ನಿಕಟಪೂರ್ವ ನಿರ್ದೇಶಕ ಹಾಗೂ ನಗರದ ಪಚ್ಚಪ್ಪ ಲೇಔಟ್ ನಿವಾಸಿ ಚಿನ್ನಸ್ವಾಮಿ (80) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ. ರಾಮಸಮುದ್ರದ ಜಮೀನಿನಲ್ಲಿ ಶುಕ್ರವಾರ ಸಂಜೆ ನೆರವೇರಿಸಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಮೊದಲನೇ ಮಹಡಿಯಲ್ಲಿ 1250 ಚದರಡಿ
ಕಮರ್ಷಿಯಲ್ ಜಾಗ ಬಾಡಿಗೆಗೆ ಇದೆ
ಅಪೋಲೋ ಆಸ್ಪತ್ರೆ ಎದುರು. ಕುವೆಂಪುನಗರ, ಮೈಸೂರು.
9845018239

WANTED SITE
30x40 or 40x60 in Ramakrishna Nagara or Sharadadevi Nagara Dattagalli with clear title.
Contact: 9663761853

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್‌ನಿಂದ ಸಿದ್ದಾಪುರ ಮಡಿಕೇರಿ ಮೈನ್ ರೋಡ್‌ಗೆ ಹೊಂದಿಕೊಂಡಂತೆ ಟೌನ್ ನಿಂದ 2 ಕಿ.ಮೀ ಅಂತರದಲ್ಲಿ 2 ಎಕರೆ ಕಮರ್ಷಿಯಲ್ ಸ್ವತ್ತು ತಕ್ಷಣದಲ್ಲಿ ಮಾರಾಟಕ್ಕೆ ಲಭ್ಯವಿದೆ. (ಬಹುಪಯೋಗಿ) ಸಂಪರ್ಕಿಸಿ:
9611881603

ಹೊಸ ಮನೆ ಮಾರಾಟಕ್ಕಿದೆ
20x30
ನಾರ್ತ್ ಫೇಸ್ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್, ಸಾತಗಳ್ಳಿ 'ಬಿ' ಜೋನ್ ಮೈಸೂರು
9535184616

CCTV
* HD CAMERA
* WIRELESS CAMERA
* 4G SIM CAMERAS
* SOLAR CAMERA
* 360 ROTATION CAMERA
* IP CAMERA

All type cameras available. Price start @ only Rs. 1900
Call: 7348977948

Wanted sales boys and sales girls for medical stores
Qualification any degree send your resume to Sri murugan panacea Chamundipuram, Mysore
9901203215

WANTED
Science, English, Maths, Hindi and Social Science teaching staff for reputed institution.
Send your resume through WhatsApp/Message.
8971577685, 9980631121

ಟೀಮ್ ಲೀಡರ್ ಬೇಕಾಗಿದ್ದಾರೆ
(ಸಂಬಳ * 13000)
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ ಮಾತನಾಡಬಲ್ಲವರು)
ಸ್ಥಳ - ಚಾಮುಂಡಿಪುರಂ ಮತ್ತು ಎನ್.ಆರ್. ಮೊಹಲ್ಲಾ
ಸಂಬಳ - 8000 ರಿಂದ -11000 ರವರೆಗೆ
ಮೊಬೈಲ್: 8150005111

ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡ ನಗರ ಹಾಗೂ ಲಲಿತಾದ್ರಿ ನಗರಗಳಲ್ಲಿ ಸೈಟುಗಳು ಬೇಕಾಗಿದೆ.
20x30, 30x40
Mob: 9731204530

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 30 ರಿಂದ 48 ರವರೆಗೆ ಮೇಟಗಳ್ಳಿ, ಬೆಳಕವಾಡಿ, ಜೆ.ಪಿ.ನಗರ, ಬೋಗಾದಿ ಹಾಗೂ ಹಡುವಾರಹಳ್ಳಿ ಮೈಸೂರಿನ ಸುತ್ತಮುತ್ತ ಇರುವ ಪ್ರದೇಶಗಳಿಗೆ.
9538886305
9538886328

SITES FOR SALE
30 x 40 - 33 Lakhs,
20 x 40 - 22 Lakhs,
near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

HOUSE FOR LEASE
2BHK House, Ground Floor East Face Semi Furnished with Solar & UPS @ JP Nagar Ring Road (Outer)
9880290857

ಸುವರ್ಣ ಯುತ್ರಾ ಪ್ಯಾಕೇಜ್
1) 25/12/2023-ಪೂರಿ ಜಗನ್ನಾಥ ಪ್ರವಾಸ, 4 ದಿನಗಳು ,ಕೊನಾರ್ಕ್ ಲಿಂಗರಾಜ್ ಟೆಂಪಲ್.
2) 04/01/2024 - ಮಧ್ಯ ಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ, 4 ದಿನಗಳು, ಮಹಾಕಾಳೇಶ್ವರ ಓಂಕಾರೇಶ್ವರ ಮಾಂಡವ್ ಮಹೇಶ್ವರ್ ಇಂದೋರ್.
ಕರೆ ಮಾಡಬೇಕಾದ ನಂಬರ್
Mob: 90083-81022 / 94808-43945 / 90194-62508

ತಕ್ಷಣ ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ವಯೋಮಿತಿ : 18 ರಿಂದ 35ರ ಒಳಗೆ
ವಿದ್ಯಾರ್ಹತೆ: SSLC ಮೇಲ್ಪಟ್ಟು
ಉಚಿತ: ತಿಂಡಿ, ಊಟ
ವೇತನ: 15600(ESI+PF) & Bonus
ಸ್ಥಳ : ಆಲನಹಳ್ಳಿ Bus Stop, Mysore
8073429574, 9538886328
9035269781, 0821-4852002

SITE FOR SALE
Muda Approved Sharada Nagar Railway Layout, Bogadi Near Hari Vidyalaya
30 x 40 West facing
Contact: 9886653258

ಮನೆಯಿಂದಲೇ ಕೆಲಸ
ಗೃಹಿಣಿಯರಿಗೆ ವಯಸ್ಸಾದವರು, ವಿದ್ಯಾರ್ಥಿಗಳು, ವಯಸ್ಸಿನ ಮಿತಿ ಇಲ್ಲ. ಪೆನ್ಸಿಲ್ ಪ್ಯಾಕಿಂಗ್, ಜ್ಯೂವೆಲ್ಲರಿ ಪ್ಯಾಕಿಂಗ್, ಮೆಹಂದಿ ಪ್ಯಾಕಿಂಗ್, ಕವರ್ ಪ್ಯಾಕಿಂಗ್ Flower ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಗಳಿಸಿ ತಿಂಗಳಿಗೆ 20000/- ದಿಂದ 30000ವರೆಗೆ
8147197339

DTCP SITES FOR SALE
DTCP Sites
Rs. 699 per sq.ft.,
Near Jayapura, H.D. Kote Road, Mysore.
9590491194, 9606783264

SITES FOR SALE
Royal Hills Layout, MUDA Approved Sites
30 x 50 - 50 Lakhs
Near JSS/Police Layout, TNarasipura Road, Mysuru.
1.5 Kms from Ring Road
9900363084/8660105902

ಮಾರಾಟಕ್ಕೆ / ಭೋಗ್ಯಕ್ಕೆ
60X230, 15000 ಚದರಡಿಗಳ ಬೆಲೆ - 4000/-, ಅಲಿನೇಷನ್ ಕಮರ್ಷಿಯಲ್ ಜಮೀನು ಬೋರ್ ಮತ್ತು ಆಫೀಸ್‌ನೊಂದಿಗೆ ಬನ್ನೂರು ಮೇನ್ ರೋಡ್, ವಿದ್ಯಾವಿಕಾಸ್ ಕಾಲೇಜ್ ಎದುರು, ದೇವೆಗೌಡ ಸರ್ಕಲ್ ಹತ್ತಿರ.
Mob: 63636-24003

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

Alpha School of Fashion Design Mysore
Since 2020
Become a Fashion Designer

NCYTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE

ADMISSION OPEN
*HOSTEL AND PG AVAILABLE
Alpha School of Fashion Design No.66/2, Manandavad Road, Near Ring Road Signal Junction, Srirampura, Mysore
782 993 7469

ಉಚಿತವಾಗಿ ಪಡೆಯಿರಿ
26 Kg ಗ್ರೀನ್ ಟ್ರೀ B.T. ರೈಸನ್ನು ಖರೀದಿಸಿದರೆ 5 Kg ಬ್ರಾಂಡೆಡ್ ಗೋಧಿ ಹಿಟ್ಟು, 2 Kg ಸಕ್ಕರೆ 2 Ltr ಸನ್‌ಫ್ಲವರ್ ಎಣ್ಣೆ, (ಅ) ಫ್ರೀಡಂ ಎಣ್ಣೆ 1 Kg ಬೇಳೆಯನ್ನು ಉಚಿತವಾಗಿ ಪಡೆಯಿರಿ. ಬೆಲೆ ರೂ. 2000/- ಮಾತ್ರ (ಷರತ್ತು ಅನ್ವಯ)
ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್
1498, 1ನೇ ಕ್ರಾಸ್, ಶಿವರಾಂಪೇಟೆ, ಮೋರ್ ಮೇಗಾ ಸ್ಟೋರ್ ಎದುರಿನ ರಸ್ತೆ, ಮೈಸೂರು-1
9741859037 / 9902158019

ಹೊಸ ಕಾರ್ನರ್ ಮನೆ ಮಾರಾಟಕ್ಕಿದೆ
ಸೈಟುಗಳು ಮಾರಾಟಕ್ಕಿವೆ.
ಶ್ರೀರಾಂಪುರ ರಿಂಗ್ ರೋಡ್ ಶ್ರೀನಗರ ಹಿಂಬಾಗ, ಮೈಸೂರು
ಮೊಬೈಲ್: 8050345574

ಬೋಳು ತಲೆಯ ಸಮಸ್ಯೆಯೇ?

ಕಿಮೋತರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:- ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

AFFIDAVIT
I, HOOR BEGUM, W/o Mir Mubarak Ali, residing at #74, KEB Colony, 3rd Cross, Udayagiri, Mysuru do hereby solemnly affirm and state on oath before Notary L.N. Rajendran, Mysore dated 23-11-2023 that my correct date of birth is 05-05-1955 at Mysore. But in my passport my date of birth wrongly mentioned as 01-01-1962 instead of 05-05-1955.

---

neem BOND PLATINUM® PLYWOOD & DOORS
@ FACTORY DEPOT RATES
10 YEARS WARRANTY*

9731591267 / 9901291267

GAS GEYSER
Only Rs. 2,999/-
With 2 years Service Free.
Offer only 2 days.

ಹಳೆಯ ಗ್ಯಾಸ್‌ಗೀಸರ್‌ನ್ನು ರಿಪೇರಿ ಮಾಡಲಾಗುವುದು
HARSHA ENTERPRISES
PH: 99454-99180

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

HOUSE FOR SALE
25 X 30
Ground Floor, 1st Floor 2 BHK also 2nd Floor Single Room with attached Bath & Kitchen.
4473, Vijayanagar 2nd Stage, Near KD Circle, Mysore
98452 15749 / 94833 18825

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

Sudarshan Saur SOLAR WATER HEATER

ATTRACTIVE OFFER
ಸೇಲ್ಸ್ & ಸರ್ವಿಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

PART TIME JOBS
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
9148733213

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಇನ್ ಚಾರ್ಜ್ ಹಾಗೂ ಡೆಲಿವರಿ ಬಾಯ್ಸ್ ಮತ್ತು ಬೆಳಗ್ಗೆ 8 ರಿಂದ ಮ. 2PM ವರೆಗೆ Part Time ಕೆಲಸಕ್ಕೆ ಒಬ್ಬರು ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು)
ಸಂಪರ್ಕಿಸಿ: 9449871790

ಮನೆ ಭೋಗ್ಯಕ್ಕೆ ಇದೆ
(Lease for 10 Lakhs)
30x40 ಡ್ಯೂಪ್ಲೆಕ್ಸ್, 24 ಚದರ ಇರುವ ಮನೆ. ರೂ.10 ಲಕ್ಷಕ್ಕೆ ಭೋಗ್ಯಕ್ಕೆ ಇದೆ. ಸ್ಥಳ: ಗಂಜಾಂ ಶ್ರೀರಂಗಪಟ್ಟಣ, ಮೈಸೂರು
9972358966

FOR RENT ONE SHOP No. 3
Rent Rs. 3000/-
Advance Rs. 30,000/-
Mysuru Vidyaranyapuram, 4th Main, 27th Cross, Corner No. 894/A, West facing. Measuring 10x10 Ft. available near Sterling Theatre.
9448872684, 9900079871

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ತಕ್ಷಣ ಬೇಕಾಗಿದ್ದಾರೆ
SRS SECURITY SERVICES
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್ ವೈಸರ್ ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, Any Degree ವೇತನ, ಸೆಕ್ಯೂರಿಟಿಗಾರ್ಡ್ - 20,000. ಸೆಕ್ಯೂರಿಟಿ ಸೂಪರ್‌ವೈಸರ್ - 22,000. SO - 25,000. ಕೆಲಸದ ಸಮಯ: 8 ಗಂಟೆಯ ಪಾಳಿ. ಸೌಲಭ್ಯಗಳು ESI, PF, Week Off & GH ದೊರೆಯುತ್ತದೆ. ಕೆಲಸ ಮಾಡುವ ಸ್ಥಳ: Nexus Mall & NH Hospital, Joy Alukkas, Shahi Madur. ಸಂಪರ್ಕಿಸಿ:
ದಿನೇಶ್ ವೈ.ಎಸ್. 7760097320, 9008264115, 9481782571

AFFIDAVIT
I, Shashi Kumar S.M., residing at Sriramanahalli, Tiruganahalli, Mandya-571432, declare this in front of Notary C. Mangala, that my correct name is Shashi Kumar S.M. In my Aadhaar Card No. 6412 7038 5971 and PAN Card and other documents it is mentioned correctly as Shashi Kumar S.M. But in my Passport (No. H1776689) my name mentioned as Shashi Kumara S.M. (A alphabet is extra added). Hence I make this affidavit on oath that Shashi Kumar S.M. and Shashi Kumara S.M. both names belongs to my names and the same in one person.
Sd/- Shashi Kumar S.M.

SITE FOR SALE
40x60, South face site sale at Subramanya Nagar (Jnanaganga Layout, Dattagalli).
Call: 9880273834

SITE FOR SALE
KBL Enclave
40x60, West Face, Site NO. 13, 40 feet road.
Contact:
Mob: 9342599159

HOUSE FOR LEASE
2 BHK cum dining hall in first floor with two balcony's (13 square accommodation) East facing building & North facing Main Door, car parking with covered shed.
Location: Near NPS School & Canara Bank. Area: Vijayanagar 4th Stage, 2nd Phase.
Mob: 9480792529

FOR LEASE
2 BHK House available for Lease at 12 lakhs near Srirampura 2nd Stage
9686375607
7892380115

SITE FOR RENT
Industrial site 90x120, North face 10,800 sq.ft. opposite to STAR HYUNDAI service centre, Bannimantap Extension, Mysuru-570 015
8088887802

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

3 BHK HOUSE FOR RENT
ಮನೆ ಬಾಡಿಗೆಗೆ ಇದೆ
Ground Floor, East facing, Sainika Road, Near Vinayak Enclave. Solar geyser available.
9743777471, 8970970303

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಪುರುಷರು / ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12,000.
Mob: 93800 41120

ಬೇಕಾಗಿದ್ದಾರೆ
1) ವಿದ್ಯಾವಂತ ಸೆಕ್ಯೂರಿಟಿಗಳು.
2) ಮಹಿಳಾ ಹೌಸ್‌ಕೀಪರ್.
(ಸ್ಥಳ: ಮೇಟಗಳ್ಳಿ ಸುತ್ತಮುತ್ತ)
3) ಅನುಭವಿ ಸೆಕ್ಯೂರಿಟಿ ಫೀಲ್ಡ್ ಆಫೀಸರ್.
9611236261 / 9686422400

ಸೈಟು ಮಾರಾಟಕ್ಕಿದೆ
ಸುವರ್ಣನಗರ, ನಾರಾಯಣಗುರು ನಗರ, ಬೋಗಾದಿ ರಸ್ತೆಯಲ್ಲಿ 30x40, 30x50 ಸೈಟುಗಳು ಮಾರಾಟಕ್ಕಿದೆ. ಸಂಪರ್ಕಿಸಿ:
9742421313
9945779947

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಮ್ಯಾನೇಜರ್ ಮತ್ತು ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ ದೊರೆಯುತ್ತದೆ.
Mob: 9902754149

ತಕ್ಷಣ ಭೋಗ್ಯಕ್ಕೆ ಮನೆ ಬೇಕಾಗಿದೆ
ಟಿ.ನರಸೀಪುರ ಮುಖ್ಯ ರಸ್ತೆ, ನಾಡನಹಳ್ಳಿ KSRTC ಬಡಾವಣೆ ಅಥವಾ ಅಕ್ಕಪಕ್ಕ ಬಡಾವಣೆಗಳಲ್ಲಿ 30x40 ರಲ್ಲಿ 2 ಬಿಹೆಚ್‌ಕೆ ಹೊಂದಿರುವ ಮನೆ ಭೋಗ್ಯಕ್ಕೆ ಬೇಕಾಗಿದೆ. ಆಸಕ್ತರು ಈ ಕೆಳಕಂಡ ಫೋನ್‌ಗೆ ಕರೆಮಾಡಿ ಹೆಚ್ಚಿನ ಮಾಹಿತಿಯನ್ನು ಪಡೆದು ಕೊಳ್ಳಿ (Independent).
8971379542, 9480421332

ಮನೆ ಬೇಕಾಗಿದೆ (ಭೋಗ್ಯ)
ಅಗ್ರಹಾರ, ರಾಮಾನುಜ ರಸ್ತೆ, ವಿದ್ಯಾರಣ್ಯಪುರಂ, ಚಾಮುಂಡಿಪುರಂ, ಲಕ್ಷ್ಮೀಪುರಂ ಸುತ್ತಮುತ್ತ 7-8 ಲಕ್ಷಕ್ಕೆ ಮನೆ ಭೋಗ್ಯಕ್ಕೆ ಬೇಕಾಗಿದೆ.
Mob: 8884271651

FOR RENT
2 ರೂಂವುಳ್ಳ ಮೊದಲನೇ ಅಂತಸ್ತಿನಲ್ಲಿ ಮನೆ ಬಾಡಿಗೆಗೆ ಇದೆ. ನಂ. 23, ಕನಕ ನಿಲಯ, 6ನೇ ಮೇನ್, 1ನೇ ಕ್ರಾಸ್, ವಾಸು ಬಡಾವಣೆ, ರಾಮಕೃಷ್ಣನಗರ 'ಐ' ಬ್ಲಾಕ್, ಮೈಸೂರು.
Mob: 9663300653

HOUSES & OFFICE SPACE FOR RENT
@ Saraswathipuram, Kuvempunagar & Surroundings, SS Property Services (opp. Kuvempu School) S.S Puram
9342125252

ಲೇಡಿಸ್ ಟೈಲರ್‌ಗಳಿಗೆ
ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಲೇಡಿಸ್ ಟೈಲರ್‌ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ:
Mob: 9901080314

ಮುಡಾ ಕಾರ್ನರ್ ಸೈಟ್
28.5 x 40, ಈಸ್ಟ್ ಫೇಸಿಂಗ್, ಏರ್‌ಪೋರ್ಟ್ ಹಿಂಭಾಗದ ರಸ್ತೆ, ಜ್ಞಾನಭಾರತಿ ಲೇಔಟ್, ಚದುರಡಿಗೆ ರೂ. 3000. ಡೈರೆಕ್ಟ್ ಓನರ್
63626 39387

WANTED FIELD COLLECTION EXECUTIVE AND TELECALLERS FOR REPUTED BANK
9686832254 | 08214852478
#12/A, 4th Main, 8th Cross, Saraswathipuram, Opp Dhana lakshmi Bank, Mysore - 570009

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಪಾರ್ಟ್ ಟೈಮ್, ಫುಲ್ ಟೈಮ್ ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬೇಸಿಕ್ ಸಂಬಳ/ಪಿಎಫ್, ಇಎಸ್‌ಐ, ವಯಸ್ಸು: 30 ವರ್ಷಗಳ ಮೇಲ್ಪಟ್ಟು ಸಂಪರ್ಕಿಸಿ:
9886970147 / 8660521596

SITE FOR SALE
40x45 South face, Price: 4500/- Sq.ft. (Slightly Negotiable) Just 100mts from surya bakery main road, Hebbal, Mysore - 16
Bank Loan Available
Brokers excuse
9901212321, 8880883339

PG BUILDING FOR RENT
1,2,3,4 Sharing & Wifi, hot water, CCTV & Fully Furnished Rooms, Total 25 Rooms & Kitchen Available For Rent @Vijayanagar 2nd stage, Kindly contact
9886800761, 9060906604

OLD HOUSE FOR SALE
Semi Commercial, Dimension 45x60, 200mts From, Forum Mall, 500Mts From Sub-urban bus stand, 7000/- sq.ft., Nego Contact
9972005991

S.K. Construction
ಎಲ್ಲಾ ಇಂಜಿನಿಯರಿಂಗ್ ಸರ್ವಿಸ್ ಒಂದೇ ಸೂರಿನಲ್ಲಿ ವರ್ಕಿಂಗ್-ಅಪ್ರೂವಲ್ ಪ್ಲಾನ್-ಎಸ್ಟಿಮೇಶನ್ 3-ಡಿ ಎಲಿವೇಶನ್, ಇಂಟೀರಿಯರ್ ಡಿಸೈನ್ ಎಲೆಕ್ಟ್ರಿಕ್ ಪ್ಲಂಬಿಂಗ್ ಪ್ಲಾನ್
Construction ಮತ್ತು Project Incharge
Contact: 9620528490

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ /ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000ರಿಂದ 20000 ವರೆಗೆ
6366141518 / 9845010281

ಉಪಯೋಗಿಸಿದ ಲ್ಯಾಪ್‌ಟಾಪ್, ಕಂಪ್ಯೂಟರ್, ಪ್ರಿಂಟರ್, ಮೊಬೈಲ್, ಬ್ಯಾಟರಿ, ಇನ್ವರ್ಟರ್ ಇನ್ನಿತರ ಪರಿಕರಗಳನ್ನು ಕೊಳ್ಳುತ್ತೇವೆ
9449639550

ಮನೆ ಮಾರಾಟಕ್ಕಿದೆ
ಮೈಸೂರು ಶ್ರೀರಾಂಪುರ ಕಂದಾಯನಗರ 1ನೇ ಹಂತ 30x40 ಮನೆ (ಹೊಸ ಮನೆ) ಮಾರಾಟಕ್ಕಿದೆ, 4 ಬೆಡ್‌ರೂಮ್, ವಾರ್ಡ್‌ರೂಬ್, ಇಟಾಲಿಯನ್ ಕಿಚನ್ ಮಾರಾಟಕ್ಕಿದೆ.
9945615736

ಖಾಲಿ ಜಾಗ 5000 ಅಡಿ ಬಾಡಿಗೆಗೆ ದೊರೆಯುತ್ತದೆ, 1ನೇ ಹಂತ, ವಿಜಯನಗರ ವಾಟರ್ ಟ್ಯಾಂಕ್ ಪಕ್ಕ ಸಂಪರ್ಕಿಸಿ
9448978383

ಬೇಕಾಗಿದ್ದಾರೆ
ಚೆನ್ನಪಟ್ಟಣ ಪುರಸಭೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದ್ದಾರೆ, ಸಂಪರ್ಕಿಸಿ:
9448044290
9945362868

ನಿಸರ್ಗ ರಿಯಲ್ ಎಸ್ಟೇಟ್
ಮೈಸೂರು ಹಾಗೂ ರಿಂಗ್ ರೋಡಿನ ಸುತ್ತ ಸೈಟು, ಮನೆ, ಕಮರ್ಷಿಯಲ್ ಬಿಲ್ಡಿಂಗ್, ಜಮೀನು, ಕೊಳ್ಳಲು ಮಾರಲು, ಮನೆ ಬಾಡಿಗೆಗೆ ಸಂಪರ್ಕಿಸಿ: ಮಾಲೀಕರು ಮಾತ್ರ
96117 83068

WANTED
1) Technical Assistant (BE/ Diploma Civil) F/M
2) Field Executives (2 Years Experience)
3) Personal Assistant- F/M

Contact: 9481232316

ಬಣ್ಣದ ಕೆಲಸ
ತಾರಸಿ ಸೋರುವಿಕೆ, ಬಾತ್ ರೂಂ ಲೀಕೇಜ್ ಸಿಂಕ್ ಲೀಕೇಜ್ ಸರಿಪಡಿಸಲಾಗುವುದು.
9380205890

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು, GF + FF ರೈಲ್ವೇ ಲೇಔಟ್, ಜೆ.ಪಿ. ನಗರ, ಮೈಸೂರು
9538956060
8660108796

ರೂಂ ಬಾಡಿಗೆಗೆ ಇದೆ
(ಸಸ್ಯಹಾರಿಗಳಿಗೆ ಮಾತ್ರ)
ವಿದ್ಯಾರಣ್ಯಪುರಂ, (ಮಹಾಲಕ್ಷ್ಮಿ ಸ್ವೀಟ್ಸ್ ಹತ್ತಿರ, ಮೈಸೂರು)
9844059138
9880961150

ಮೈಸೂರಿನ ಪ್ರತಿಷ್ಠಿತ ಗಾರ್ಮೆಂಟ್ಸ್ ಗೆ ಕಟ್ಟಿಂಗ್ ಮಾಸ್ಟರ್ ಹಾಗೂ ಟೈಲರ್‌ಗಳು ಬೇಕಾಗಿದ್ದಾರೆ
ಆಸಕ್ತರು ಸಂಪರ್ಕಿಸಿ :
9606888253

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ ಶನಿವಾರ 9 ಡಿಸೆಂಬರ್ 2023

ಜೆಡಿಎಸ್ ವಿಭಜಿಸುವ ಕಾಂಗ್ರೆಸ್ ಷಡ್ಯಂತ್ರಕ್ಕೆ ಗೌಡರ ಮಹಾತಂತ್ರ

ಇಂದು ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿಣಿ ತುರ್ತು ಸಭೆ

● ಕಾಂಗ್ರೆಸ್ ನಾಯಕರ ತಂತ್ರಕ್ಕೆ ಪ್ರತಿತಂತ್ರ ● ಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸೇರಿದ ಅನಿವಾರ್ಯತೆ, ಪಕ್ಷ ಸಂಘಟನೆ ಸಂಬಂಧ ನಾಯಕರಿಗೆ ಮನವರಿಕೆ ● ಸಿ.ಎಂ.ಇಬ್ರಾಹಿಂ ಸೇರಿ ಅಪಸ್ವರ ಎತ್ತಿರುವ ಕೇರಳದ ಕೆಲ ನಾಯಕರ ಉಚ್ಛಾಟನೆ ನಿರ್ಧಾರ ಸಾಧ್ಯತೆ

ಬೆಂಗಳೂರು, ಡಿ.8(ಕೆಎಂಶಿ)– ಪಕ್ಷ ವಿಭಜಿಸಲು ಹೊರಟಿರುವ ಕಾಂಗ್ರೆಸ್ ಷಡ್ಯಂತ್ರಕ್ಕೆ ಕಡಿವಾಣ ಹಾಕಲು ಜೆಡಿಎಸ್ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಶನಿವಾರ ತುರ್ತು ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಕರೆದಿದ್ದಾರೆ.


ಎನ್‌ಡಿಎ ಜೊತೆ ಮೈತ್ರಿ ಮಾಡಿಕೊಂಡಿರುವುದರಿಂದ ಜೆಡಿಎಸ್‌ನ ಒಂದು ವರ್ಗದಲ್ಲಿ ಅಸಮಾಧಾನವಿದ್ದು, ಇದರ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ಕಾರ್ಯತಂತ್ರ ರೂಪಿಸಿದೆ. ವಿಧಾನಸಭೆಯಲ್ಲಿ ಜೆಡಿಎಲ್‌ಪಿಯನ್ನೇ ವಿಭಜಿಸಿ ಒಂದಷ್ಟು ಶಾಸಕರನ್ನು ಪ್ರತ್ಯೇಕವಾಗಿ ಕೂರಿಸಿ ಲಾಭ ಪಡೆಯಲು ಕಾಂಗ್ರೆಸ್ ತಂತ್ರ ರೂಪಿಸಿತ್ತು.

ಪ್ರತ್ಯೇಕವಾಗಿ ಶಾಸಕರು ಕುಳಿತುಕೊಳ್ಳುವುದರಿಂದ ಅವರ ಸದಸ್ಯತ್ವಕ್ಕೆ ಕುಂದು ಬರುವುದಿಲ್ಲ. ಉಪ ಚುನಾವಣೆ ಎದುರಿಸುವ ಪ್ರಮೇಯವೂ ಎದುರಾಗುವುದಿಲ್ಲ. ಆ ಗುಂಪು ಸ್ವತಂತ್ರವಾಗಿ ಇರುವುದರಿಂದ ಆಡಳಿತ ಕಾಲದಲ್ಲಿ ಬೆಂಬಲಿಸಬಹುದು. ಈ ಕಾರಣದಿಂದ ಕಾಂಗ್ರೆಸ್ ದೊಡ್ಡ ಷಡ್ಯಂತ್ರ್ಯವನ್ನೇ ನಡೆಸಿತ್ತು. ಸಹಕಾರಿ ಸಚಿವ ಕೆ.ಎನ್. ರಾಜಣ್ಣ ಇದೇ ಉದ್ದೇಶದಿಂದ ಜೆಡಿಎಸ್‌ನ ಮೂರನೇ ಎರಡು ಭಾಗದಷ್ಟು ಸದಸ್ಯರು ಹೊರ ಬರಲು ಸಿದ್ಧರಿದ್ದಾರೆ, ಸಮಯ ನೋಡಿ ಅವರನ್ನು ಹೊರ ತರುತ್ತೇವೆ ಎಂದಿದ್ದರು.

ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನದಿಂದ ಅಮಾನತುಗೊಂಡಿರುವ ಸಿ.ಎಂ.ಇಬ್ರಾಹಿಂ ಹಾಗೂ ಕೇರಳ ಘಟಕದ ಕೆಲವರನ್ನು ಮುಂದಿಟ್ಟುಕೊಂಡು ಈ ಸಂಚು ರೂಪಿಸಿತ್ತು.

ಪಕ್ಷ ವಿಭಜಿಸಿ ಜೆಡಿಎಸ್‌ನ 19 ಶಾಸಕರಲ್ಲಿ ಕೆಲವರನ್ನು ಸೆಳೆದು ಅವರನ್ನು ವಿಧಾನಸಭೆಯಲ್ಲಿ ಪ್ರತ್ಯೇಕ ಗುಂಪಾಗಿ ಕೂರಿಸಿ ಅವರ ಬೆಂಬಲ ಪಡೆದು ತಮ್ಮ ಬಲ ಹೆಚ್ಚಿಸಿಕೊಳ್ಳುವುದು ಹಾಗೂ ಪ್ರತಿಪಕ್ಷಗಳ ಸಂಖ್ಯಾಬಲವನ್ನು ಮತ್ತಷ್ಟು ಕುಗ್ಗಿಸುವುದು ಕಾಂಗ್ರೆಸ್ ಮುಖಂಡರ ಉದ್ದೇಶವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜೆಡಿಎಸ್ ಶಾಸಕರನ್ನು ಸಂಪರ್ಕಿಸಿ



ಕಾಂಗ್ರೆಸ್ ಸೇರುವಂತೆ ಸಲಹೆ ನೀಡಿದ್ದರೆ, ಕೆಪಿಸಿಸಿ ಅಧ್ಯಕ್ಷರಂತೂ ಒಂದು ಹೆಜ್ಜೆ ಮುಂದೆ ಹೋಗಿ, ಕೆಲವು ಶಾಸಕರ ಮನೆಗೇ ಹೋಗಿ, ಭೇಟಿ ಮಾಡಿ ಆಹ್ವಾನಿಸಿದ್ದಾರೆ.

ಜೆಡಿಎಸ್‌ನ 19 ವಿಧಾನಸಭಾ ಶಾಸಕರಲ್ಲಿ ಮೈತ್ರಿ ವಿರೋಧಿಸಿ ಈಗಾಗಲೇ ಗುರುಮಿಟ್ಕಲ್‌ನ ಶರಣಗೌಡ ಕಂದಕೂರ್ ಪಕ್ಷದಿಂದ ದೂರ ಉಳಿದಿದ್ದಾರೆ. ಇದರ ಸುಳಿವು ಅರಿತ ದೇವೇಗೌಡರು ಹಾಗೂ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ, ನಿಯಮಾವಳಿ ಪ್ರಕಾರ ಶನಿವಾರ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯನ್ನು ಪಕ್ಷದ ಕಚೇರಿಯಲ್ಲಿ ಶನಿವಾರ ಬೆಳಗ್ಗೆ 11 ಗಂಟೆಗೆ ಕರೆದಿದ್ದಾರೆ. ಸಭೆಗೆ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಶಿವಕುಮಾರ್, ಮೊಹಮ್ಮದ್ ಜಫರುಲ್ಲಾ ಖಾನ್, ಪಶ್ಚಿಮ ಬಂಗಾಳದ ರಾಜ್ಯಾಧ್ಯಕ್ಷ ಪುನೀತ್ ಕುಮಾರ್ ಸಿಂಗ್, ಹರಿಯಾಣ ಘಟಕದ ಜೋರಾ ಸಿಂಗ್, ಪಂಜಾಬ್ ಘಟಕದ ಅವತಾರ್ ಸಿಂಗ್, ಅಲ್ಲಿಯವರೇ ಆದ ಅಶೋಕ್ ಕುಮಾರ್, ಜಮ್ಮು–ಕಾಶ್ಮೀರದ ರಾಮ್ ರತನ್ ಶರ್ಮ, ಉತ್ತರಾಖಂಡ್‌ನಿಂದ ಸುರೇಶ್‌ದಾಸ್, ಮಹಾರಾಷ್ಟ್ರದ ಮಹಮ್ಮದ್ ಅಜ್ಮಲ್ ಖಾನ್, ಎನ್.ಎಚ್. ಕಠಾರಿಯಾ, ಎನ್.ಎಚ್. ಶೇವಾಲೆ ಸೇರಿದಂತೆ ದೆಹಲಿ, ತಮಿಳುನಾಡು, ಬಿಹಾರ್, ಗುಜರಾತ್, ಉತ್ತರ ಪ್ರದೇಶದ 21 ಮಂದಿ ಪ್ರಮುಖ ಪದಾಧಿಕಾರಿಗಳು ಆಗಮಿಸಲಿದ್ದಾರೆ.

ಇವರಲ್ಲದೆ, ಪಕ್ಷದ ವತಿಯಿಂದ ರಾಜ್ಯ ವಿಧಾನಸಭೆ, ಪರಿಷತ್ತಿನ ಮಾಜಿ ಸದಸ್ಯರು ಮತ್ತು ಮುಖಂಡರಿಗೂ ಆಹ್ವಾನ ನೀಡಲಾಗಿದೆ. ಈ ಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸೇರಿದ ನಂತರ ಪಕ್ಷ ಸಂಘಟನೆ ಕುರಿತು ಚರ್ಚೆ, ಐದು ರಾಜ್ಯಗಳ ವಿಧಾನಸಭಾ ಫಲಿತಾಂಶದ ಅವಲೋಕನ, ಅಲ್ಪಸಂಖ್ಯಾತರು ಪಕ್ಷದಿಂದ ದೂರವಾದ ನಂತರ ಮುಂದಿನ ನಡೆ ಹೇಗಿರಬೇಕು ಎಂಬುದರ ಬಗ್ಗೆ ಚರ್ಚೆ ಆಗಲಿದೆ.

ರಾಷ್ಟ್ರೀಯ ಕಾಂಗ್ರೆಸ್‌ನ ಹುನ್ನಾರ ತಪ್ಪಿಸಲು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸುವುದಲ್ಲದೆ, ಪಕ್ಷ ವಿಭಜನೆಗೆ ಮುಂದಾಗಿರುವ ಅಮಾನತುಗೊಂಡ ಸಿ.ಎಂ.ಇಬ್ರಾಹಿಂ ಮತ್ತು ಕೇರಳ ಘಟಕದ ಕೆಲವು ಪದಾಧಿಕಾರಿಗಳನ್ನು ಪಕ್ಷದಿಂದ ಉಚ್ಛಾಟಿಸುವ ಸಂಬಂಧ ನಿರ್ಣಯ ಕೈಗೊಳ್ಳಲಿದ್ದಾರೆಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಇದೇ ಸಂದರ್ಭದಲ್ಲಿ ಜೆಡಿಎಸ್‌ನ ಹಂಗಾಮಿ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅದೇ ಸ್ಥಾನದಲ್ಲಿ ಖಾಯಂಗೊಳಿಸುವುದೂ ಇದರಲ್ಲಿ ಸೇರಿದೆ.

ಪರಿಶಿಷ್ಟರ ಯೋಜನೆ ಹಣ ದುರ್ಬಳಕೆ ಆಗಲು ಬಿಡುವುದಿಲ್ಲ

ಬೆಂಗಳೂರು, ಡಿ.8(ಕೆಎಂಶಿ)– ರಾಜ್ಯ ಸರ್ಕಾರವು ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಗೆ ಮೀಸಲಿಟ್ಟಿರುವ ಅನುದಾನ ಯಾವುದೇ ಕಾರಣಕ್ಕೂ ದುರ್ಬಳಕೆ ಆಗಲು ಬಿಡುವುದಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ವಿಧಾನ ಪರಿಷತ್ತಿನಲ್ಲಿಂದು ಸ್ಪಷ್ಟಪಡಿಸಿದರು.



ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಛಲವಾದಿ ನಾರಾಯಣ ಸ್ವಾಮಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಧಿ ನಿಯಮ 2013 ಮತ್ತು ನಿಯಮಗಳು 2017ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ನೇರವಾಗಿ ಪ್ರಯೋಜನವಾಗಲಿವೆ.

ಈ ಯೋಜನೆಯಡಿ ಅನುದಾನವನ್ನು ಹಂಚಿಕೆ ಮಾಡಿ ಅನುಷ್ಠಾನಗೊಳಿಸಲು ಅವಕಾಶವಿದ್ದು, ಅನುದಾನವನ್ನು ಯಾವುದೇ ಸಂದರ್ಭದಲ್ಲೂ ಅನ್ಯ ಉದ್ದೇಶಕ್ಕಾಗಿ ಬಳಸುವುದಿಲ್ಲ ಹಾಗೂ ಕಾಯ್ದೆಯ ಉಲ್ಲಂಘನೆಯ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದರು. ಯೋಜನೆಯಡಿ ಗ್ಯಾರಂಟಿ ಯೋಜನೆಗಳಿಗಾಗಿ, ಗೃಹಲಕ್ಷ್ಮೀ ಯೋಜನೆಗೆ 5075 ಕೋಟಿ ರೂ, ಅನ್ನ ಭಾಗ್ಯ ಯೋಜನೆಗೆ 2779.50 ಕೋಟಿ ರೂ., ಗೃಹಜ್ಯೋತಿ ಯೋಜನೆಯಡಿ 2410 ಕೋಟಿ ರೂ., ಶಕ್ತಿ ಯೋಜನೆಗೆ 812 ಕೋಟಿ ರೂ., ಯುವನಿಧಿ ಯೋಜನೆಗೆ 67.50 ಕೋಟಿ ರೂ. ಒದಗಿಸಲಾಗಿದ್ದು, ಈ ಮೊತ್ತವನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ ಉಪಯೋಗಿಸುತ್ತಿರುವುದರಿಂದ ಸದರಿ ಅನುದಾನದ ದುರ್ಬಳಕೆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸಿದರು. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಲ್ಲಿ ದುರ್ಬಳಕೆ ತಡೆಯುವ ಉದ್ದೇಶದಿಂದಲೇ ಕಾಯ್ದೆಯ ಸೆಕ್ಷನ್ 7(ಡಿ)ಯನ್ನು ಕೈಬಿಡಲು ನಿನ್ನೆ ನಡೆದ ಕ್ಯಾಬಿನೆಟ್ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಸಚಿವರು ತಿಳಿಸಿದರು.

ನಾಳೆ ಆರ್ಕೀಡೆಲಿಯಾ ಕಾರ್ನಿವಲ್

ಮೈಸೂರು, ಡಿ.8– ಮೈಸೂರು ರಾಮಕೃಷ್ಣನಗರದ ದಿ ಆರ್ಕಿಡ್ಸ್ ಸ್ಕೂಲ್, ಕುಮಾರಬೀಡು ದಿ ಆರ್ಕಿಡ್ಸ್ ಪಬ್ಲಿಕ್ ಸ್ಕೂಲ್ ಮತ್ತು ಪಿಯು ಕಾಲೇಜ್ ಪ್ರಸ್ತುತಪಡಿಸುವ 'ಆರ್ಕಿಡೆಲಿಯಾ' ಕಾರ್ನಿವಲ್ ಅನ್ನು ಇದೇ ಡಿ. 10 (ಭಾನುವಾರ) ರಂದು ಆರ್ಕಿಡ್ಸ್ ಪಬ್ಲಿಕ್ ಸ್ಕೂಲ್ ಕುಮಾರಬೀಡುವಿನಲ್ಲಿ ಆಯೋಜಿಸಲಾಗಿದೆ. ಅಂದು ಮಧ್ಯಾಹ್ನ 12–30 ರಿಂದ ರಾತ್ರಿ 9–30ರವರೆಗೆ ನಿರಂತರ ಮನರಂಜನೆ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇಲ್ಲಿ ಎಲ್ಲ ವಯೋಮಾನದವರೂ ಭಾಗವಹಿಸಿ ತಾವು ಇಷ್ಟ ಪಡುವ ಕಾರ್ಯಕ್ರಮಗಳಲ್ಲಿ ಭಾಗಿಯಾಗಬಹುದು. ವಿಸ್ಮಯಕಾರಿ ಮ್ಯಾಜಿಕ್ ಶೋ, ಭಯದ ಮನೆಯ ಅನುಭವ, ಸವಿಯಲು ಶುಚಿ – ರುಚಿಯಾದ ಆಹಾರ, ಇನ್ನೂ ಅನೇಕ ರೀತಿಯ ಆಟಾಟೋಪಗಳಲ್ಲಿ ತೊಡಗಿಸಿಕೊಂಡು ಸಂತೋಷ ಅನುಭವಿಸಬಹುದು. ಜೊತೆಗೆ 'ಸಾಂಸ್ಕೃತಿಕ ಏಕತೆ' ಥೀಮ್‌ನೊಂದಿಗೆ ವಿವಿಧ ಸಂಸ್ಕೃತಿಗಳ ಪರಿಚಯವನ್ನು ಕಾರ್ನಿವಲ್ ಮೆರವಣಿಗೆಯಲ್ಲಿ ಕಣ್ತುಂಬಿಕೊಳ್ಳಬಹುದು. ಪೋಷಕರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದ್ದು, ಮಕ್ಕಳೊಂದಿಗೆ ಬೆರೆತು ತಮ್ಮ ಕೌಶಲ್ಯ ಮತ್ತು ಪ್ರತಿಭೆಯನ್ನು ಪ್ರದರ್ಶಿಸಬಹುದಾಗಿದೆ.

ಇನ್ವೆಸ್ಟ್ ಕರ್ನಾಟಕ ಸಮಾವೇಶದ ಫಲಶ್ರುತಿ: 57 ಕಂಪನಿಗಳಿಂದ

5,41,369 ಕೋಟಿ ಹೂಡಿಕೆ ಒಡಂಬಡಿಕೆ

● ವಿಧಾನಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ ● ಹುಬ್ಬಳ್ಳಿಯಲ್ಲಿ ನಡೆದ ಎಫ್‌ಎಂಸಿಜಿ ಹೂಡಿಕೆದಾರರ ಸಮಾವೇಶದಲ್ಲೂ 16 ಕಂಪನಿಗಳಿಂದ 1,275 ಕೋಟಿ ಹೂಡಿಕೆ

ಬೆಂಗಳೂರು, ಡಿ.8(ಕೆಎಂಶಿ)– 2022ರ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಸಿದ 'ಇನ್ವೆಸ್ಟ್ ಕರ್ನಾಟಕ' ಸಮಾವೇಶದ ಮೂಲಕ 57 ಕಂಪನಿಗಳೊಂದಿಗೆ 5,41,369 ಕೋಟಿ ರೂ.ಗಳ ಹೂಡಿಕೆಗೆ ಸರಕಾರವು ಒಡಂಬಡಿಕೆ ಮಾಡಿಕೊಂಡಿದೆ ಎಂದು ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.

ವಿಧಾನಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಎಂ.ಚಂದ್ರಪ್ಪ ಅವರು ಕೇಳಿದ ಪ್ರಶ್ನೆಗೆ ಸಚಿವರು, ಇದೇ ರೀತಿಯಲ್ಲಿ, ಹುಬ್ಬಳ್ಳಿಯಲ್ಲಿ ನಡೆಸಲಾದ ಎಫ್‌ಎಂಸಿಜಿ ಹೂಡಿಕೆದಾರರ ಸಮಾವೇಶದ ಮುಖಾಂತರ 16 ಕಂಪನಿಗಳೊಂದಿಗೆ ರಾಜ್ಯದಲ್ಲಿ 1,275 ಕೋಟಿ ರೂ. ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.



ಇನ್ವೆಸ್ಟ್ ಕರ್ನಾಟಕದಲ್ಲಾದ ಒಡಂಬಡಿಕೆಗಳ ಪೈಕಿ 7 ಯೋಜನೆಗಳಿಗೆ ಏಕಗವಾಕ್ಷಿ ಸಮಿತಿಯಲ್ಲಿ ಅನುಮೋದನೆ ನೀಡಲಾಗಿದ್ದು, ಇವುಗಳಿಗೆ ಭೂಮಿ, ನೀರು ಮತ್ತು ವಿದ್ಯುತ್ ಪೂರೈಕೆ ಒದಗಿಸಲಾಗುವುದು. ಇವು ಬೃಹತ್ ಯೋಜನೆಗಳಾದ್ದರಿಂದ ಕಾರ್ಯಾರಂಭ ಮಾಡಲು 3–4 ವರ್ಷಗಳು ಹಿಡಿಯುತ್ತವೆ ಎಂದು ಅವರು ವಿವರಿಸಿದ್ದಾರೆ. ಎಫ್‌ಎಂಸಿಜಿ ಸಮಾವೇಶದಲ್ಲಾದ 16 ಒಡಂಬಡಿಕೆಗಳ ಪೈಕಿ 3 ಯೋಜನೆಗಳಿಗೆ ಏಕಗವಾಕ್ಷಿ ವ್ಯವಸ್ಥೆ ಮೂಲಕ ಅನುಮೋದನೆ ಕೊಡಲಾಗಿದ್ದು, ಇವುಗಳಿಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಮೇಲ್ಕಂಡ ಎರಡೂ ಬಗೆಯ ಯೋಜನೆಗಳು ಅನುಷ್ಠಾನದ ನಾನಾ ಹಂತಗಳಲ್ಲಿವೆ ಎಂದು ಅವರು ತಿಳಿಸಿದರು.

ಇನ್ವೆಸ್ಟ್ ಕರ್ನಾಟಕ–2022 ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಹಿಂದಿನ ಸರಕಾರವು 74.99 ಕೋಟಿ ರೂ. ವೆಚ್ಚ ಮಾಡಿದೆ. ಹಾಗೆಯೇ, ಹುಬ್ಬಳ್ಳಿಯಲ್ಲಿ 2022ರ ನವೆಂಬರ್‌ನಲ್ಲಿ ನಡೆಸಲಾದ ಹೂಡಿಕೆದಾರರ ಸಮಾವೇಶಕ್ಕೆ 12.23 ಲಕ್ಷ ರೂ.ಗಳನ್ನು ಸರಕಾರದ ವತಿಯಿಂದ ಖರ್ಚು ಮಾಡಲಾಗಿದೆ ಎಂದು ಪಾಟೀಲ್ ವಿವರಿಸಿದರು. ಜೊತೆಗೆ, ಸರಕಾರದ ನಿಯಮಾವಳಿಗಳ ಪ್ರಕಾರ ಈ ಉದ್ಯಮಗಳಲ್ಲಿ 'ಡಿ' ಗ್ರೂಪ್ ಹುದ್ದೆಗಳನ್ನು ಕನ್ನಡಿಗರಿಗೆ ಶೇ.100ರಷ್ಟು ಮತ್ತು ಒಟ್ಟಾರೆಯಾಗಿ ಶೇ.70ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ ಕೊಡಬೇಕೆನ್ನುವ ನಿಯಮ ರೂಪಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ಸ್ವಚ್ಛ ಭಾರತ ಮಿಷನ್ ಯೋಜನೆಗೆ 2912 ಕೋಟಿ ಅನುದಾನ ಮೀಸಲು

ಬೆಂಗಳೂರು, ಡಿ.8(ಕೆಎಂಶಿ)– ಸ್ವಚ್ಛ ಭಾರತ ಮಿಷನ್ ಯೋಜನೆಗೆ 2912 ಕೋಟಿ ರೂ. ಅನುದಾನವನ್ನು ಮೀಸಲಿರಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬಿ.ಸುರೇಶ್ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದರು.

ರಾಜ್ಯ ಎಲ್ಲಾ ಸ್ಥಳೀಯ ನಗರಾಭಿವೃದ್ಧಿ ಸಂಸ್ಥೆಗಳಲ್ಲಿ ಸ್ವಚ್ಛ ಭಾರತ್ ಮಿಷನ್ ಅನುಷ್ಠಾನ ಮಾಡಲು ಪ್ರತ್ಯೇಕ ಐ.ಎ.ಎಸ್ ಅಧಿಕಾರಿ ನೇಮಿಸಲಾಗಿದೆ.

ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಘನ ತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಅಗತ್ಯ ಯಂತ್ರೋಪಕರಣಗಳನ್ನು ಒದಗಿಸುವುದು ಮತ್ತು ಸಿವಿಲ್ ಕಾಮಗಾರಿ ಕೈಗೊಳ್ಳಲು ವಿಸ್ತೃತ ಯೋಜನೆಗೆ ಅನುಮತಿ ನೀಡಲಾಗಿದೆ ಎಂದರು.

ವಸತಿ ಶಾಲೆ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಡಿ.8– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮೈಸೂರು ಜಿಲ್ಲಾ ಕಚೇರಿಯಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಲಗನಹಳ್ಳಿ ಹಾಲಿ ಬೆಟ್ಟದಪುರ ಶಾಖೆಯನ್ನು 6ನೇ ತರಗತಿಯಿಂದ 12ನೇ ತರಗತಿವರೆಗೆ ಶಾಲೆಯಾಗಿ ಪರಿವರ್ತಿಸಿದ್ದು, 2023–24ನೇ ಸಾಲಿನ ಪ್ರಥಮ ಪಿಯುಸಿ ಸಿಇಬಿಎ (ವಾಣಿಜ್ಯ) ವಿಭಾಗವನ್ನು ಪ್ರಾರಂಭಿಸಲಾಗಿದ್ದು, ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕನ್ನಡ, ಇಂಗ್ಲಿಷ್, ಅರ್ಥಶಾಸ್ತ್ರ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಡಿಸೆಂಬರ್ 15ರೊಳಗೆ ಕಚೇರಿ ವೇಳೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೈಸೂರು ಅಥವಾ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬೆಟ್ಟದಪುರ ಪಿರಿಯಾಪಟ್ಟಣ ಶಾಲೆಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿ, ಮೈಸೂರು ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರು, ದೂ.ಸಂ: 8197365501, 9611787204 ಅನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸಿರು ನಮ್ಮ ಉಸಿರು

ಯತ್ನಾಳ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎದಿರೇಟು

ಮೌಲ್ವಿ ತನ್ವೀರ್ ಹಾಶ್ಮಿಯೊಂದಿಗಿನ ನನ್ನ ಸಂಬಂಧ ಬಯಲು ಮಾಡುವುದು ನೆಪ ಅಷ್ಟೆ; ಯತ್ನಾಳ್ ಗುರಿ ಪ್ರಧಾನಿ ಮೋದಿ!!

● ಮೋದಿಯವರೊಟ್ಟಿಗೆ ಹಾಶ್ಮಿ ಇರುವ ಫೋಟೋ ಟ್ಯಾಗ್ ಮಾಡಿ ಟ್ವೀಟಾಸ್ತ್ರ ಪ್ರಯೋಗ
● ಯತ್ನಾಳ್, ಬಿಜೆಪಿ ಮುಖಂಡರಿಗೆ ಇರಿಸು–ಮುರಿಸು ತರುವಂತಹ ವಿಚಾರವಿದು



ಬೆಂಗಳೂರು, ಡಿ. 8(ಕೆಎಂಶಿ)– ಮೌಲ್ವಿ ತನ್ವೀರ್ ಹಾಶ್ಮಿ ಅವರ ಜೊತೆಗಿನ ನನ್ನ ಫೋಟೋವನ್ನು ಹಿಡ್ಕೊಂಡು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ನನ್ನ ವಿರುದ್ಧ ಆರೋಪ ಮಾಡಿದರೂ ಅವರ ನಿಜವಾದ ಗುರಿ ಪ್ರಧಾನಿ ನರೇಂದ್ರ ಮೋದಿ ಅವರು ಎನ್ನುವುದು ನಿಧಾನವಾಗಿ ಬಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ವ್ಯಂಗ್ಯವಾಡಿದ್ದಾರೆ.

ಮೋದಿ ಅವರ ಜೊತೆ ಹಾಶ್ಮಿ ಇರುವ ಚಿತ್ರವನ್ನು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಅವರು, ಮೌಲ್ವಿ ಅವರ ಜೊತೆಗೆ ಇತರ ಬಿಜೆಪಿ ನಾಯಕರು ಮಾತ್ರವಲ್ಲ ಸಾಕ್ಷಾತ್ ನರೇಂದ್ರ ಮೋದಿ ಅವರೂ ಸಂಬಂಧ ಹೊಂದಿರುವುದು ಮಾಧ್ಯಮಗಳಲ್ಲಿ ಬಿಡುಗಡೆಯಾಗಿರುವ ಫೋಟೋಗಳು ಸ್ಪಷ್ಟವಾಗಿ ಹೇಳುತ್ತಿವೆ. ದೀರ್ಘಕಾಲದಿಂದ ಹಾಶ್ಮಿ ಅವರಿಗೆ ಅತ್ಯಂತ ಆತ್ಮೀಯರಾಗಿರುವ ಮತ್ತು ಊರಿನಲ್ಲಿ ತನ್ನ ನೆರೆಹೊರೆಯವರಾಗಿರುವ ಯತ್ನಾಳ್ ಅವರಿಗೆ ಇದು ತಿಳಿದಿರಲಿಲ್ಲ ಎನ್ನುವುದನ್ನು ನಂಬಲು ಸಾಧ್ಯವೇ? ರಾಜ್ಯ ಬಿಜೆಪಿ ಅಧ್ಯಕ್ಷತೆ ಮತ್ತು ವಿರೋಧ ಪಕ್ಷದ ನಾಯಕನ ಸ್ಥಾನ ತಪ್ಪಿ ಹೋಗಿರುವುದರಿಂದ ಯತ್ನಾಳ್ ಅವರು ಕೆರಳಿ ಕೆಂಡವಾಗಿದ್ದಾರೆ.

ಇದಕ್ಕೆ ಕಾರಣಕರ್ತರಾದ ಮೋದಿ ಮತ್ತು ಅಮಿತ್ ಶಾ ವಿರುದ್ಧ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದಲೇ ಮೌಲ್ವಿ ತನ್ವೀರ್ ಹಾಶ್ಮಿ ಜೊತೆಗಿನ ನನ್ನ ಫೋಟೋವನ್ನು ತೋರಿಸಿ ಆರೋಪ ಮಾಡಿದ್ದಾರೆ.

ಈ ಆರೋಪದ ನಂತರ ಮೌಲ್ವಿ ಅವರ ಜೊತೆಗಿನ ಪ್ರಧಾನಿ ಅವರ ಸಂಬಂಧದ ವಿವರವೂ ಹೊರಬರಲಿದೆ ಎನ್ನುವುದು ಅವರಿಗೆ ಖಂಡಿತ ಗೊತ್ತಿತ್ತು. ಅವೆಲ್ಲವೂ ಬಯಲಾಗಿ ಮೋದಿ ಮತ್ತು ಬಿಜೆಪಿ ನಾಯಕರು ಮುಜುಗರಕ್ಕೀಡಾಗಲಿ ಎನ್ನುವ ದುರುದ್ದೇಶದಿಂದ ನನ್ನ ವಿರುದ್ಧ ಆರೋಪ ಮಾಡುವ ಆಟ ಆಡಿದ್ದಾರೆ.

ಮೌಲ್ವಿ ಹಾಶ್ಮಿ ಅವರ ಜೊತೆಗಿನ ನನ್ನ ಸ್ನೇಹ ಸಂಬಂಧವನ್ನು ನಾನು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದೇನೆ. ಅವರೂ ಕೂಡಾ ತಮ್ಮ ಮೇಲಿನ ಆರೋಪದ ತನಿಖೆಯನ್ನು ಕೇಂದ್ರ ಸರ್ಕಾರವೇ ನಡೆಸಲಿ ಎಂದು ಸವಾಲು ಹಾಕಿದ್ದಾರೆ.

ಈಗ ಪ್ರಧಾನಿ ನರೇಂದ್ರ ಮೋದಿ ಅವರು ತನ್ನ ವಿರುದ್ಧದ ಆರೋಪಕ್ಕೆ ಪ್ರತಿಕ್ರಿಯಿಸಲೇಬೇಕಾಗುತ್ತದೆ. ಹಾಶ್ಮಿ ಅವರಿಗೆ ನಿಜವಾಗಿ ಐಸಿಎಸ್ ಜೊತೆ ಸಂಬಂಧ ಇದ್ದರೆ ಆ ಬಗ್ಗೆ ತನಿಖೆಗೆ ಪ್ರಧಾನಿಯವರು ತಕ್ಷಣ ಆದೇಶ ನೀಡಬೇಕು ಮತ್ತು ಹಾಶ್ಮಿ ಮತ್ತು ತನ್ನ ಸಂಬಂಧದ ವಿವರವನ್ನು ದೇಶದ ಮುಂದಿಡಬೇಕು. ಇದು ಎರಡೂ ಮಾಡದೆ ಇದ್ದರೆ ಇಂತಹ ಸುಳ್ಳು ಆರೋಪ ಮಾಡುವ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕ್ರಮವನ್ನಾದರೂ ಕೈಗೊಳ್ಳಬೇಕು.

ಬಸನಗೌಡ ಪಾಟೀಲ್ ಯತ್ನಾಳ್ ಈ ರೀತಿಯ ಆರೋಪಗಳನ್ನು ಮಾಡುವುದು ಇದೇ ಮೊದಲ ಸಲವೇನಲ್ಲ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಮಕ್ಕಳ ವಿರುದ್ಧ ಪುಂಖಾನುಪುಂಖವಾಗಿ ಆರೋಪ ಮಾಡಿದ್ದಾರೆ. ಬಿಜೆಪಿಯಲ್ಲಿ ಮುಖ್ಯಮಂತ್ರಿಯಾಗಬೇಕಾದರೆ ಪಕ್ಷದ ಹೈಕಮಾಂಡಿಗೆ ಎರಡು ಸಾವಿರ ಕೋಟಿ ರೂಪಾಯಿ ಕೊಡಬೇಕಾಗುತ್ತದೆ ಎನ್ನುವ ಗಂಭೀರ ಆರೋಪವನ್ನೂ ಅವರು ಮಾಡಿದ್ದಾರೆ.

ಈ ರೀತಿ ಬಹಿರಂಗವಾಗಿ ತಮ್ಮ ಪಕ್ಷದ ಉನ್ನತ ನಾಯಕರ ವಿರುದ್ಧವೇ ಆರೋಪ ಮಾಡುತ್ತಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರ ಬಾಯಿಬಲದ ಹಿಂದೆ ಇರುವ ಶಕ್ತಿ ಯಾವುದು, ಬಿಜೆಪಿಯಲ್ಲಿರುವ ಯಾವ 'ಜೀ'ಗಳ ಬಲದಿಂದ ಸ್ವಪಕ್ಷೀಯರ ವಿರುದ್ಧ ಇಂತಹ ಮಾನಹಾನಿಕರ ಆರೋಪ ಮಾಡಿಯೂ ಅವರೂ ಬಚಾವಾಗುತ್ತಿದ್ದಾರೆ ಎನ್ನುವುದು ಕೂಡಾ ಬಯಲಾಗಬೇಕಾಗಿದೆ.

ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಸುದ್ದಿಯ ಪ್ರಕಾರ, ತನ್ವೀರ್ ಹಾಶ್ಮಿ ಕುಟುಂಬದ ಜೊತೆಯಲ್ಲಿ ಯತ್ನಾಳ್ ಅವರಿಗೆ ವ್ಯಾಪಾರಿ ಸಂಬಂಧ ಕೂಡಾ ಇದೆ ಎನ್ನುವುದು ಬಯಲಾಗಿದೆ. ಯತ್ನಾಳ್ ಅವರ ಆರೋಪದಂತೆ ತನ್ವೀರ್ ಹಾಶ್ಮಿ ಅವರಿಗೆ ಐಸಿಸ್ ಜೊತೆ ಸಂಬಂಧ ಇರುವುದಾಗಿದ್ದರೆ ಅವರ ಜೊತೆಗೆ ವ್ಯವಹಾರದ ಪಾಲುದಾರರಾಗಿರುವ ಯತ್ನಾಳ್ ಅವರಿಗೆ ಅದು ಗೊತ್ತಿರಲಿಲ್ಲವೇ? ಗೊತ್ತಿದ್ದೂ ಸುಮ್ಮನಿರಲು ಕಾರಣವೇನು? ಇಷ್ಟು ಸಮಯದ ನಂತರ ಇಂತಹ ಆರೋಪ ಮಾಡಲು ಕಾರಣಗಳೇನು ಎನ್ನುವುದನ್ನು ಕೂಡಾ ಕೇಂದ್ರ ಸರ್ಕಾರ ತನಿಖೆ ನಡೆಸಬೇಕು.

ಮೋಡ ಬಿತ್ತನೆಗೆ ಸರ್ಕಾರದ ಒಲವು

ರಾಣೆಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡರ ಪ್ರಸ್ತಾಪಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಕಾರಾತ್ಮಕ ಪ್ರತಿಕ್ರಿಯೆ



ಬೆಂಗಳೂರು, ಡಿ.8(ಕೆಎಂಶಿ)–ರಾಜ್ಯ ಬರಗಾಲಕ್ಕೆ ತುತ್ತಾಗಿರುವ ಹಿನ್ನೆಲೆಯಲ್ಲಿ ಮೋಡ ಬಿತ್ತನೆ ಕಾರ್ಯಕ್ಕೆ ಸರ್ಕಾರ ಒಲವು ವ್ಯಕ್ತಪಡಿಸಿದೆ.

ವಿಧಾನಸಭೆಯಲ್ಲಿಂದು ಶೂನ್ಯವೇಳೆಯಲ್ಲಿ ರಾಣೆ ಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ ಅವರ ಪ್ರಸ್ತಾಪಕ್ಕೆ ಉತ್ತರಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಒಲವು ವ್ಯಕ್ತಪಡಿಸಿದ್ದಾರೆ.

ಪ್ರಕಾಶ್ ಕೋಳಿವಾಡ್ ಮಾತನಾಡಿ, ರಾಜ್ಯದಲ್ಲಿ ಡಿಸೆಂಬರ್ 11ರವರೆಗೂ ಮೋಡಗಳು ಹೆಚ್ಚಿರುತ್ತವೆ. ಹೀಗಾಗಿ ಮೋಡ ಬಿತ್ತನೆ ಮಾಡಿದರೆ ಒಳ್ಳೆಯ ಫಲಿತಾಂಶ ಬರಲಿದೆ. ಮಳೆಯಾದರೆ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಹಲವು ಸಮಸ್ಯೆಗಳು ಸುಧಾರಿಸುತ್ತವೆ ಎಂದರು.

ಪ್ರಸ್ತುತ ಕಡಿಮೆ ಖರ್ಚಿನಲ್ಲಿ ಮೋಡ ಬಿತ್ತನೆಗೆ ಅವಕಾಶವಿದೆ. ಈ ನಿಟ್ಟಿನಲ್ಲಿ ತಂತ್ರಜ್ಞರ ಜೊತೆ ತಾವು ಚರ್ಚೆ ಮಾಡಿದ್ದು, ಎಲ್ಲಾ ರೀತಿಯ ಸಿದ್ಧತೆಗಳೂ ಲಭ್ಯ ಇವೆ. ಸರ್ಕಾರ ಇಂದೇ ತೀರ್ಮಾನ ಮಾಡಿದರೆ ಮೋಡ ಬಿತ್ತನೆಯಾಗಲಿದೆ. ಜನರಿಗೆ ಅನುಕೂಲವಾಗಲಿದೆ ಎಂದರು.

ಆಡಳಿತ ಪಕ್ಷದ ಶಾಸಕ ಕೋನರೆಡ್ಡಿ ಇದಕ್ಕೆ ಬೆಂಬಲ ವ್ಯಕ್ತಪಡಿಸಿದಾಗ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಮಾತನಾಡಿ, ಮೋಡ ಬಿತ್ತನೆಗೆ ಉಪಮುಖ್ಯಮಂತ್ರಿಯವರು ಉತ್ತರಿಸುತ್ತಾರೆ ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಪ್ರಕಾಶ್ ಕೋಳಿವಾಡ ಅವರು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಮೋಡ ಬಿತ್ತನೆ ಮಾಡುವ ಕಂಪನಿಗಳ ಜೊತೆ ಈಗಾಗಲೇ ಮಾತುಕತೆ ನಡೆಸಿದ್ದಾರೆ. ಸ್ವಂತ ಖರ್ಚಿನಲ್ಲಿ ಮೋಡ ಬಿತ್ತನೆ ಮಾಡಲು ಕೂಡ ಅವರು ಆಸಕ್ತಿ ತೋರಿಸಿದ್ದಾರೆ ಎಂದರು. ಜನರಿಗೆ ಒಳ್ಳೆಯದನ್ನು ಮಾಡಬೇಕೆನ್ನುವ ಅವರ ಆಸಕ್ತಿ ಶ್ಲಾಘನೀಯ. ನಾನು ಕೂಡ ಮೋಡ ಬಿತ್ತನೆಯ ಪರವಾಗಿದ್ದೇನೆ. ಆದರೆ, ಕೆಲವು ತಾಂತ್ರಿಕ ತೊಂದರೆಗಳಿವೆ. ಟೆಂಡರ್ ಕರೆಯುವುದೂ ಸೇರಿದಂತೆ ಹಲವಾರು ಪ್ರಕ್ರಿಯೆಗಳನ್ನು ಅನುಸರಿಸಬೇಕು. ಆದರೂ ತಾವು ಹಣಕಾಸು ಇಲಾಖೆಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಯಾವ ರೀತಿ ನೆರವು ನೀಡಬಹುದೆಂಬುದನ್ನು ಪರಿಶೀಲಿಸುತ್ತೇನೆ ಎಂದು ಭರವಸೆ ನೀಡಿದರು. ಮೋಡ ಬಿತ್ತನೆಯನ್ನು ಈಗಾಗಲೇ ಹಲವು ರಾಜ್ಯಗಳು ಜಾರಿಗೊಳಿಸಿವೆ. ರಾಜ್ಯದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಕಾಣಸಿಗುವ ಮೋಡಗಳ ಸದ್ಬಳಕೆಗಾಗಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಪ್ರಕಾಶ್ ಕೋಳಿವಾಡ್ ಮಾತನಾಡಿ, ಒಂದು ವೇಳೆ ಸರ್ಕಾರಕ್ಕೆ ನಿರ್ಧಾರ ತೆಗೆದುಕೊಳ್ಳಲು ವಿಳಂಬವಾಗುವುದಾದರೆ ಚಿಂತೆ ಇಲ್ಲ. ನನ್ನ ಸ್ವಂತ ಖರ್ಚಿನಲ್ಲೇ ಮೋಡ ಬಿತ್ತನೆ ಮಾಡಿಸುತ್ತೇನೆ. ಮುಖ್ಯ ಕಾರ್ಯದರ್ಶಿಯವರಿಂದ ಅನುಮತಿ ಕೊಡಿಸಿ ಸಾಕು ಎಂದು ಮನವಿ ಮಾಡಿದರು.

ವಿಶ್ವ ವಿಖ್ಯಾತ ದಸರಾ ಆನೆ ಅರ್ಜುನನಿಗೆ ಶ್ರದ್ಧಾಂಜಲಿ



ಮೈಸೂರು, ಡಿ. 8–ಅರಣ್ಯ ಇಲಾಖೆಯ ಬೇಜವಾಬ್ದಾರಿಯಿಂದ ಅನುಭವವಿಲ್ಲದ ಗಾರ್ಡ್ಸ್ ಕೈಯ್ಯಲ್ಲಿ ಬಂದೂಕು ಕೊಟ್ಟು ಗಜ ಗಾಂಭೀರ್ಯ ಮೆರೆಯುವ ಅರ್ಜುನ ಮೇಲೆ ಗುಂಡು ತಗುಲಿ ಸಾವನ್ನಪ್ಪಿರುವುದು ದುರಂತ. ಅರಣ್ಯ ಅಧಿಕಾರಿಗಳು ಪ್ರಾಣಿ ಕಾಪಾಡುವ ರಕ್ಷಕರಾಗಬೇಕು ಹೊರತು ಅವರೇ ಅಪಾಯಕಾರಿಯಾಗಿದ್ದಾರೆ. ಎರಡು ಆನೆಗಳು ಕಾದಾಡುವಾಗ ಗಾಳಿಯಲ್ಲಿ ಗುಂಡಾರಿಸಬೇಕು. ಅದು ಬಿಟ್ಟು ಆಯತಪ್ಪಿ ಅರ್ಜುನನಿಗೆ ಬಿದ್ದಿದೆ ಎಂದು ಹೇಳುವುದು ಸರಿಯಲ್ಲ. ಅಧಿಕಾರಿಗಳು ಆನೆಯ ಮೇಲೆ ಗುಂಡು ಹಾರಿಸಬೇಕಾಗಿದ್ದರೆ ಅರ್ಜುನನ ಯಾಕೆ ಕರೆದುಕೊಂಡು ಹೋಗಬೇಕಾಗಿತ್ತು. ಅವರೇ ನೇರವಾಗಿ ಪುಂಡಾನೆಗೆ ಹೊಡಿಯಬಹುದಿತ್ತಲ್ಲ.

ಅನುಭವ ಇಲ್ಲದವರನ್ನು ಕಾಡಿಗೆ ಕರೆದುಕೊಂಡು ಹೋದರೆ ಏನಾಗುತ್ತದೆ ಎಂಬುದಕ್ಕೆ ಈ ದುರಂತ ಉದಾಹರಣೆಯಾಗಿದೆ. ಅರ್ಜುನನ ಸಾವಿಗೆ ನೇರ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳೇ ಕಾರಣ ಇದುವರೆಗೂ ಅರಣ್ಯ ಸಚಿವರು ಇವರನ್ನು ಅಮಾನತು ಮಾಡುವ ಆದೇಶವನ್ನು ಹೊರಡಿಸಿಲ್ಲ. ಇಡೀ ಮಂತ್ರಿಮಂಡಲವೇ ಅಧಿವೇಶನದಲ್ಲಿ ಬೊಬ್ಬೆ ಹೊಡೆಯುತ್ತಿದ್ದಾರೆ. ಇವರಿಗೆ ಕಾಡು ಪ್ರಾಣಿಗಳ ಮೇಲೆ ಕಿಂಚಿತ್ತೂ ಅಕ್ಕರೆ ಇಲ್ಲ. ಇಂತಹ ಜನಪ್ರತಿನಿಧಿಗಳಿಂದ ಕಾಡೇ ನಾಶವಾಗುವ ಕಾಲ ದೂರವಿಲ್ಲ. ಇವರೆಲ್ಲರಿಗೂ ತಕ್ಕ ಪಾಠ ಕಲಿಸುವ ಕೆಲಸವನ್ನು ಸಾರ್ವಜನಿಕರು ಮತ್ತು ಪ್ರಾಣಿ ಪ್ರಿಯರು ಮಾಡಬೇಕೆಂದು ಮೈಸೂರು ಕನ್ನಡ ವೇದಿಕೆ ಒತ್ತಾಯಿಸುತ್ತಿದೆ. ಶ್ರದ್ಧಾಂಜಲಿ ಸಭೆಯಲ್ಲಿ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗೋವಿಂದರಾಜ್, ಪ್ಯಾಲೆಸ್ ಬಾಬು, ಸಂತೋಷ್ ಮತ್ತಿತರರು ಇದ್ದರು.

ಅಂಬೇಡ್ಕರ್ ಜೀವನ ಚರಿತ್ರೆ ಓದಿ, ಜ್ಞಾನ ಸಂಪಾದಿಸಿ

ವಿದ್ಯಾರ್ಥಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಸಲಹೆ



ಹುಣಸೂರು, ಡಿ.8– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಚರಿತ್ರೆಯನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಓದುವ ಮೂಲಕ ಅವರಂತೆ ಜ್ಞಾನ ಸಂಪಾದಿಸಬೇಕು ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ಸಲಹೆ ನೀಡಿದರು.

ನಗರದ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಆಡಳಿತದಿಂದ ಏರ್ಪಡಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ದಿನಾಚರಣೆಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ತಮ್ಮ ಶಾಲಾ ಕಾಲೇಜು ದಿನಗಳಲ್ಲಿ ಹೆಚ್ಚಿನ ಶೋಷಣೆಗೆ ಒಳಗಾಗಿ ಸಾಕಷ್ಟು ಕಷ್ಟ ಅನುಭವಿಸಿದ್ದರು. ಶೋಷಿತರ ಸಮಸ್ಯೆಗಳನ್ನು ಅರಿತಿದ್ದ ಅವರು ತಾವು ಅನುಭವಿಸಿದ ಕಷ್ಟಗಳನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮಹಾನ್ ಸಾಧನೆ ಮಾಡಿ ವಿಶ್ವಜ್ಞಾನಿಯಾದರು ಎಂದರು.

ಇಂದಿಗೂ ಸಮಾಜದಲ್ಲಿ ಅಸ್ಪೃಶ್ಯತೆ, ಅಸಮಾನತೆ ಇರುವುದು ಬೇಸರದ ಸಂಗತಿ. ಅಂಬೇಡ್ಕರ್ ಅವರನ್ನು ಒಂದು ಜಾತಿ, ವರ್ಗ, ಸಮುದಾಯಕ್ಕೆ ಸಿಮೀತಗೊಳಿಸದೇ ಅವರನ್ನು ವಿಶ್ವಜ್ಞಾನಿಯಾಗಿ ಕಾಣಬೇಕು. ಅವರು ನೀಡಿದ ಸಂವಿಧಾನವೇ ಅವರ ಅಸ್ತಿತ್ವನ್ನೇ ಸೂಚಿಸುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅಂಬೇಡ್ಕರ್ ಜೀವನ ಚರಿತ್ರೆ ಓದಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಜೀವನದಲ್ಲಿ ಸಾಧನೆ ಮಾಡಬೇಕು ಎಂದರು.

ಇದೇ ವೇಳೆ ಶಾಲಾ ಕಾಲೇಜು ವಿದ್ಯಾರ್ಥಿಗಳ ಬಸ್ ಸಮಸ್ಯೆ ನಿವಾರಿಸಿ ಎಂದು ನೀಡಿದ ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಯಿಂದಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಾರಿಗೆ ಬಸ್‌ಗಳಲ್ಲಿ ಸಂಚರಿಸುತ್ತಿದ್ದಾರೆ ಆದರೆ ಶಾಲಾ ಕಾಲೇಜು ವೇಳೆ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲು ಸರ್ಕಾರ ಮುಂದಾದರೆ ಸಮಸ್ಯೆ ಪರಿಹಾರವಾಗಲಿದೆ. ಈ ಬಗ್ಗೆ ನಾನು ವಿಧಾನಸಭೆಯಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆಯುತ್ತೇನೆ ಎಂದರು.

ಸರ್ಕಾರಿ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಕೆ.ಪಿ.ಪ್ರಸನ್ನ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಅಂಕ ಗಳಿಕೆಗಾಗಿ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಓದುವ ಪರಿಸ್ಥಿತಿ ಎದುರಾಗಿರುವುದು ದುರಂತದ ಸಂಗತಿ. ಅಂಬೇಡ್ಕರ್ ಅವರು ಶಾಲಾ ಕಾಲೇಜು ದಿನಗಳಲ್ಲಿ ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದರಿಂದ ಹೋರಾಟದ ಹಾದಿ ಹಿಡಿದರು. ಅಲ್ಲದೇ ಮಕ್ಕಳ ಹಕ್ಕಿಗಾಗಿ ಹೋರಾಡಿ ಮಂತ್ರಿ ಪದವಿ ತ್ಯಜಿಸಿದ ಅಂಬೇಡ್ಕರ್ ಎಲ್ಲಾ ಧರ್ಮಗಳ ಬಗ್ಗೆ ಅಧ್ಯಯನ ಮಾಡಿ, ಕೊನೆಗೆ 3 ಲಕ್ಷ ಜನರ ಸಮ್ಮುಖದಲ್ಲಿ ಬೌದ್ಧ ಧರ್ಮಕ್ಕೆ ಸೇರಿದರು ಎಂದರು.

ಇದೇ ವೇಳೆ ದಲಿತ ಮುಖಂಡರಾದ ಹರಿಹರ ಆನಂದಸ್ವಾಮಿ, ನಿಂಗರಾಜ ಮಲ್ಲಾಡಿ, ಹೆಚ್.ಎಸ್.ವರದರಾಜು, ಪ್ರಸನ್ನ ಮಾತನಾಡಿದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮಂಜುನಾಥ್, ಇಓ ಮನು, ಕಾಲೇಜಿನ ಸಿಡಿಸಿ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್, ಎಸ್‌ಐ ಜಮೀರ್ ಅಹಮದ್, ಸಿಡಿಪಿಓ ರಶ್ಮಿ, ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ, ಸರವಣ, ಹೆಚ್.ಪಿ. ಸತೀಶ್ ಕುಮಾರ್, ಮುಖಂಡರಾದ ರತ್ನಪುರಿ ಪುಟ್ಟಸ್ವಾಮಿ, ವಕೀಲ ಪುಟ್ಟರಾಜು, ಚಿಕ್ಕಸ್ವಾಮಿ, ಹೆಚ್.ವೈ.ಮಹದೇವು, ಬಸವಲಿಂಗಯ್ಯ, ಕೊಳಘಟ್ಟ ಕೃಷ್ಣ, ಅಸ್ವಾಳ್ ಕೆಂಪೇಗೌಡ, ಗೋವಿಂದೇಗೌಡ, ಕಿರಂಗೂರು ಸ್ವಾಮಿ, ಡಿ.ಕುಮಾರ್ ಇತರರಿದ್ದರು.

ಆಧುನಿಕ ಕೃಷಿ ತಂತ್ರಜ್ಞಾನದ ಬಗ್ಗೆ ತರಬೇತಿ



ಹೆಚ್.ಡಿ.ಕೋಟೆ, ಡಿ.8– ಪಟ್ಟಣದ ಲ್ಯಾಂಪ್ಸ್ ಸೊಸೈಟಿ ಕಚೇರಿ ಆವರಣದಲ್ಲಿ ಭಾರತೀಯ ಸಂಶೋಧನಾ ಲ್ಯಾಮ್ಸ್ ಸಂಯುಕ್ತಾಶ್ರಯದಲ್ಲಿ ಪರಿಶಿಷ್ಟ ಜಾತಿ, ಪಂಗಡದ ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡಲಾಯಿತು.

ಕಾರ್ಯಕ್ರಮವನ್ನು ಐಹೆಚ್‌ಆರ್ ಸಂಸ್ಥೆ ಪ್ರಧಾನ ವಿಜ್ಞಾನಿ ಡಾ.ಸೆಂಥೀಲ್ ಕುಮಾರ್ ಉದ್ಘಾಟಿಸಿ ಮಾತನಾಡಿ, ರೈತರು ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಉತ್ತಮ ಬೆಳೆ ಬೆಳೆಯುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಜ್ಞಾನಿ ಡಾ.ವಿ.ಶಂಕರ್, ಲ್ಯಾಂಪ್ಸ್ ಸೊಸೈಟಿಯ ಪುಟ್ಟಬಸವ, ಮಾಜಿ ಅಧ್ಯಕ್ಷ ಕಾವೇರ, ಕಾರ್ಯದರ್ಶಿ ಸಿದ್ದರಾಜು, ಲ್ಯಾಂಪ್ಸ್ ನಿರ್ದೇಶಕರಾದ ಸಿದ್ದರಾಜು, ದೇವರಾಜು, ಜಯರಾಜು, ರೈತರಾದ ಗೋಪಾಲ್, ಬ್ಯಾಟರಾಯಸ್ವಾಮಿ ಇದ್ದರು.

ಇದೇ ವೇಳೆ ಶಿಬಿರಾರ್ಥಿಗಳಿಗೆ ಸೀಬೆ, ಮಾವು ಗಿಡ, ಉತ್ತಮ ತಳಿಯ ಮೆಣಸಿಬೀಜ, ಟಮೋಟೋ ಬೀಜಗಳನ್ನು ವಿತರಿಸುವುದರ ಜೊತೆಗೆ ಗೊಬ್ಬರ ವಿತರಿಸಲಾಯಿತು.

ಟಾಟಾ ಏಸ್ ಪಲ್ಟಿ: 11 ಮಂದಿಗೆ ಗಾಯ



ನಂಜನಗೂಡು, ಡಿ.8– ಚಾಲಕನ ನಿಯಂತ್ರಣ ತಪ್ಪಿದ ಟಾಟಾ ಏಸ್ ಪಲ್ಟಿಯಾಗಿ 9 ಮಂದಿ ವಿದ್ಯಾರ್ಥಿಗಳು ಸೇರಿದಂತೆ 11 ಮಂದಿ ಗಾಯಗೊಂಡಿರುವ ಘಟನೆ ಶುಕ್ರವಾರ ಬೆಳಗ್ಗೆ ತಾಲೂಕಿನ ಹೆಡಿಯಾಲ ಸಮೀಪದ ಈರೇಗೌಡನಹುಂಡಿಯಲ್ಲಿ ನಡೆದಿದೆ.

ನಂಜನಗೂಡು ತಾಲೂಕಿನ ನಾಗಣಪುರ ಬಳ್ಳೂರು ಹುಂಡಿ, ನಾಗಣಾಪುರ ಹಾಗೂ ಮಹದೇವನಗರದಿಂದ ಹೆಡಿಯಾಲ ಗ್ರಾಮದ ಪ್ರೌಢಶಾಲೆಗೆ ತೆರಳಲು 9 ಮಂದಿ ವಿದ್ಯಾರ್ಥಿಗಳು ಖಾಸಗಿ ಹಾಲಿನ ಡೈರಿಯೊಂದರ ಟಾಟಾ ಏಸ್ ಗೂಡ್ಸ್ ವಾಹನ ಹತ್ತಿದ್ದಾರೆ. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಟಾಟಾ ಏಸ್ ಈರೇಗೌಡನ ಹುಂಡಿ ಸಮೀಪ ಪಲ್ಟಿ ಹೊಡೆದಿದೆ. ಪರಿಣಾಮ ವಾಹನದಲ್ಲಿದ್ದ ಅನುಷಾ, ಬೇಬಿ, ಅಂಜಲಿ, ಕುಮಾರಿ, ಮಿಲನ, ಕೌಸಲ್ಯ, ವಿನೋದ, ಸೋಮಣ್ಣ ಹಾಗೂ ಮಣಿಕಂಠ ಎಂಬ ವಿದ್ಯಾರ್ಥಿಗಳು ಸೇರಿದಂತೆ ಇದೇ ವಾಹನದಲ್ಲಿದ್ದ ಬಳ್ಳೂರುಹುಂಡಿ ನಿವಾಸಿಗಳಾದ ಉದಯ್ ಹಾಗೂ ಮಹೇಶ ಎಂಬುವರೂ ಗಾಯಗೊಂಡಿದ್ದಾರೆ. ಈ ವೇಳೆ ಸ್ಥಳದಲ್ಲಿದ್ದವರು ತಕ್ಷಣ ಗಾಯಗೊಂಡಿದ್ದವರನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು, ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಲ್ಲಹಳ್ಳಿ ಪೊಲೀಸ್ ಠಾಣೆ ಎಸ್‌ಐ ರಮೇಶ್ ಕಿರಕಿಕಟ್ಟೆ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ವಾಹನವನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನೆ ಬಳಿಕ ವಾಹನ ಚಾಲಕ ಪರಾರಿಯಾಗಿದ್ದು, ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂವಿಧಾನದಿಂದ ಹಿಂದುಳಿದ ವರ್ಗದವರಿಗೆ ಅಧಿಕಾರ

ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ



ಕೆ.ಆರ್.ನಗರ, ಡಿ.8– ಇಡೀ ಜಗತ್ತಿಗೆ ಮಾದರಿಯಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನದಿಂದ ಹಿಂದುಳಿದ ವರ್ಗದವರು ಹಾಗೂ ಶೋಷಿತರು ರಾಜಕೀಯ ಅಧಿಕಾರ ಪಡೆಯುವಂತಾಯಿತು ಎಂದು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ತಿಳಿಸಿದರು.

ಪಟ್ಟಣದ ಹಾಸನ–ಮೈಸೂರು ಮುಖ್ಯ ರಸ್ತೆಯಲ್ಲಿರುವ ಅಂಬೇಡ್ಕರ್ ಪುತ್ಥಳಿ ಬಳಿ ನಡೆದ ಬಾಬಾ ಸಾಹೇಬರ 67ನೇ ಪರಿನಿಬ್ಬಾಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ಯುಗ ಪುರುಷನನ್ನು ಒಂದು ಜಾತಿಗೆ ಸೀಮಿತಗೊಳಿಸದೇ ಸರ್ವರೂ ಗೌರವದಿಂದ ಕಾಣಬೇಕು ಎಂದರು.

ಅಂಬೇಡ್ಕರ್ ಜಯಂತಿ ಮತ್ತು ಪರಿ ನಿರ್ವಾಹಣಾ ದಿನಗಳನ್ನು ಆಚರಿಸುವಾಗ ಅವರ ಸಾಧನೆ ಮತ್ತು ಸಂಕಷ್ಟಗಳನ್ನು ಯುವಜನತೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸುವ ಮೂಲಕ ಮಹನೀಯರ ತತ್ವಾದರ್ಶಗಳನ್ನು ಪಾಲಿಸುವಂತೆ ಪ್ರೇರಣೆ ನೀಡಬೇಕು ಎಂದರು.

ಪಟ್ಟಣದಲ್ಲಿ ನಿರ್ಮಿಸುತ್ತಿರುವ ಅಂಬೇಡ್ಕರ್ ಭವನ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ ಕೊಡಿಸಲಾಗಿದೆ. ಮೂರು ವರ್ಷದೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡುವ ಜೊತೆಗೆ ಅಂಬೇಡ್ಕರ್ ಪುತ್ಥಳಿಯನ್ನು ಹೊಸದಾಗಿ ನಿರ್ಮಿಸಲು ಉದ್ದೇಶಿಸಿದ್ದು, ಇದಕ್ಕೆ ಎಲ್ಲರೂ ತಮ್ಮ ಸಲಹೆ ಮತ್ತು ಸಹಕಾರ ನೀಡಬೇಕು. ರಾಜಕೀಯ ರಹಿತವಾಗಿ ಸಂವಿಧಾನ ಶಿಲ್ಪಿ ಆಶಯ ಈಡೇರಿಸಲು ಶಾಸಕ ಡಿ.ರವಿಶಂಕರ್ ಜೊತೆ ಇರಬೇಕು ಎಂದು ಮನವಿ ಮಾಡಿದರು.

ಜಿಪಂ ಮಾಜಿ ಸದಸ್ಯ ರಾಜಯ್ಯ, ತಾಪಂ ಮಾಜಿ ಅಧ್ಯಕ್ಷ ಎಂ.ಹೆಚ್.ಸ್ವಾಮಿ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಕಾಂತರಾಜು ರಾಜಯ್ಯ, ದಲಿತ ಮುಖಂಡರಾದ ಹನಸೋಗೆ ನಾಗರಾಜು, ಡಿ.ಕೆ.ಕೊಪ್ಪಲುರಾಜಯ್ಯ, ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಎಸ್.ಎಂ. ಅಶೋಕ್ ಮಾತನಾಡಿದರು. ನಿವೃತ್ತ ಉಪನ್ಯಾಸಕ ಕೃಷ್ಣ ಅಂಬೇಡ್ಕರ್ ಜೀವನ ಮತ್ತು ಸಾಧನೆಗಳ ಬಗ್ಗೆ ಉಪನ್ಯಾಸ ನೀಡಿದರು. ಈ ಸಂದರ್ಭ ಅಂಬೇಡ್ಕರ್ ಗೀತೆಗಳನ್ನಾಡಿದ ಅಭಿಮಾನಿಗಳು ಅವರಿಗೆ ನುಡಿನಮನ ಸಲ್ಲಿಸಿ ಸಂವಿಧಾನ ಶಿಲ್ಪಿ ಪರ ಜಯಘೋಷ ಮೊಳಗಿಸಿದರು.

ಈ ವೇಳೆ ಪುರಸಭೆ ಸದಸ್ಯರಾದ ಶಂಕರ್ ಸ್ವಾಮಿ, ಶಿವು ನಾಯಕ್, ಮಾಜಿ ಸದಸ್ಯ ಕೆ.ವಿನಯ್, ಮಾದಿಗ ಸಂಘರ್ಷ ಸಮಿತಿ ಅಧ್ಯಕ್ಷ ಎಂ.ಎಸ್.ರವಿಕುಮಾರ್, ಆದಿ ಜಾಂಬವ ಸಂಘದ ಅಧ್ಯಕ್ಷ ಎಂ. ಲೋಕೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಎಸ್‌ಸಿ ವಿಭಾಗದ ಅಧ್ಯಕ್ಷರಾದ ನಂದೀಶ್, ಕಂಠಿಕುಮಾರ್, ದೊಡ್ಡೇಕೊಪ್ಪಲು ಗ್ರಾಪಂ ಸದಸ್ಯ ಕೆ.ಪಿ. ಜಗದೀಶ್, ಮುಖಂಡರಾದ ಚೆಲುವರಾಜು, ಗರುಡಗಂಭಸ್ವಾಮಿ, ಮಂಜುರಾಜ್, ಕೆಂಪಯ್ಯ, ಕುಮಾರ್, ಸುರೇಶ್, ನಂಜಯ್ಯ, ಯಶವಂತ್, ಕೀರ್ತಿರಾಜ್, ತಾಪಂ ಇಓ ಜಿ.ಕೆ.ಹರೀಶ್, ಮುಖ್ಯಾಧಿಕಾರಿ ಡಾ.ಜಯಣ್ಣ, ಬಿಇಓ ಆರ್.ಕೃಷ್ಣಪ್ಪ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ವಿವಿಧ ಸಮಾಜಗಳ ಮುಖಂಡರು ಹಾಜರಿದ್ದರು.



ಕಂಪಲಾಪುರದ ಗೋಣಹಳ್ಳಿ ಮಾರಮ್ಮ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ವಿಶೇಷ ಪೂಜೆ ನೆರವೇರಿತು. ಇದೇ ವೇಳೆ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.



ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಯಳಂದೂರು ತಾಲೂಕಿನ ಹೊನ್ನೂರು ಗ್ರಾಮಸ್ಥರು, ಶ್ರೀ ಅಮ್ಮನವರ (ದೇವರ ಒಕ್ಕಲಿನ) ಭಕ್ತರು ರುದ್ರಾಕ್ಷಿ ಮಂಟಪ ಕೊಡುಗೆ ನೀಡಿದರು. ಈ ವೇಳೆ ಅನ್ನಸಂತರ್ಪಣೆ ನಡೆಯಿತು.



ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಪ್ರೌಢಶಾಲೆಗಳ ರಾಜ್ಯ ಮಟ್ಟದ ಬಾಲಕರ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಕೂಟದಲ್ಲಿ ಪಿರಿಯಾಪಟ್ಟಣ ತಾಲೂಕಿನ ಬೆಣಗಾಲು ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಬಿ.ವಿ.ಕೇಶವ, ಬಿ.ಆರ್.ಅಣ್ಣಯ್ಯ ರವಿಕಿರಣ್, ನಿತಿನ್ ಕುಮಾರ್, ಪ್ರಶಾಂತ್ ಅವರನ್ನು ಪಿರಿಯಾಪಟ್ಟಣ ಬಿಇಓ ಬಸವರಾಜು, ಶಿಕ್ಷಣ ಸಂಯೋಜಕ ಗಣೇಶ್, ಸತೀಶ್, ಶಾಲೆಯ ಮುಖ್ಯ ಶಿಕ್ಷಕ ನೂರುಲ್ಲಾ, ಶಿಕ್ಷಕರಾದ ಮಹೇಶ್, ಸುಲೇಮಾನ್, ಮಂಜುನಾಥ್, ದಿನೇಶ್, ಜ್ಯೋತಿ, ಶಶಿಕಲಾ, ಉಮೇಶ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು, ಗ್ರಾಮಸ್ಥರು ಅಭಿನಂದಿಸಿದರು.

ಶೋಷಿತರ ಜ್ಞಾನದ ಬೆಳಕು ಡಾ.ಅಂಬೇಡ್ಕರ್



ಮಲ್ಕುಂಡಿ: ಡಾ.ಬಿ.ಆರ್.ಅಂಬೇಡ್ಕರ್ ಶೋಷಿತ ಸಮುದಾಯಗಳಿಗೆ ಸಂವಿಧಾನದ ಮೂಲಕ ಶಕ್ತಿ ನೀಡಿ ಜ್ಞಾನದ ಬೆಳಕಾಗಿದ್ದಾರೆ ಎಂದು ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್ ತಿಳಿಸಿದರು.

ಗ್ರಾಮದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣ ದಿನ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರು ಅಸ್ಪೃಶ್ಯತೆ ನೋವನ್ನು ಅನುಭವಿಸಿ ಜ್ಞಾನ ಸಂಪಾದಿಸಿ ಸಂವಿಧಾನದ ಮೂಲಕ ದನಿ ಇಲ್ಲದ ತಳ ಸಮುದಾಯಗಳಿಗೆ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ನೆರವಾಗಿದ್ದಾರೆ. ಇಂತಹ ಮಹಾ ಪುರುಷರ ಚಿಂತನೆಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.


ಈ ವೇಳೆ ಮುಖಂಡರಾದ ಶಿವಕುಮಾರ್, ಶಿವರುದ್ರ, ಕೇಬಲ್ ಶಿವು, ವೆಂಕಟರಾಜು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಡಿ.24, ಹಿರಿಯೂರು ಡೈರಿ ನಿರ್ದೇಶಕರ ಚುನಾವಣೆ

ತಿ.ನರಸೀಪುರ: ಹಿರಿಯೂರು ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಚುನಾವಣೆ ಡಿ.24ರಂದು ನಡೆಯಲಿದ್ದು, ಡಿ.10 ರಿಂದ 16ರವರೆಗೆ ಸಂಘದ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಕಾರ್ಯ ನಿರ್ವಹಣಾಧಿಕಾರಿ ಶಿವಕುಮಾರ್ ಮತ್ತು ರಿಟರ್ನಿಂಗ್ ಆಫೀಸರ್ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ದೇಶದ ಅಭಿವೃದ್ಧಿಗೆ ಅಂಬೇಡ್ಕರ್ ಕೊಡುಗೆ ಅಪಾರ

ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರುಹಟ್ಟಿ ಮಹದೇವಯ್ಯ



ತಿ.ನರಸೀಪುರ, ಡಿ.8– ಅಂಬೇಡ್ಕರ್ ಕೇವಲ ಒಂದು ಜಾತಿಗೆ ಸೀಮಿತರಲ್ಲ. ಸಮಾಜಕ್ಕೆ ಅಪಾರ ಕೊಡುಗೆ ನೀಡಿರುವ ಅವರು ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳನ್ನು ನೀಡಿದ್ದಾರೆ ಎಂದು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರುಹಟ್ಟಿ ಮಹದೇವಯ್ಯ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 67ನೇ ಮಹಾ ಪರಿನಿರ್ವಾಣ ದಿನದ ಹಿನ್ನೆಲೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಇಂದಿಗೆ ಯುವಪೀಳಿಗೆ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಅರ್ಥ ಮಾಡಿಕೊಂಡರೇ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದರು.

ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಡಿ, ಸಮ ಸಮಾಜಕ್ಕಾಗಿ ಶ್ರಮಿಸಿದ ಅಂಬೇಡ್ಕರ್ ನಮಗೆಲ್ಲರಿಗೂ ಆದರ್ಶಪ್ರಾಯರಾಗಿದ್ದಾರೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸ್ವಾತಂತ್ರ್ಯ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಭಾರತದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಭಾರತ ಸಂವಿಧಾನ ರಚಿಸಲು ಡಾ.ಬಿ.ಆರ್.ಅಂಬೇಡ್ಕರ್ ಹಗಲಿರುಳು ಶ್ರಮಿಸಿದ್ದಾರೆ. ಭಾರತದ ಎಲ್ಲಾ ವರ್ಗದ ಕಟ್ಟಕಡೆ ಜನರಿಗೂ ಸಂವಿಧಾನದ ಸೌಲಭ್ಯ ತಲುಪುವಲ್ಲಿ ಶ್ರಮಿಸಿದ್ದಾರೆ ಎಂದರು.

ಅಂಬೇಡ್ಕರ್ ಅವರ ಸಾರ್ಥಕ ಬದುಕಿನ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಶೋಷಿತ ಸಮುದಾಯಗಳ ಏಳಿಗೆಗೆ ಇಡೀ ಜೀವನವನ್ನೇ ತ್ಯಾಗ ಮಾಡಿದ್ದಾರೆ ಎಂದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸಮಾನವಾಗಿ ಬದುಕಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಮಹಿಳೆಯರಿಗೆ ಸಮಾನ ಹಕ್ಕು, ಕಾರ್ಮಿಕರ ಕಲ್ಯಾಣ, ಶಿಕ್ಷಣ ಹಾಗೂ ಸ್ವಾತಂತ್ರದ ಹಕ್ಕಿಗಾಗಿ ಹೋರಾಡಿದ್ದಾರೆ. ದೇಶಕ್ಕೆ ಸಶಕ್ತ ಸಂವಿಧಾನ ನೀಡುವ ಮೂಲಕ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಒಂದು ಮೂರ್ತರೂಪ ನೀಡಿದರು. ವಿಶ್ವದಲ್ಲಿಯೇ ಮಾದರಿಯಾದ ಭಾರತದ ಸಂವಿಧಾನ ಸಮಾನತೆ, ಭ್ರಾತೃತ್ವ ಸೌಹಾರ್ದತೆ ಸಾರುತ್ತದೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಡಿಎಸ್‌ಎಸ್ ಸಂಚಾಲಕ ಸೋಸಲೆ ಶಶಿಕಾಂತ್, ಪುರಸಭಾ ಸದಸ್ಯ ಪ್ರಕಾಶ್, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಮಹೇಶ್, ಭೈರಾಪುರ ಗ್ರಾಪಂ ಮಾಜಿ ಸದಸ್ಯ ಎಂ.ಮಿಥುನ್, ನಂಜುಂಡಯ್ಯ, ಸೀನಪ್ಪ ಕೆಂಚಯ್ಯ ಮತ್ತಿತರರಿದ್ದರು.

ಡಿ.11, ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವ

ತಿ.ನರಸೀಪುರ, ಡಿ.8– ಪಟ್ಟಣದ ಪುರಸಭೆ ವ್ಯಾಪ್ತಿಗೊಳಪಡುವ ಆಲಗೂಡು ಗ್ರಾಮದಲ್ಲಿ ಶ್ರೀಸಿದ್ದೇಶ್ವರ ಜಾತ್ರಾ ಮಹೋತ್ಸವ ಹಾಗೂ ದೇವಸ್ಥಾನ ರಾಜಗೋಪುರ, ಪ್ರಸಾದ ಭವನದ ಶಂಕುಸ್ಥಾಪನೆ ಕಾರ್ಯಕ್ರಮ ಡಿ.11ರಂದು ನಡೆಯಲಿದೆ ಎಂದು ದೇವಸ್ಥಾನ ಸೇವಾ ಸಮಿತಿ ಮುಖ್ಯಸ್ಥ ಆಲಗೂಡು ನಾಗರಾಜು ತಿಳಿಸಿದ್ದಾರೆ.

ದೇವಾಲಯದ 3ನೇ ವಾರ್ಷಿಕೋತ್ಸವ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮಗಳ ಜೊತೆಗೆ ದೇವಸ್ಥಾನದ ರಾಜಗೋಪುರ ಮತ್ತು ಪ್ರಸಾದ ಭವನಕ್ಕೆ ಶಂಕುಸ್ಥಾಪನೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಭೂಮಿ ಪೂಜೆ ನೆರವೇರಿಸಲಿದ್ದಾರೆ.

ಸಿದ್ದೇಶ್ವರಸ್ವಾಮಿ ಜಾತ್ರೆ ಹಾಗೂ ಪ್ರತಿ ವರ್ಷ ಕಡೇ ಕಾರ್ತಿಕ ಸೋಮವಾರದಂದು ವಿಶೇಷ ಪೂಜಾ ಕಾರ್ಯಕ್ರಮ ನಡೆಸುತ್ತಾ ಬಂದಿದ್ದು, ಸೋಮವಾರ ಬೆಳಗ್ಗೆ 9 ಗಂಟೆಗೆ ದೇವರ ಉತ್ಸವ ಹಾಗೂ ಕಳಸ ಕುಂಭ ತರುವ ಕಾರ್ಯಕ್ರಮ, ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ, ಸಂಜೆ 6 ಗಂಟೆಗೆ ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದ್ದಾರೆ.

ಡಿ.13, ಒಕ್ಕಲಿಗರ ಸಂಘದ ವಾರ್ಷಿಕ ಮಹಾಸಭೆ

ಕೆ.ಆರ್.ನಗರ: ತಾಲೂಕು ಒಕ್ಕಲಿಗರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಡಿ.13ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ ತಿಳಿಸಿದರು.

ಸರ್ವ ಸದಸ್ಯರ ಸಭೆ ಜೊತೆಗೆ ಅಂದು ಬೆಳಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ರಷ್ಟು ಅಂಕ ಗಳಿಸಿದ ಒಕ್ಕಲಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅರ್ಹ ವಿದ್ಯಾರ್ಥಿಗಳು ಡಿ.10ರೊಳಗೆ ಅಂಕಪಟ್ಟಿ ಜಾತಿ ಪ್ರಮಾಣ ಪತ್ರ ಕಾಲೇಜಿನ ಧೃಢೀಕರಣ ಪತ್ರದೊಂದಿಗೆ ಸಂಘದ ಕಾರ್ಯದರ್ಶಿ ಬಿ.ಅಣ್ಣಾಜಿಗೌಡ ಅವರಿಗೆ ಅರ್ಜಿ ಸಲ್ಲಿಸಬಹುದು. ಕ್ಷೇತ್ರದಲ್ಲಿ ಈವರೆಗೆ ಚುನಾಯಿತರಾಗಿರುವ ಶಾಸಕರಲ್ಲಿ ಜನಸೇವೆ, ಅಭಿವೃದ್ಧಿ ಕೆಲಸ ಮತ್ತು ದಾನ ಮಾಡುವುದರಲ್ಲಿ ಮಾಜಿ ಶಾಸಕ ಸಾ.ರಾ.ಮಹೇಶ್ ಮೊದಲಿಗರಾಗಿದ್ದು ಅವರ ಕೊಡುಗೆ ಸಮಾಜಕ್ಕೆ ಅಪಾರ ಎಂದರು. ಪ್ರತಿಭಾ ಪುರಸ್ಕಾರ ಮತ್ತು ಸರ್ವ ಸದಸ್ಯರ ವಾರ್ಷಿಕ ಮಹಾಸಭೆಗೆ ಸಂಘದ ಎಲ್ಲಾ ಸದಸ್ಯರು ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಸಂಘದ ಕಾರ್ಯದರ್ಶಿ ಬಿ.ಅಣ್ಣಾಜಿಗೌಡ, ನಿರ್ದೇಶಕ ಎಂ.ಜೆ.ಕುಮಾರ್ ಇದ್ದರು.

ಬಸವರಾಜು ನಿಧನ




ಹುಣಸೂರು, ಡಿ.8– ಪತ್ರಕರ್ತ ಚುಕ್ಕಿ ಮಹದೇವು ಅವರ ಸಹೋದರ ಬಸವರಾಜು(55) ಶುಕ್ರವಾರ ಬೆಳಗ್ಗೆ ಬೆಂಗಳೂರಿನಲ್ಲಿ ನಿಧನರಾದರು. ಮೃತರು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾವು ಪಾಲನೆ ಮಾಡಿದ ಅರ್ಜುನ ನಮ್ಮ ಕಣ್ಮುಂದೆ ಧರೆಗುರುಳಿ ಪ್ರಾಣಬಿಟ್ಟ

ಪಶುವೈದ್ಯ ಡಾ. ರಮೇಶ್ ದುಃಖದ ನುಡಿ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಡಿ.8–ನಾವು ಪಾಲನೆ ಮಾಡುತ್ತಿದ್ದ ದಸರಾ ಆನೆ ಅರ್ಜುನ ನಮ್ಮ ಕಣ್ಣೆದುರಿಗೆ ಕಾಡಾನೆ ದಾಳಿಗೆ ನೆಲಕ್ಕೊರಗಿದ್ದು ಆಘಾತವಾಗಿದೆ ಎಂದು ಕಾರ್ಯಾಚರಣೆ ಸ್ಥಳದಲ್ಲಿದ್ದ ಪಶು ವೈದ್ಯ ಡಾ. ರಮೇಶ್ ದುಃಖಿಸಿದರು.



ಕಾಡಾನೆಯೊಂದಿಗಿನ ಕಾಳಗದಲ್ಲಿ ಅರ್ಜುನ ಮೃತಪಟ್ಟ ಘಟನೆ ಬಗ್ಗೆ 'ಮೈಸೂರು ಮಿತ್ರ'ನಿಗೆ ವಿವರಿಸಿದ ಅವರು, ಅರ್ಜುನನ ಮೇಲೆ ಕಾಡಾನೆ ದಾಳಿಯನ್ನು ನಾವು ನಿರೀಕ್ಷಿಸಿಯೇ ಇರಲಿಲ್ಲ ಹಠಾತ್ತನೆ ಈ ಆನೆ, ಅರ್ಜುನನ ಮೇಲೆ ದಾಳಿ ನಡೆಸಿದಾಗ ನಮಗೆ ಆಘಾತ ವಾಯಿತು. ಅರವಳಿಕೆ ಚುಚ್ಚುಮದ್ದು ಡಾರ್ಟ್ ಮಾಡಿದರೂ, ಕೆಂದದ ಕಾಡಾನೆ, ಅರ್ಜುನನ ಬಲಿ ಪಡೆಯಿತು.

ನಾವು ಅರ್ಜುನನನ್ನು ಕೊಂದ ಕಾಡಾನೆಯ ಸೆರೆಗಾಗಿ ಕಾರ್ಯಾಚರಣೆ ನಡೆಸಿರಲಿಲ್ಲ. ಯಸಳೂರು ಭಾಗದಲ್ಲಿ ಉಪಟಳ ನೀಡುತ್ತಿದ್ದ ಕಾಡಾನೆ ಇದು ಎಂದು ಗುರುತಿಸಿರಲಿಲ್ಲ. ವಿಕ್ರಾಂತ್ ಎಂಬ ಆನೆ ಅಲ್ಲದೇ ಉದ್ದದ ದಂತವಿರುವ ಮತ್ತೊಂದು ಆನೆಯನ್ನು ಉಪಟಳ ನೀಡುತ್ತಿದ್ದ ಆನೆಗಳೆಂದು ಗುರುತಿಸಲಾಗಿತ್ತು ಅವುಗಳನ್ನು ಸೆರೆ ಹಿಡಿಯಲು ಫೋಟೋಗಳನ್ನೂ ಕೂಡ ನಮಗೆ ನೀಡಲಾಗಿತ್ತು. ಆ ಎರಡು ಆನೆಗಳ ಸೆರೆಗಾಗಿಯೇ ನಮ್ಮ ಕಾರ್ಯಾಚರಣೆ ನಡೆದಿತ್ತು ಎಂದರು.

ಆನೆಗಳ ಸೆರೆಗಾಗಿ ನಾವು ಕಾಡಿಗೆ ಪ್ರವೇಶಿಸುತ್ತಿದ್ದಂತೆಯೇ ಪೊದೆಯೊಳಗಿಂದ ನುಗ್ಗಿ ಬಂದ ಒಂಟಿ ಸಲಗ, ಏಕಾಏಕಿ ಅರ್ಜುನನ ಕತ್ತಿನ ಭಾಗಕ್ಕೆ ಬಿರುಸಿನಿಂದ ತಿವಿಯಿತು. ಸುಮಾರು 5 ನಿಮಿಷ ಕಾಲ ಎರಡೂ ಆನೆಗಳ ನಡುವೆ ಕಾಳಗ ನಡೆಯಿತು. ಈ ಕಾಳಗದಲ್ಲಿ ಅರ್ಜುನ ಕಾಡಾನೆಯನ್ನು ಓಡಿಸಿಬಿಟ್ಟಿತ್ತು. ಈ ಸಂದರ್ಭದಲ್ಲಿ ಅರ್ಜುನನ ಮೇಲಿದ್ದ ನಾವು ಕೆಳಗೆ ಬೀಳುವಂತಾಗಿ ನಾನು ಒಂದು ಕೈಯ್ಯಲ್ಲಿ ಹಗ್ಗ ಹಾಗೂ ಮತ್ತೊಂದು ಕೈಯ್ಯಲ್ಲಿ ಅರವಳಿಕೆ ಶೂಟ್ ಮಾಡುವ ಗನ್ ಹಿಡಿದುಕೊಂಡು ಹೋರಾಡುತ್ತಿದ್ದೆ. ಅರ್ಜುನನ ಮಾವುತ ವಿನು ನನ್ನ ಶರ್ಟ್ ಹಿಡಿದು ಕೂರಿಸಿದ. ಈ ಸಂದರ್ಭದಲ್ಲಿ ಅರವಳಿಕೆ ಚುಚ್ಚುಮದ್ದು ನೀಡುವ ಗನ್‌ನ ಸೇಫ್ಟಿ ಬಟನ್ ಓಪನ್ ಆಗಿ ಟ್ರಿಗರ್ ಪ್ರೆಸ್ ಆಗಿದೆ. ಆ ವೇಳೆ ಮೇಲಕ್ಕೆ ಹಾರಿದ ಚುಚ್ಚುಮದ್ದು ಕೆಳಕ್ಕೆ ಬೀಳುವಾಗ ಮತ್ತೊಂದು ಬದಿಯಲ್ಲಿ ನಿಂತಿದ್ದ ಪ್ರಶಾಂತ್ ಕಾಲಿಗೆ ಚುಚ್ಚಿದೆ. ಇದು ನನಗೆ ಗೊತ್ತೇ ಇರಲಿಲ್ಲ. ಗನ್‌ಗೆ ಮತ್ತೊಂದು ಅರವಳಿಕೆ ಡಾರ್ಟ್ ಲೋಡ್ ಮಾಡುತ್ತಿದ್ದ ವೇಳೆ ಡಿಆರ್‌ಎಫ್‌ಓ ರಂಜನ್ ಅವರು ಕರೆ ಮಾಡಿ ಪ್ರಶಾಂತ್‌ಗೆ ಅರವಳಿಕೆ ಮದ್ದು ಡಾರ್ಟ್ ಆಗಿರುವ ಬಗ್ಗೆ ತಿಳಿಸಿದರು. ತಕ್ಷಣವೇ ಅಲ್ಲಿಗೆ ಹೋದಾಗ ಪ್ರಶಾಂತನಿಗೆ ಇನ್ನೂ ಮಂಪರು ಬಾರದೆ ತೂರಾಡುತ್ತಿದ್ದ. ತಕ್ಷಣವೇ ರಿವರ್ಸ್ ಇಂಜೆಕ್ಷನ್ ನೀಡಿದ್ದರಿಂದ ಎರಡು ನಿಮಿಷದಲ್ಲಿ ಪ್ರಶಾಂತ ಸಾಮಾನ್ಯ ಸ್ಥಿತಿಗೆ ಬಂದ.

ಆದರೆ, ಅರ್ಜುನನೊಂದಿಗಿನ ಕಾಳಗದಲ್ಲಿ ಓಡಿ ಹೋಗಿದ್ದ ಕಾಡಾನೆ ಮತ್ತೆ ಹಠಾತ್ತನೆ ಬಂದು ಅರ್ಜುನನ ಮೇಲೆರಗಿತು. ಈ ವೇಳೆ ಸಿಬ್ಬಂದಿ ಏರ್ ಫೈರ್ ಮಾಡಿದರೂ ಕೂಡ ಎರಡೂ ಆನೆಗಳ ಕಾಳಗ ಮುಂದುವರೆದೇ ಇತ್ತು. ಕಾಡಾನೆಗೆ ಅರವಳಿಕೆ ಚುಚ್ಚುಮದ್ದು ಡಾರ್ಟ್ ಮಾಡಿದರೂ ಕೂಡ ಜಗ್ಗದೇ ಅದು ಅರ್ಜುನನೊಂದಿಗೆ ಕಾಳಗ ನಡೆಸುತ್ತಲೇ ಇತ್ತು. ಕಾಡಾನೆಯ ದಾಳಿ ಭೀಕರವಾಗಿದ್ದರಿಂದ ಅರ್ಜುನ ನೆಲಕ್ಕೊರಗಿತು. ನಂತರವೂ ಕಾಡಾನೆ ಅರ್ಜುನನ್ನು ತಿವಿದು ಕೊಂದು ಹಾಕಿತು ಎಂದು ಅಂದಿನ ಘಟನೆಯನ್ನು ವಿವರಿಸಿದರು.

ಅರ್ಜುನನಿಗಾಗಲೀ, ಕಾಡಾನೆಗಾಗಲೀ ಗುಂಡೇಟು ತಗುಲಲಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ತಮ್ಮ ಸಿಬ್ಬಂದಿ ಏರ್ ಫೈರ್ ಮಾಡಿದರೆ ಹೊರತು, ಆನೆಗಳನ್ನು ಗುರಿ ಇಟ್ಟು ಫೈರ್ ಮಾಡಲೇ ಇಲ್ಲ. ಆದರೆ ಕಾಡಾನೆಯೊಂದಿಗಿನ ಕಾಳಗದ ವೇಳೆ ಅರ್ಜುನನ ಕಾಲಿಗೆ ಚೂಪಾದ ಮರದ ತುಂಡು ತಗುಲಿ ಅದರ ಉಗುರಿನ ಬಳಿ ರಕ್ತ ಕಾಣಿಸಿಕೊಂಡಿದೆ ಎಂದು ಕಾಳಗ ನಡೆಯುತ್ತಿದ್ದಾಗಲೇ ಮಾವುತ ತಿಳಿಸಿದ್ದ ಎಂದರು.

ಮಿಜೋರಾಂನಲ್ಲಿ ಮುಖ್ಯಮಂತ್ರಿಯಾಗಿ ಲಾಲ್ದುಹೋಮಾ ಪ್ರಮಾಣ ವಚನ ಸ್ವೀಕಾರ

ಐಜ್ವಾಲ್: ಝೋರಂ ಪೀಪಲ್ಸ್ ಮೂವ್‌ಮೆಂಟ್‌ನ (ಝೆಡ್ ಪಿಎಂ) ಅಧ್ಯಕ್ಷ ಲಾಲ್ದುಹೋಮಾ ಅವರು ಮಿಜೋರಾಂನ ನೂತನ ಮುಖ್ಯಮಂತ್ರಿಯಾಗಿ ಇಂದು ಪ್ರಮಾಣ ವಚನ ಸ್ವೀಕರಿಸಿದರು. ಇವರು ಈ ಅತ್ಯುನ್ನತ ಹುದ್ದೆಗೇರಿದ ಕಾಂಗ್ರೆಸ್ ಮತ್ತು ಎಂಎನ್‌ಎಫ್‌ಯೇತರ ಮೊದಲ ನಾಯಕರಾಗಿದ್ದಾರೆ.ಇಷ



ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಹರಿಬಾಬು ಕಂಭಂಪತಿ ಪ್ರತಿಜ್ಞಾ ವಿಧಿ ಬೋಧಿಸಿದರು. ಈ ವೇಳೆ 11 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. 40 ಸದಸ್ಯ ಬಲದ ಮಿಜೋರಾಂನಲ್ಲಿ ಝೆಡ್ ಪಿಎಂ ಪಕ್ಷ 27 ಸ್ಥಾನಗಳನ್ನು ಗೆದ್ದುಕೊಳ್ಳುವ ಮೂಲಕ ಬಹುಮತ ಸಾಧಿಸಿದೆ.

ಮಂಗಳವಾರ ಝೆಡ್ ಪಿಎಂ ಶಾಸಕಾಂಗ ಪಕ್ಷದ ನಾಯಕರಾಗಿ ಲಾಲ್ದುಹೋಮ ಆಯ್ಕೆಯಾಗಿದ್ದರು. ಅವರು ಮಾಜಿ ಐಪಿಎಸ್ ಅಧಿಕಾರಿಯಾಗಿದ್ದು, ಒಮ್ಮೆ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಭದ್ರತಾ ಉಸ್ತುವಾರಿಯಾಗಿ ಸೇವೆ ಸಲ್ಲಿಸಿದ್ದಾರೆ. 2018 ರಲ್ಲಿ ರಾಜಕೀಯ ಪಕ್ಷವಾಗಿ ನೋಂದಾಯಿಸಲ್ಪಟ್ಟಿತ್ತು ಝೆಡ್ ಪಿಎಂ ಪಕ್ಷ , 2019ರ ಚುನಾವಣೆಯಲ್ಲಿ 8 ಸ್ಥಾನಗಳನ್ನು ಗೆದ್ದಿತ್ತು.

ತೆಲಂಗಾಣ ಮಾಜಿ ಸಿಎಂ ಕೆ.ಚಂದ್ರಶೇಖರ್‌ರಾವ್ ಅಸ್ವಸ್ಥ;

ಹೈದರಾಬಾದ್: ತೆಲಂಗಾಣ ರಾಜ್ಯ ಮಾಜಿ ಮುಖ್ಯಮಂತ್ರಿ ಕೆ ಚಂದ್ರಶೇಖರ್ ರಾವ್ ಅವರು, ಮನೆಯಲ್ಲಿ ಕಾಲು ಜಾರಿ ಬಿದ್ದು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಜಾರಿ ಬಿದ್ದ ಪರಿಣಾಮ ಮೂಳೆ ಮುರಿತದಿಂದ ಚಂದ್ರಶೇಖರ್ ರಾವ್ ಅವರು ಬಳಲುತ್ತಿದ್ದಾರೆಂದು ವರದಿಗಳು ತಿಳಿಸಿವೆ. ಸದ್ಯ ಸೋಮಾಜಿಗುಡಾದ ಯಶೋಧಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಸಿಆರ್ ಅನಾರೋಗ್ಯದ ವಿಷಯ ತಿಳಿದ ತಕ್ಷಣ ಕುಟುಂಬಸ್ಥರೆಲ್ಲಾ ಆಸ್ಪತ್ರೆಗೆ ಧಾವಿಸಿದ್ದಾರೆ.



ಯಶೋಧಾ ಆಸ್ಪತ್ರೆಯ 9ನೇ ಮಹಡಿಯಲ್ಲಿ ಕೆಸಿಆರ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಸದ್ಯ ಕೆಸಿಆರ್ ಅವರ ಆರೋಗ್ಯ ಸ್ಥಿರವಾಗಿದೆ ಎಂದು ವರದಿಗಳಿಂದ ತಿಳಿದುಬಂದಿದೆ ಕೆಸಿಆರ್ 2014 ರಿಂದ 2023ರ ವರೆಗೆ ತೆಲಂಗಾಣ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಆದರೆ ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಸಭಾ ಚುನಾವಣೆಯಲ್ಲಿ ಕೆಸಿಆರ್ ನೇತೃತ್ವದ ಭಾರತ್ ರಾಷ್ಟ್ರ ಸಮಿತಿ (BRS) ಅನ್ನು ಕಾಂಗ್ರೆಸ್ ಸೋಲಿಸಿತು. ರೇವಂತ್ ರೆಡ್ಡಿಅವರು ತೆಲಂಗಾಣದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.